# ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರ, ಕೋಲಾರ ಜಿಲ್ಲೆ.

## " ನನ್ನೊಮ್ಮೆ ಗಮನಿಸಿ "

## ಪ್ರಥಮ ಭಾಷೆ ಕನ್ನಡ

**I ಸರಿಯಾದ ಉತ್ತರವನ್ನು ಆಯ್ಕೆಮಾಡಿ ಕ್ರಮಾಂಕ ಸಹಿತ ಉತ್ತರ ಬರೆಯಿರಿ :**

1) ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಗಳ ಸಂಖ್ಯೆ :

ಎ) 10 ಬಿ) 05 ಸಿ) 02 ಡಿ) 24

ಉತ್ತರ : ಎ) 10

2) ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಗಳ ಸಂಖ್ಯೆ

ಎ) 34 ಬಿ) 25 ಸಿ) 10 ಡಿ) 05

ಉತ್ತರ : ಬಿ) 25

3) ಙ, ಞ, ನ, ಣ, ಮ – ಕನ್ನಡ ವರ್ಣಮಾಲೆಯ ಈ ಅಕ್ಷರಗಳು

ಎ) ಸ್ವರಗಳು ಬಿ) ಅಲ್ಪಪ್ರಾಣಗಳು

ಸಿ) ಅನುನಾಸಿಕಗಳು ಡಿ) ಯೋಗವಾಹಗಳು

ಉತ್ತರ : ಸಿ) ಅನುನಾಸಿಕಗಳು

4) 'ಸಮನಾಗಿ' ಪದದಲ್ಲಿರುವ ಅವರ್ಗೀಯ ವ್ಯಂಜನ

ಎ) ಸ ಬಿ) ಮ ಸಿ) ನಾ ಡಿ) ಗಿ

ಉತ್ತರ : ಎ) ಸ

5) ಕನ್ನಡ ವರ್ಣಮಾಲೆಯಲ್ಲಿರುವ ಧೀರ್ಘಸ್ವರಗಳ ಸಂಖ್ಯೆ

ಎ) 06 ಬಿ) 07 ಸಿ) 10 ಡಿ) 25

ಉತ್ತರ : ಬಿ) 07

6) ಅನ್ವರ್ಥ ನಾಮಪದಕ್ಕೆ ಉದಾಹರಣೆ ಪದವಿದು

ಎ) ಪರ್ವತ ಬಿ) ದೊಡ್ಡದು ಸಿ) ಕಮಲಾಕ್ಷ ಡಿ) ವ್ಯಾಪಾರಿ

ಉತ್ತರ : ಡಿ) ವ್ಯಾಪಾರಿ

7) ಮೂಡಣ ದಿಕ್ಕಿನಲ್ಲಿ ಸೂರ್ಯನು ಕೆಂಪಗೆ ಪ್ರಜ್ವಲಿಸುತ್ತಿದ್ದಾನೆ – ಈ ವಾಕ್ಯದಲ್ಲಿರುವ ಮೂಡಣ ಪದವು

ಎ) ಸಂಖ್ಯೆವಾಚಕ ಬಿ) ದಿಗ್ವಾಚಕ ಸಿ) ಪರಿಮಾಣವಾಚಕ ಡಿ) ಸಂಖ್ಯೇಯವಾಚಕ

ಉತ್ತರ : ಬಿ) ದಿಗ್ವಾಚಕ

8) ಮಲೆನಾಡಿನ ನೋಟವು ನೋಡಲು ಸುಂದರವಾಗಿದೆ. – ಈ ವಾಕ್ಯದಲ್ಲಿರುವ ನೋಟ ಪದವು

ಎ) ರೂಢನಾಮ ಬಿ) ಭಾವನಾಮ ಸಿ) ದಿಗ್ವಾಚಕ ಡಿ) ಅನ್ವರ್ಥನಾಮ

ಉತ್ತರ : ಬಿ) ಭಾವನಾಮ

9) ಉತ್ತಮ ಪುರುಷ ಸರ್ವನಾಮ ಪದಕ್ಕೆ ಉದಾಹರಣೆ ಇದು

ಎ) ತಾವು, ತಾನು ಬಿ) ಅವನು, ಇವನು ಸಿ) ನಾನು, ನಾವು ಡಿ) ಯಾರು, ಏನು

ಉತ್ತರ : ಸಿ) ನಾನು, ನಾವು

10) ನೀನು, ನೀವು ಈ ಸರ್ವನಾಮಗಳು

ಎ) ಉತ್ತಮ ಪುರುಷ ಬಿ) ಮಧ್ಯಮ ಪುರುಷ ಸಿ) ಪ್ರಥಮ ಪುರುಷ ಡಿ) ಆತ್ಮಾರ್ಥಕ

DDPI Office, Kolar Dist.

ಉತ್ತರ : ಬಿ) ಮಧ್ಯಮ ಪುರುಷ

11) ಯಾವುದು, ಎಲ್ಲಿಗೆ ಸರ್ವನಾಮಗಳು ಈ ಗುಂಪಿನವು

ಎ) ಆತ್ಮಾರ್ಥಕ ಬಿ) ಪ್ರಥಮ ಪುರುಷ ಸಿ) ಪ್ರಶ್ನಾರ್ಥಕ ಡಿ) ಉತ್ತಮ ಪುರುಷ

ಉತ್ತರ : ಸಿ) ಪ್ರಶ್ನಾರ್ಥಕ

12) ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆ ಪದವಿದು

ಎ) ನಾನು ಬಿ) ನಾವು ಸಿ) ತಾವು ಡಿ) ನೀನು

ಉತ್ತರ : ಸಿ) ತಾವು

13) ಸಪ್ತಮಿ ವಿಭಕ್ತಿಯ ಕಾರಕಾರ್ಥವಿದು

ಎ) ಸಂಪ್ರಧಾನ ಬಿ) ಅಪಾಗಾನ ಸಿ) ಅಧಿಕರಣ ಡಿ) ಕರ್ಮ

ಉತ್ತರ : ಸಿ) ಅಧಿಕರಣ

14) ಕರಣಕಾರಕ ಕಾರಕಾರ್ಥದ ವಿಭಕ್ತಿ

ಎ) ಸಪ್ತಮಿ ಬಿ) ಪಂಚಮಿ ಸಿ) ಚತುರ್ಥಿ ಡಿ) ತೃತೀಯ

ಉತ್ತರ : ಡಿ) ತೃತೀಯ

15) 'ಲೋಕದೊಳ್' ಎಂಬುದು ಈ ವಿಭಕ್ತಿಯಲ್ಲಿದೆ

ಎ) ಸಪ್ತಮಿ ಬಿ) ಪ್ರಥಮ ಸಿ) ದ್ವಿತೀಯ ಡಿ) ತೃತೀಯ

ಉತ್ತರ : ಎ) ಸಪ್ತಮಿ

16) 'ಜಲದಿಂ' ಪದದಲ್ಲಿರುವ ವಿಭಕ್ತಿ

ಎ) ಪಂಚಮಿ ಬಿ) ಚತುರ್ಥಿ ಸಿ) ತೃತೀಯ ಡಿ) ದ್ವಿತೀಯ

ಉತ್ತರ : ಸಿ) ತೃತೀಯ

17) ಬಿರುಗಾಳಿಗೆ ಮರಗಳೆಲ್ಲವೂ ರಸ್ತೆಯ ಮೇಲೆ ಬಿದ್ದಿವೆ. – ಈ ವಾಕ್ಯದಲ್ಲಿರುವ ಬಿರುಗಾಳಿಗೆ ಪದವು ಈ ವಿಭಕ್ತಿಯಲ್ಲಿದೆ

ಎ) ಪ್ರಥಮ ಬಿ) ದ್ವಿತೀಯ ಸಿ) ಚತುರ್ಥಿ ಡಿ) ಷಷ್ಠಿ

ಉತ್ತರ : ಸಿ) ಚತುರ್ಥಿ

18) ಸಂಬಂಧ ಕಾರಕಾರ್ಥದ ವಿಭಕ್ತಿಯಿದು

ಎ) ಸಪ್ತಮಿ ಬಿ) ಷಷ್ಠೀ ಸಿ) ಪಂಚಮಿ ಡಿ) ಚತುರ್ಥಿ

ಉತ್ತರ : ಬಿ) ಷಷ್ಠೀ

19) ಪಂಚಮಿ ವಿಭಕ್ತಿಯ ಹೊಸಗನ್ನಡ ಪ್ರತ್ಯಯವಿದು

ಎ) ದೆಸೆಯಿಂದ ಬಿ) ಇಂದ ಸಿ) ಅತ್ತಣಿಂ ಡಿ) ಅ

ಉತ್ತರ : ಎ) ದೆಸೆಯಿಂದ

20) ಕ್ರಿಯಾಪದದ ಮೂಲರೂಪವನ್ನು ಹೀಗೆನ್ನುವರು

ಎ) ತದ್ಧಿತಾಂತ ಬಿ) ಕೃದಂತ ಸಿ) ಧಾತು ಡಿ) ಅವ್ಯಯ

ಉತ್ತರ : ಸಿ) ಧಾತು

21) ಇವುಗಳಲ್ಲಿ ಅಕರ್ಮಕ ಧಾತು

ಎ) ಕೊಡು ಬಿ) ತಿನ್ನು ಸಿ) ಉಣ್ಣು ಡಿ) ಮಲಗು

ಉತ್ತರ : ಡಿ) ಮಲಗು

22) 'ಕಟ್ಟೋಣ' ಕ್ರಿಯಾ ಪದದ ಧಾತು

DDPI Office, Kolar Dist.

ಎ) ಕಟ್ಟಿಸು ಬಿ) ಕುಟ್ಟು ಸಿ) ಕಟ್ಟೆ ಡಿ) ಕಟ್ಟು

ಉತ್ತರ : ಡಿ) ಕಟ್ಟು

23) ಸರ್ವರಿಗೂ ದೇವರು ಒಳ್ಳೆಯದನ್ನು ಮಾಡಲಿ – ಇಲ್ಲಿ ಬಳಕೆಯಾಗಿರುವ ಕ್ರಿಯಾರೂಪ

ಎ) ನಿಷೇಧಾರ್ಥಕ ಬಿ) ವಿಧ್ಯರ್ಥಕ ಸಿ) ಕರ್ತರಿ ಡಿ) ಸಂಭವನಾರ್ಥಕ

ಉತ್ತರ : ಬಿ) ವಿಧ್ಯರ್ಥಕ

24) ಇವುಗಳಲ್ಲಿ ನಿಷೇಧಾರ್ಥಕ ಕ್ರಿಯಾರೂಪಕ್ಕೆ ಉದಾಹರಣೆ

ಎ) ಮಾಡಲಿ ಬಿ) ಮಾಡನು ಸಿ) ಮಾಡಿಯಾರು ಡಿ) ಮಾಡೇವು

ಉತ್ತರ : ಬಿ) ಮಾಡನು

25) ಕ್ರಿಯೆಯಲ್ಲಿ ಸಂಶಯವನ್ನು ವ್ಯಕ್ತಪಡಿಸುವ ಕ್ರಿಯಾರೂಪಗಳು

ಎ) ವಿಧ್ಯರ್ಥಕ ಬಿ) ನಿಷೇಧ ಸಿ) ಸಂಭವನಾರ್ಥಕ ಡಿ) ಅಖ್ಯಾತ

ಉತ್ತರ : ಸಿ) ಸಂಭವನಾರ್ಥಕ

26) 'ಮೆಲ್ವಾತ' ಪದವನ್ನು ಬಿಡಿಸಿದಾಗ ಆಗುವ ಸಂಧಿ

ಎ) ಲೋಪ ಬಿ) ಆದೇಶ ಸಿ) ಯಣ್ ಡಿ)ಆಗಮ

ಉತ್ತರ : ಬಿ) ಆದೇಶ

27) ಇವುಗಳಲ್ಲಿ ಲೋಪಸಂಧಿಗೆ ಉದಾಹರಣೆ ಪದವಿದು

ಎ) ಮಾತಂತು ಬಿ) ಗಿರೀಶ ಸಿ) ಮಳೆಯಿಂದ ಡಿ) ಬೆಂಬತ್ತು

ಉತ್ತರ : ಎ) ಮಾತಂತು

28) 'ಉನ್ಮಾದ' ಪದವನ್ನು ಬಿಡಿಸಿದಾಗ ಆಗುವ ಸಂಧಿ

ಎ) ಯಣ್ ಸಂಧಿ ಬಿ) ಜಸ್ತ್ವಸಂಧಿ ಸಿ) ಅನುನಾಸಿಕ ಸಂಧಿ ಡಿ) ವೃದ್ಧಿ ಸಂಧಿ

ಉತ್ತರ : ಸಿ) ಅನುನಾಸಿಕ ಸಂಧಿ

29) 'ಜಾತ್ಯಾತೀತ' ಪದವು ಈ ಸಂಧಿಗೆ ಉದಾಹರಣೆ

ಎ) ವೃದ್ಧಿಸಂಧಿ ಬಿ) ಯಣ್‌ಸಂಧಿ ಸಿ) ಶ್ಚುತ್ವಸಂಧಿ ಡಿ) ಸವರ್ಣದೀರ್ಘಸಂಧಿ

ಉತ್ತರ : ಬಿ) ಯಣ್‌ಸಂಧಿ

30) 'ಶರಚ್ಚಂದ್ರ' ಪದವನ್ನು ಬಿಡಿಸಿದಾಗ ಆಗುವ ಸಂಧಿ

ಎ) ಶ್ಚುತ್ವ ಬಿ) ಜಸ್ತ್ವ ಸಿ) ಅನುನಾಸಿಕ ಡಿ) ವೃದ್ಧಿ

ಉತ್ತರ : ಎ) ಶ್ಚುತ್ವ

31) ಇವುಗಳಲ್ಲಿ ವೃದ್ಧಿಸಂಧಿಗೆ ಉದಾಹರಣೆ ಪದವಿದು

ಎ) ಬೆಂಬತ್ತು ಬಿ) ದೇವೇಂದ್ರ ಸಿ) ಜನೈಕ್ಯ ಡಿ) ತನ್ಮಯ

ಉತ್ತರ : ಸಿ) ಜನೈಕ್ಯ

32) 'ಮೂಗಾವುದ' ಪದವನ್ನು ವಿಗ್ರಹಿಸಿದಾಗ ಆಗುವ ಸಮಾಸ

ಎ) ತತ್ಪುರುಷ ಬಿ) ಕರ್ಮಧಾರಯ ಸಿ) ದ್ವಿಗು ಡಿ) ದ್ವಂದ್ವ

ಉತ್ತರ : ಡಿ) ದ್ವಿಗು

33) 'ಇಮ್ಮಾವು' ಪದವನ್ನು ವಿಗ್ರಹಿಸಿದಾಗ ಆಗುವ ಸಮಾಸ

ಎ) ಗಮಕ ಬಿ) ಕ್ರಿಯಾ ಸಿ) ಕರ್ಮಧಾರಯ ಡಿ) ದ್ವಿಗು

ಉತ್ತರ : ಸಿ) ಕರ್ಮಧಾರಯ

DDPI Office, Kolar Dist.

34) ಇವುಗಳಲ್ಲಿ ಅಂಶಿ ಸಮಾಸಕ್ಕೆ ಉದಾಹರಣೆ ಪದವಿದು

ಎ) ನೇಯ್ದು ವಸ್ತ್ರ  ಬಿ) ಕೇಸಕ್ಕಿ  ಸಿ) ಅಂಗೈ  ಡಿ) ಕಣ್ದೆರೆ

ಉತ್ತರ : ಸಿ) ಅಂಗೈ

35) 'ಚಕ್ರಪಾಣಿ' ಪದವು ಈ ಸಮಾಸಕ್ಕೆ ಉದಾಹರಣೆ

ಎ) ಬಹುವ್ರೀಹಿ  ಬಿ) ಅಂಶಿ  ಸಿ) ಕ್ರಿಯಾ  ಡಿ) ದ್ವಂದ್ವ

ಉತ್ತರ : ಎ) ಬಹುವ್ರೀಹಿ

36) ದ್ವಂದ್ವ ಸಮಾಸಕ್ಕೆ ಉದಾಹರಣೆ ಪದವಿದು

ಎ) ಮುಖಂಡ  ಬಿ) ಭೀಮಾರ್ಜುನರು  ಸಿ) ಆಕಲ್ಲು  ಡಿ) ಕಡೆಗಣ್ಣು

ಉತ್ತರ : ಬಿ) ಭೀಮಾರ್ಜುನರು

37) 'ತಲೆನೋವು' ಪದವನ್ನು ವಿಗ್ರಹಿಸಿ ದಾಗ ಆಗುವ ಸಮಾಸ

ಎ) ಕರ್ಮಧಾರಯ  ಬಿ) ದ್ವಿಗು  ಸಿ) ತತ್ಪುರುಷ  ಡಿ) ಕ್ರಿಯಾ

ಉತ್ತರ : ಸಿ) ತತ್ಪುರುಷ

38) 'ಕೇಸಕ್ಕಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಎ) ಕ್ರಿಯಾ  ಬಿ) ದ್ವಂದ್ವ  ಸಿ) ಅಂಶಿ  ಡಿ) ಕರ್ಮಧಾರಯ

ಉತ್ತರ : ಡಿ) ಕರ್ಮಧಾರಯ

39) ಇವುಗಳಲ್ಲಿ ಪಾರ್ಸಿಯಿಂದ ಕನ್ನಡ ಭಾಷೆಗೆ ಬಂದ ಪದ

ಎ) ಅಸಲು  ಬಿ) ಹುಕುಂ  ಸಿ) ಅಬಕಾರಿ  ಡಿ) ಶಾಮೀಲು

ಉತ್ತರ : ಸಿ) ಅಬಕಾರಿ

40) ಗ್ರೀಕ್ ಮತ್ತು ರೋಮನ್ ಭಾಷೆಗಳಿಂದ ಕನ್ನಡ ಭಾಷೆಗೆ ಬಂದ ಪದ

ಎ) ದಿನಾರ  ಬಿ) ಕಚೇರಿ  ಸಿ) ರಸ್ತೆ  ಡಿ)ಚೌಕಾಶಿ

ಉತ್ತರ : ಎ) ದಿನಾರಾ

41) 'ತಂಬಾಕು' ಪದವು ಕನ್ನಡ ಭಾಷೆಗೆ ಈ ಭಾಷೆಯಿಂದ ಬಂದಿದೆ

ಎ) ಪಾರ್ಸಿ  ಬಿ) ಅರಬ್ಬಿ  ಸಿ) ಪೋರ್ಚುಗೀಸ್  ಡಿ) ಹಿಂದುಸ್ತಾನಿ

ಉತ್ತರ : ಸಿ) ಪೋರ್ಚುಗೀಸ್

42) 'ಅಜಮಾಯಿಸಿ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ

ಎ) ಇಂಗ್ಲಿಷ್  ಬಿ) ಗ್ರೀಕ್  ಸಿ) ಉರ್ದು  ಡಿ) ಪಾರ್ಸಿ

ಉತ್ತರ : ಡಿ) ಪಾರ್ಸಿ

43) ಉರ್ದುವಿನಿಂದ ಕನ್ನಡಕ್ಕೆ ಬಂದ ಪದ

ಎ) ಕಿಮ್ಮತ್ತು  ಬಿ) ಇನಾಮು  ಸಿ) ಗದ್ಯಾಣ  ಡಿ) ತಕರಾರು

ಉತ್ತರ : ಬಿ) ಕಿಮ್ಮತ್ತು

44) ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯಗಳು

ಎ) ಭಾವಸೂಚಕ  ಬಿ) ಅನುಕರಣಾವ್ಯಯ  ಸಿ) ಕ್ರಿಯಾರ್ಥಕ  ಡಿ) ಸಾಮಾನ್ಯ ಅವ್ಯಯ

ಉತ್ತರ : ಡಿ) ಸಾಮಾನ್ಯ ಅವ್ಯಯ

45) ನಾಮಪದ ಕ್ರಿಯಾಪದಗಳಂತೆ ಲಿಂಗ ವಚನ ವಿಭಕ್ತಿಗಳಿಂದ ರೂಪ ಬೇಧವನ್ನು ಹೊಂದದೆ ಏಕರೂಪವಾಗಿರುವ ಪದಗಳು

ಎ) ವಿಭಕ್ತಿಗಳು  ಬಿ) ಅವ್ಯಯಗಳು  ಸಿ) ಅಖ್ಯಾತ ಪ್ರತ್ಯಯ  ಡಿ) ಪುರುಷ ವಾಚಕಗಳು

DDPI Office, Kolar Dist.

ಉತ್ತರ : ಬಿ) ಅವ್ಯಯಗಳು

46) ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳು

ಎ) ಸಾಮಾನ್ಯ ಬಿ) ಸಂಬಂಧಾರ್ಥಕ ಸಿ) ಭಾವಸೂಚಕ ಡಿ) ಕ್ರಿಯಾರ್ಥಕ

ಉತ್ತರ : ಡಿ) ಕ್ರಿಯಾರ್ಥಕ

47) ಅದುವೇ ನನ್ನ ಮನೆ – ಈ ವಾಕ್ಯದಲ್ಲಿ ಪ್ರಯೋಗವಾಗಿರುವ ಅವ್ಯಯ

ಎ) ಅವಧಾರಣಾರ್ಥಕ ಬಿ) ಕ್ರಿಯಾರ್ಥಕ ಸಿ) ಸಾಮಾನ್ಯ ಡಿ) ಅನುಕರಣ

ಉತ್ತರ : ಎ) ಅವಧಾರಣಾರ್ಥಕ

48) ಸಂಬಂಧಾರ್ಥಕಾವ್ಯಯಕ್ಕೆ ಉದಾಹರಣೆ ಪದವಿದು

ಎ) ಅವಳೇ ಬಿ) ಚೆನ್ನಾಗಿ ಸಿ) ಆದ್ದರಿಂದ ಡಿ) ಥಳಥಳ

ಉತ್ತರ : ಸಿ) ಆದ್ದರಿಂದ

49) ಆಹಾ! ಭಳಿರೇ! ಅಯ್ಯೋ! ಮುಂತಾದ ಅವ್ಯಯಗಳು ವಿಧಕ್ಕೆ ಸೇರುತ್ತವೆ

ಎ) ಸಾಮಾನ್ಯಾರ್ಥ ಬಿ) ಅವಧಾರಣಾರ್ಥ ಸಿ) ಅರ್ಥಕ ಡಿ) ಭಾವಸೂಚಕ

ಉತ್ತರ : ಡಿ) ಭಾವಸೂಚಕ

50) ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯ

ಎ) ಸಂಯೋಜಿತ ವಾಕ್ಯ ಬಿ) ಮಿಶ್ರ ವಾಕ್ಯ ಸಿ) ವಿಶೇಷ ವಾಕ್ಯ ಡಿ) ಸಾಮಾನ್ಯ ವಾಕ್ಯ

ಉತ್ತರ : ಡಿ) ಸಾಮಾನ್ಯ ವಾಕ್ಯ

51) ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣ ಅಭಿಪ್ರಾಯದ ವಾಕ್ಯ

ಎ) ಸಂಯೋಜಿತ ವಾಕ್ಯ ಬಿ) ಸಾಮಾನ್ಯ ವಾಕ್ಯ ಸಿ) ಮಿಶ್ರ ವಾಕ್ಯ ಡಿ) ಪ್ರಶ್ನಾರ್ಥಕ ವಾಕ್ಯ

ಉತ್ತರ : ಎ) ಸಂಯೋಜಿತ ವಾಕ್ಯ

52) ಮಲೇರಿಯಾ ಕರ್ನಾಟಕದಲ್ಲೆಲ್ಲ ಹಬ್ಬಿ ಜನರ ಆರೋಗ್ಯದ ಮೇಲೆ ಪರಿಣಾಮ ಬೀರಿತು.– ಈ ವಾಕ್ಯವು

ಎ) ಮಿಶ್ರ ವಾಕ್ಯ ಬಿ) ಸಂಯೋಜಿತ ಸಿ) ಸಾಮಾನ್ಯ ಡಿ) ಅಲಂಕಾರಿಕ

ಉತ್ತರ : ಸಿ) ಸಾಮಾನ್ಯ ವಾಕ್ಯ

53) ಮಕ್ಕಳು ಹಾಲನ್ನು ಕುಡಿದರು ಆದ್ದರಿಂದ ದಷ್ಟಪುಷ್ಟವಾಗಿ ಬೆಳೆದು ಆರೋಗ್ಯದಿಂದ ಇದ್ದಾರೆ ಇಲ್ಲಿ ಪ್ರಯೋಗವಾಗಿರುವ ವಾಕ್ಯ

ಎ)ಸಾಮಾನ್ಯ ಬಿ) ಸಂಯೋಜಿತ ಸಿ) ಮಿಶ್ರ ಡಿ) ಪ್ರಶ್ನಾರ್ಥಕ

ಉತ್ತರ : ಬಿ) ಸಂಯೋಜಿತ

54) ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅದು

ಎ) ಮಿಶ್ರ ವಾಕ್ಯ ಬಿ) ವಿಶೇಷ ವಾಕ್ಯ ಸಿ) ಸಾಮಾನ್ಯ ವಾಕ್ಯ ಡಿ) ಸಂಯೋಜಿತ ವಾಕ್ಯ

ಉತ್ತರ : ಎ) ಮಿಶ್ರ ವಾಕ್ಯ

55) ಏನಾದರೂ ಮಾಡಿ ಊರಿಗೆ ಬಸ್ಸನ್ನು ಹಾಕಿಸುವಂತೆ ಗ್ರಾಮಸ್ಥರೆಲ್ಲರೂ ನಿರ್ಧರಿಸಿದರು ಇವರೆಲ್ಲರ ಒತ್ತಾಯಕ್ಕೆ ಸರ್ಕಾರ ಒಪ್ಪಿದೆ ಎಂಬ ವಿಷಯವನ್ನು ಕೇಳಿ ಗ್ರಾಮಸ್ಥರೆಲ್ಲರೂ ಸಂತಸಪಟ್ಟರು ಇಲ್ಲಿ ಬಳಕೆಯಾಗಿರುವ ವಾಕ್ಯ

ಎ) ಸಾಮಾನ್ಯ ಬಿ) ಮಿಶ್ರವಾಕ್ಯ ಸಿ) ಸಂಯೋಜಿತ ಡಿ) ಪ್ರಶ್ನಾರ್ಥಕ

ಉತ್ತರ : ಬಿ) ಮಿಶ್ರ ವಾಕ್ಯ

56) ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಉಪವಾಕ್ಯಗಳು ಮುಗಿದಾಗಲೆಲ್ಲಾ ಬಳಸುವ ಚಿಹ್ನೆ

ಎ) ಪ್ರಶ್ನಾರ್ಥಕ ಬಿ) ಅರ್ಧವಿರಾಮ ಸಿ) ಅಲ್ಪವಿರಾಮ ಡಿ) ಉದ್ಧರಣ

ಉತ್ತರ : ಬಿ) ಅರ್ಧವಿರಾಮ

DDPI Office, Kolar Dist.

57) ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ

ಎ) ವಾಕ್ಯವೇಷ್ಟನಾ ಬಿ) ವಿವರಣಾತ್ಮಕ ಸಿ) ಆವರಣ ಡಿ) ಉದ್ಧರಣ

ಉತ್ತರ : ಡಿ) ಉದ್ಧರಣ

58) ಕನ್ನಡ ಭಾಷೆಯಲ್ಲಿ 'ಇಂಗ್ಲಿಷ್' ಭಾಷೆಗಳ ಪದಗಳನ್ನು ಬಳಸಲಾಗುತ್ತದೆ. – ಇಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ

ಎ) ಪೂರ್ಣವಿರಾಮ ಬಿ) ಅಲ್ಪವಿರಾಮ ಸಿ) ವಾಕ್ಯವೇಷ್ಠನಾ ಡಿ) ಉದ್ಧರಣ

ಉತ್ತರ : ಸಿ) ವಾಕ್ಯವೇಷ್ಠನಾ

59) ಒಂದು ಪದವನ್ನು ವಾಕ್ಯವನ್ನು ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನು ವಾಕ್ಯವನ್ನು ಹೇಳುವಾಗ ಬಳಸುವ ಚಿಹ್ನೆ

ಎ) ವಿವರಣಾತ್ಮಕ ಬಿ) ಆವರಣ ಸಿ) ಉದ್ಧರಣ ಡಿ) ಪ್ರಶ್ನಾರ್ಥಕ

ಉತ್ತರ : ಬಿ) ಅವರಣ

60) ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಬಳಸುವ ಚಿಹ್ನೆ

ಎ) ಪೂರ್ಣವಿರಾಮ ಬಿ) ಅಲ್ಪವಿರಾಮ ಸಿ) ಅರ್ಧವಿರಾಮ ಡಿ) ಭಾವಸೂಚಕ

ಉತ್ತರ : ಎ) ಪೂರ್ಣವಿರಾಮ

61) ಅಯ್ಯೋ ಹೀಗಾಗಬಾರದಿತ್ತು – ಇಲ್ಲಿ ಬಳಸಬೇಕಾದ ಲೇಖನ ಚಿಹ್ನೆ

ಎ) ಭಾವಸೂಚಕ ಚಿಹ್ನೆ ಬಿ) ಉದ್ಧರಣ ಚಿಹ್ನೆ ಸಿ) ಪ್ರಶ್ನಾರ್ಥಕ ಚಿಹ್ನೆ ಡಿ) ವಿವರಣಾತ್ಮಕ ಚಿಹ್ನೆ

ಉತ್ತರ : ಎ) ಭಾವಸೂಚಕ ಚಿಹ್ನೆ

62) ತಾವು ಕಡಿಮೆ ಮಾತನಾಡಿದ್ದೀರಿ ಹೆಚ್ಚು ಕೆಲಸ ಮಾಡಿದ್ದೀರಿ – ಇಲ್ಲಿ ಬಳಕೆಯಾಗಬೇಕಾದ ಲೇಖನ ಚಿಹ್ನೆ

ಎ) ಅರ್ಧವಿರಾಮ ಬಿ) ಅಲ್ಪವಿರಾಮ ಸಿ) ವಿವರಣಾತ್ಮಕ ಡಿ) ವಾಕ್ಯವೇಷ್ಟನ

ಉತ್ತರ : ಎ) ಅರ್ಧವಿರಾಮ

63) ಕೆಳಗಿನವುಗಳಲ್ಲಿ ತದ್ಧಿತಾಂತ ನಾಮ ಪದಕ್ಕೆ ಉದಾಹರಣೆ

ಎ) ಚೆಲುವಿಕೆ ಬಿ) ಕನ್ನಡಿತಿ ಸಿ) ಚಂದ್ರನಂತೆ ಡಿ) ಜಾಣತನ

ಉತ್ತರ : ಬಿ) ಕನ್ನಡಿತಿ

64) 'ಬಳೆಗಾರ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ

ಎ) ತದ್ಧಿತಾಂತಾ ವ್ಯಯ ಬಿ) ತದ್ಧಿತಾಂತ ಭಾವನಾಮ

ಸಿ) ತದ್ಧಿತಾಂತ ನಾಮ ಡಿ) ಕೃದಂತ ನಾಮ

ಉತ್ತರ : ಸಿ) ತದ್ಧಿತಾಂತ ನಾಮ

65) 'ಕನ್ನಡಿಗ' ಪದದಲ್ಲಿರುವ ತದ್ಧಿತ ಪ್ರತ್ಯಯ

ಎ) ಕನ್ನಡ ಬಿ) ಅಡಿಗ ಸಿ) ಇಗ ಡಿ) ಗ

ಉತ್ತರ : ಸಿ) ಇಗ

66) ಇವುಗಳಲ್ಲಿ ತದ್ಧಿತಾಂತಾವ್ಯಯ ಅಲ್ಲದ್ದು

ಎ) ಅಂತೆ ಬಿ) ವೊಲ್ ಸಿ) ವರೆಗೆ ಡಿ) ಇಕೆ

ಉತ್ತರ : ಡಿ) ಇಕೆ

67) 'ಶಾಲೆಯವರೆಗೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ

ಎ) ತದ್ಧಿತಾಂತ ನಾಮ ಬಿ) ತದ್ಧಿತಾಂತ ಭಾವನಾಮ

ಸಿ) ತದ್ಧಿತಾಂತ ಅವ್ಯಯ ಡಿ) ಕೃದಂತಾವ್ಯಯ

ಉತ್ತರ : ಸಿ) ತದ್ಧಿತಾಂತ ಅವ್ಯಯ

DDPI Office, Kolar Dist.

68) ತನ – ಇಕೆ – ಪು – ಮೆ ಈ ಪ್ರತ್ಯಯಗಳು

ಎ) ತದ್ಧಿತಾಂತ ನಾಮ ಬಿ) ತದ್ಧಿತಾಂತ ಭಾವನಾಮ

ಸಿ) ತದ್ಧಿತಾಂತ ಅವ್ಯಯ ಡಿ) ಕೃದಂತ ಭಾವನಾಮ

ಉತ್ತರ : ಬಿ) ತದ್ಧಿತಾಂತ ಭಾವನಾಮ

69) ವರ್ತಮಾನ ಕೃದಂತಕ್ಕೆ ಉದಾಹರಣೆ ಪದವಿದು

ಎ) ಬಾಳಿದ ಬಿ) ಬರೆಯದ ಸಿ) ಓಡುವ ಡಿ) ಬರೆದ

ಉತ್ತರ : ಸಿ) ಓಡುವ

70) ಇವುಗಳಲ್ಲಿ ಕೃದಂತ ಭಾವನಾಮಕ್ಕೆ ಉದಾಹರಣೆ ಇದು

ಎ) ಉಡುಗೆ ಬಿ) ತಿನ್ನದ ಸಿ) ಮಾಡಲಿಕ್ಕೆ ಡಿ) ಮಾಡದೆ

ಉತ್ತರ : ಎ) ಉಡುಗೆ

71) ಆದೆ, ಅಲ್ಲ, ಉತ್ತ, ಆಲಿಕೆ ಪ್ರತ್ಯಯಗಳು ಇವುಗಳಿಗೆ ಉದಾಹರಣೆ

ಎ) ತದ್ಧಿತಾಂತ ಅವ್ಯಯ ಬಿ) ಕೃದಂತ ಭಾವನಾಮ

ಸಿ) ಕೃದಂತಾವ್ಯಯ ಡಿ) ಕೃದಂತ ನಾಮ

ಉತ್ತರ : ಸಿ) ಕೃದಂತಾವ್ಯಯ

72) ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ ಪದವಿದು

ಎ) ಅಂಜಿಕೆ ಬಿ) ಚೆಲುವಿಕೆ ಸಿ) ನೋಟ ಡಿ) ತೊಡುಗೆ

ಉತ್ತರ : ಬಿ) ಚೆಲುವಿಕೆ

73) ಕೃದಂತ ಭಾವನಾಮಕ್ಕೆ ಉದಾಹರಣೆ ಪದವಿದು

ಎ) ನೋಟ ಬಿ) ಮಾಡದ ಸಿ) ಮಾಡಲಿಕ್ಕೆ ಡಿ) ಬರೆದ

ಉತ್ತರ : ಎ) ನೋಟ

74) ಗುರು– ಲಘು ಮೂರಿರುವ ಗಣಗಳು

ಎ) ಭ–ಯಗಣ ಬಿ) ಸ–ತಗಣ ಸಿ) ಜ–ರಗಣ ಡಿ) ಮ–ನಗಣ

ಉತ್ತರ : ಡಿ) ಮ–ನಗಣ

75) ಗುರು–ಲಘು ನಡುವಿರುವ ಗಣಗಳು

ಎ) ಭ–ಯಗಣ ಬಿ) ಮ–ನಗಣ ಸಿ) ಜ–ರಗಣ ಡಿ) ಸ–ತಗಣ

ಉತ್ತರ : ಸಿ) ಜ–ರಗಣ

76) ಗುರು–ಲಘು ಕೊನೆ ಕೊನೆಯಲ್ಲಿ ಬರುವ ಗಣಗಳು

ಎ) ಸ–ತಗಣ ಬಿ) ಭ–ಯಗಣ ಸಿ) ಮ–ನಗಣ ಡಿ) ಜ–ರಗಣ

ಉತ್ತರ : ಎ) ಸ–ತಗಣ

77) ಗುರು ಲಘು ಮೊದಲಲ್ಲಿ ಬರುವ ಗಣಗಳು

ಎ) ಜ–ರಗಣ ಬಿ)ಸ–ತಗಣ ಸಿ) ಮ–ನಗಣ ಡಿ) ಭ–ಯಗಣ

ಉತ್ತರ : ಡಿ) ಭ–ಯಗಣ

78) 'ಕೊಕ್ಕರೆ' ಪದವು ಈ ಗಣಕ್ಕೆ ಉದಾಹರಣೆ

ಎ) ಭಗಣ ಬಿ) ರಗಣ ಸಿ) ತಗಣ ಡಿ) ಜಗಣ

ಉತ್ತರ : ಎ) ಭಗಣ

DDPI Office, Kolar Dist.

79) ಕಾವ್ಯವನ್ನು ಓದುವಾಗ ಅರ್ಥಕ್ಕೆ ಲೋಪಬಾರದೆ ನಿಲ್ಲಿಸುವ ಸ್ಥಳ

ಎ) ಪ್ರಾಸ ಬಿ) ಗಣ ಸಿ)ಯತಿ ಡಿ) ಮಾತ್ರೆ

ಉತ್ತರ : ಸಿ) ಯತಿ

80) ಪ್ರಾಸಾಕ್ಷರದ ಹಿಂದಿನ ಸ್ವರವು ದೀರ್ಘವಾಗಿರುವ ಪ್ರಾಸ

ಎ) ಗಜ ಪ್ರಾಸ ಬಿ) ಪಯಪ್ರಾಸ ಸಿ) ಸಿಂಹಪ್ರಾಸ ಡಿ) ಅಜಪ್ರಾಸ

ಉತ್ತರ : ಎ) ಗಜ ಪ್ರಾಸ

81) ನಿರೋಷ್ಠ್ಯ, ಏಕಾಕ್ಷರ, ದ್ವ್ಯಕ್ಷರ, ತಾಲವ್ಯ ಪ್ರಕಾರಗಳಿಗಿರುವ ಅಲಂಕಾರ

ಎ) ಅನುಪ್ರಾಸ ಬಿ) ಯಮಕ ಸಿ) ಚಿತ್ರಕವಿತ್ವ ಡಿ) ಛೇಕಾನುಪ್ರಾಸ

ಉತ್ತರ : ಸಿ) ಚಿತ್ರಕವಿತ್ವ

82) ಎರಡೆರಡು ವ್ಯಂಜನಗಳು ಪುನರಾವರ್ತನೆಗೊಳ್ಳುವ ಅಲಂಕಾರ

ಎ) ಯಮಕ ಬಿ) ಛೇಕಾನುಪ್ರಾಸ ಸಿ) ವೃತ್ತ್ಯಾನುಪ್ರಾಸ ಡಿ) ಚಿತ್ರಕವಿತ್ವ

ಉತ್ತರ : ಬಿ) ಛೇಕಾನುಪ್ರಾಸ

83) ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಮತ್ತೆ ಮತ್ತೆ ಬಂದರೆ

ಎ) ಛೇಕಾನುಪ್ರಾಸ ಬಿ) ಚಿತ್ರಕವಿತ್ವ ಸಿ) ವೃತ್ತ್ಯಾನುಪ್ರಾಸ ಡಿ) ಯಮಕ

ಉತ್ತರ : ಸಿ) ವೃತ್ತ್ಯಾನುಪ್ರಾಸ

84) 'ಶೋಕದುಲ್ಕೆ' ಇಲ್ಲಿ ಬಳಕೆಯಾಗಿರುವ ಅಲಂಕಾರ

ಎ) ರೂಪಕ ಬಿ) ಉಪಮಾ ಸಿ) ಶ್ಲೇಷ ಡಿ) ದೃಷ್ಟಾಂತ

ಉತ್ತರ : ಎ) ರೂಪಕ

85) ವಿಶೇಷ ವಾಕ್ಯ ಸಾಮಾನ್ಯ ವಾಕ್ಯವನ್ನು ಸಾಮಾನ್ಯ ವಾಕ್ಯ ವಿಶೇಷ ವಾಕ್ಯವನ್ನು ಸಮರ್ಥನೆ ಮಾಡುವ ಅಲಂಕಾರ

ಎ) ಅರ್ಥಾಂತರನ್ಯಾಸ ಬಿ) ದೃಷ್ಟಾಂತ ಸಿ) ಶ್ಲೇಷ ಡಿ) ಉತ್ಪ್ರೇಕ್ಷೆ

ಉತ್ತರ : ಎ) ಅರ್ಥಾಂತರನ್ಯಾಸ

86) ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸುವ ಅಲಂಕಾರ

ಎ) ಉಪಮಾ ಬಿ) ರೂಪಕ ಸಿ) ಉತ್ಪ್ರೇಕ್ಷೆ ಡಿ) ಶ್ಲೇಷಾ

ಉತ್ತರ : ಬಿ) ರೂಪಕ

87) ಎರಡು ಬೇರೆ ಬೇರೆ ವಾಕ್ಯಗಳು ಅರ್ಥ ಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವ ಕಂಡುಬರುವ ಅಲಂಕಾರ

ಎ) ಉತ್ಪ್ರೇಕ್ಷೆ ಬಿ) ದೃಷ್ಟಾಂತ ಸಿ) ಶ್ಲೇಷಾ ಡಿ) ಅರ್ಥಾಂತರನ್ಯಾಸ

ಉತ್ತರ : ಬಿ) ದೃಷ್ಟಾಂತ

88) ಸೀತೆಯ ಮುಖ ಕಮಲವೋ ಎಂಬಂತೆ ಅರಳಿದೆ ಇಲ್ಲಿ ಬಳಕೆಯಾಗಿರುವ ಅಲಂಕಾರ

ಎ) ಉಪಮಾ ಬಿ) ರೂಪಕ ಸಿ) ಉತ್ಪ್ರೇಕ್ಷಾ ಡಿ) ಶ್ಲೇಷ

ಉತ್ತರ : ಸಿ) ಉತ್ಪ್ರೇಕ್ಷಾ

**II. ಮೊದಲೆರಡು ಪದಗಳ ಸಂಬಂಧದಂತೆ ಮೂರನೇ ಪದದ ಸಂಬಂಧ ಪದ ಬರೆಯಿರಿ**

1) ಚೀರ : ಸೀರೆ :: ದಿಟ್ಟಿ : ------- ಉತ್ತರ : ದೃಷ್ಟಿ

2) ಯಶ : ಜಸ :: ಪಟ್ಟಣ : ------- ಉತ್ತರ : ಪತ್ತನ

3) ಭೀಯಾ : ವ್ಯಯ :: ಕೋಕಿಲ : ------- ಉತ್ತರ : ಕೋಗಿಲೆ

4) ಬ್ರಹ್ಮ : ಬೊಮ್ಮ :: ಚಂದ್ರ : ------- ಉತ್ತರ : ಚಂದಿರ

DDPI Office, Kolar Dist.

5) ಇಸವಾಸ : ವಿಶ್ವಾಸ :: ಕಳುವ್ಯಾರೆ : ---------- ಉತ್ತರ : ಕಳುಹಿಸಿದ್ದಾರೆ

6) ಮ್ಯಾಗ : ಮೇಲೆ :: ಸಕ್ಕಾರಿ : ------- ಉತ್ತರ : ಸಕ್ಕರೆ

7) ಪ್ರಸಾದ : ಹಸಾದ :: ಬಂಜೆ : ------- ಉತ್ತರ : ವಂಧ್ಯಾ

8) ಪ್ರತಿಹಾರಿ : ಪಡಿಯರ :: ಸಂದೆಯ : ------- ಉತ್ತರ : ಸಂದೇಹ

9) ಸ–ತ–ತ–ನ–ರ–ರ : ಮಹಾಸ್ರಗ್ಧರಾ :: ನ–ಜ–ಭ–ಜ–ಜ–ಜ–ರ : ---- ಉತ್ತರ : ಚಂಪಕಮಾಲಾವೃತ್ತ

10) ಭಾಮಿನಿ ಷಟ್ಪದಿ : 102 :: ವಾರ್ಧಕ ಷಟ್ಪದಿ : --- ಉತ್ತರ : 144

11) ವಾಜಿ : ಕುದುರೆ :: ವಾಸಿ : ------- ಉತ್ತರ : ಪ್ರತಿಜ್ಞೆ

12) ಅಣುಗಾಳ್ : ಗೆಳೆಯ :: ಅಣುಗದಮ್ಮ : ----- ಉತ್ತರ : ತಮ್ಮ

13) ವನದಿ : ಸಮುದ್ರ :: ಮಕಮಲ್ಲು : ------ ಉತ್ತರ : ನಯವಾದ ಬಟ್ಟೆ

14) ದೃಗುಜಲ : ಕಣ್ಣೀರು :: ಉರವಣಿಸು : ------- ಉತ್ತರ : ಹೆಚ್ಚಾಗು

15) ಅಗಸಿ : ಹೆಬ್ಬಾಗಿಲು :: ಮಸಲತ್ತು : ------- ಉತ್ತರ : ಪಿತೂರಿ

16) ಕಂದಿದ : ಮಸುಕಾದ :: ಕಲುಷಿತ : ---- ಉತ್ತರ : ಮಲಿನ

17) ಕೂರ್ಮೆ : ಸ್ನೇಹ :: ತಸ್ಕರ : ----- ಉತ್ತರ : ಕಳ್ಳ

18) ಪಂಜ : ಹುಲಿಯ ಅಂಗಾಲು :: ಲಾಂಛನ : ------ ಉತ್ತರ : ಗುರುತು, ಚಿಹ್ನೆ

19) ಆವಾಹಿಸು : ಮೈಮೇಲೆ ಬರುವುದು :: ಕ್ಷೋಬೆ : ---- ಉತ್ತರ : ತಳಮಳ

20) ಹರಿಕಾರ : ಮುಂದಾಳು :: ಸುಸಂಗತ : ----- ಉತ್ತರ : ಯೋಗ್ಯವಾದ

21) ಹವಣು : ಸಿದ್ಧತೆ :: ಬನ್ನ : ----- ಉತ್ತರ : ಕಷ್ಟ

22) ಹತಾಶೆ : ನಿರಾಸೆ :: ಕಿವಿಗಡಚಿಕ್ಕು : --------- ಉತ್ತರ : ಕಿವಿಗೆ ಕರ್ಕಶವಾಗು

23) ಕೆನೆಮೊಸರು : ಜೋಡಿ ನುಡಿ :: ನಮೋ ನಮೋ : ---- ಉತ್ತರ : ದ್ವಿರುಕ್ತಿ

24) ಜುಳು ಜುಳು : ಅನುಕರಣಾವ್ಯಯ :: ಧೀರ ಶೂರ :---- ಉತ್ತರ : ಜೋಡಿ ನುಡಿ

25) ಮೊತ್ತ ಮೊದಲು : ಮೊದಲು ಮೊದಲು :: ಕಟ್ಟಕಡೆಗೆ : ---- ಉತ್ತರ : ಕಡೆಗೆ ಕಡೆಗೆ

26) ಬಟ್ಟಬಯಲು : ದ್ವಿರುಕ್ತಿ :: ಹುಳಹುಪ್ಪಡಿ :: ----- ಉತ್ತರ : ಜೋಡಿನುಡಿ

27) ಸತಿಪತಿ : ಜೋಡಿನುಡಿ :: ಈಗೀಗ : ----- ಉತ್ತರ : ದ್ವಿರುಕ್ತಿ

DDPI Office, Kolar Dist.

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :–**

1. ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು ?

ಉ : ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಬೇಕಾದ ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.

2. ಸೈನ್ಯದಲ್ಲಿದ್ದ ವೈದ್ಯನ ಹೆಸರೇನು ?

ಉ : ಸೈನ್ಯದಲ್ಲಿದ್ದ ವೈದ್ಯನ ಹೆಸರು ' ರಾಹಿಲ '

3. ರಾಮನ ಬರುವಿಕೆಗಾಗಿ ಮತಂಗಾಶ್ರಮದಲ್ಲಿ ಕಾಯುತ್ತಿದ್ದವರು ಯಾರು

ಉ : ರಾಮನ ಬರುವಿಕೆಗಾಗಿ ಮತಂಗಾಶ್ರಮದಲ್ಲಿ ಕಾಯುತ್ತಿದ್ದವರು ' ಶಬರಿ '

4. ಶಬರಿ ಯಾರ ಆಶ್ರಮದಲ್ಲಿ ವಾಸವಿದ್ದಳು ?

ಉ : ಶಬರಿ ' ಮತಂಗರ ' ಆಶ್ರಮದಲ್ಲಿದ್ದಳು.

5. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?

ಉ : ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ತಪಸ್ವಿ 'ಧನು' (ಕಬಂಧ ಎಂಬ ರಾಕ್ಷಸ)

6. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು ?

ಉ : ವಿಶ್ವೇಶ್ವರಯ್ಯ ರವರನ್ನು ದಿವಾನರಾಗಿ ನೇಮಿಸಿದವರು ' ನಾಲ್ವಡಿ ಕೃಷ್ಣರಾಜ ಒಡೆಯರ್ '

7. ಅಶೋಕ ಪೈ ರವರ ವೃತ್ತಿ ಯಾವುದು ?

ಉ : ಅಶೋಕ ಪೈ ರವರು ಮನೋವೈದ್ಯರಾಗಿದ್ದರು.

8. ' ಶಿವಾನುಭವ ಶಬ್ದಕೋಶ ' ಪುಸ್ತಕ ಬರೆದವರು ಯಾರು ?

ಉ : ಶಿವಾನುಭವ ಶಬ್ದಕೋಶ ಪುಸ್ತಕ ಬರೆದವರು ಹಳಕಟ್ಟಿಯವರು.

9. ವಚನಕಾರರಿಗೆ ಯಾವುದು ದೇವರಾಗಿತ್ತು ?

ಉ : ವಚನಕಾರರಿಗೆ ಅವರ ' ಪ್ರಜ್ಞೆಯೇ ' ದೇವರಾಗಿತ್ತು.

10. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು ?

ಉ : ಹಸಿದು ಮಲಗಿದ್ದ ಹುಲಿಯು ವಿಧಿ ತನ್ನ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು.

11. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ?

ಉ : ಶಾನುಭೋಗರ ಬ್ರಹ್ಮಾಸ್ತ್ರ ' ಖಿರ್ದಿ ಪುಸ್ತಕ '

12. ದುಷ್ಟ ಬುದ್ದಿಯು ಧರ್ಮ ಬುದ್ದಿಯ ಮೇಲೆ ಯಾವ ಆರೋಪವನ್ನು ಹೊರೆಸಿದನು ?

ಉ : ದುಷ್ಟ ಬುದ್ದಿಯು ದರ್ಮ ಬುದ್ದಿಯ ಮೇಲೆ 'ಹೊನ್ನು ಕದ್ದ' ಆರೋಪವನ್ನು ಹೊರೆಸಿದನು.

13. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು ?

ಉ : ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಸಾಕ್ಷಿ ಕೇಳಲು ಬಂದರು.

14 ಕಾಡು ಮೇಡುಗಳ ಸ್ಥಿತಿ ಹೇಗಿದೆ ?

ಉ : ಕಾಡು ಮೇಡುಗಳು ಬರುಡಾದ ಸ್ಥಿತಿಯಲ್ಲಿವೆ.

15. ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ?

ಉ : ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಗಿಳಿ ಎದೆಯ ಹಸುರಿನಂತಿದೆ.

16. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?

ಉ : ಕಲುಷಿತವಾದ ನದೀ ಜಲಗಳಿಗೆ ಮುಂಗಾರಿನ ಮಳೆಯಾಗಬೇಕು.

17. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ?

ಉ : ಹಕ್ಕಿಯ ಗರಿಯಲ್ಲಿ ' ಬಿಳಿಹೊಳೆ ' ಬಣ್ಣಗಳಿವೆ.

18. ಹಕ್ಕಿಯು ಯಾವುದರ ಸಂಕೇತವಾಗಿದೆ ?

ಉ : ಹಕ್ಕಿಯು ' ಕಾಲ ಪಕ್ಷಿಯ ' ಸಂಕೇತವಾಗಿದೆ.

19. ಹಕ್ಕಿಯ ಕಣ್ಣುಗಳು ಯಾವುವು ?

ಉ : ಹಕ್ಕಿಯ ಕಣ್ಣುಗಳು ' ಸೂರ್ಯ–ಚಂದ್ರ '

20. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು ?

ಉ : ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ.

21. ದಿನಪಸುತ ಎಂದರೆ ಯಾರು ?

ಉ : ದಿನಪಸುತ ಎಂದರೆ 'ಕರ್ಣ'

DDPI Office Kolar Dist.

22. ಅಂತಕಾತ್ಮಜ ಎಂದರೆ ಯಾರು ?
ಉ : ಅಂತಕಾತ್ಮಜ ಎಂದರೆ ಯುಧಿಷ್ಠಿರ (ಧರ್ಮರಾಯ)
23. ಯಜ್ಞಾಶ್ವವನ್ನು ಕಟ್ಟಿದವರು ಯಾರು ?
ಉ : ಯಜ್ಞಾಶ್ವವನ್ನು ಕಟ್ಟಿದವರು ' ಲವ '
24. ಕುದುರೆಯನ್ನು ಲವನು ಯಾವುದರಿಮದ ಕಟ್ಟಿದನು ?
ಉ : ಕುದುರೆಯನ್ನು ಲವನು 'ತನ್ನ ಉತ್ತರೀಯದಿಂದ' ಕಟ್ಟಿದನು.
25. ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ ?
ಉ : ಪುಟ್ಟ ಪೋರಿಯ ಅಮ್ಮ ಗುಡಿಸಲಿನಲ್ಲಿ ಮಲಗಿದ್ದಾಳೆ.
26. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ?
ಉ : ಪುಟ್ಟ ಪೋರಿ ಮುಸುರೆ ತಿಕ್ಕುತ್ತಿದ್ದಾಳೆ.
27. ದುರ್ಯೋಧನ ತಾನು ಹೋರಾಡುತ್ತಿರುವುದು ಏಕೆ ಎಂದು ಭೀಷ್ಮನಿಗೆ ಹೇಳಿದನು ?
ಉ : ದುರ್ಯೋಧನ ತಾನು ಹೋರಾಡುತ್ತಿರುವುದು 'ಛಲವನ್ನು ಮರೆಯಲು' ಎಂದು ಹೇಳುತ್ತಾನೆ.
28. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು ?
ಉ : ರಾಹಿಲನು 'ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ, ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು' ಗಂಭೀರವಾಗಿ ನುಡಿದನು.
29. ವಿಶ್ವೇಶ್ವರಯ್ಯನವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ
ಉ : ವಿಶ್ವೇಶ್ವರಯ್ಯನವರ ಹುಟ್ಟುಹಬ್ಬದ ನೆನಪಿಗಾಗಿ 'ಎಂಜಿನಿಯರ್ಸ್ ದಿನಾಚರಣೆ' ಯನ್ನು ಮಾಡಲಾಗುತ್ತಿದೆ.
30 ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು ?
ಉ : ನಾಲ್ವಡಿ ಕೃಷ್ಣರಾಜ ಒಡೆಯರು 'ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ' ಕಂಕಣ ಬದ್ದರಾದರು.
31. ನದೀ ಜಲಗಳು ಏನಾಗಿವೆ ?
ಉ : ನದೀ ಜಲಗಳು ಕಲುಷಿತವಾಗಿವೆ.
32. ಯಾವ ಎಚ್ಚರದೊಳು ಬದುಕಬೇಕು ?
ಉ : ಮತಗಳೆಲ್ಲವೂ ಪಥಗಳು ಎಂಬ ಎಚ್ಚರದೊಳು ಬದುಕಬೇಕು.
33. ಹಕ್ಕಿ ಯಾರನ್ನು ಹರಸಿದೆ ?
ಉ : ಹಕ್ಕಿ ಹೊಸಗಾಲದ ಅಸು ಮಕ್ಕಳನ್ನು ಹರಸಿದೆ.
34. ಯಾರಿಗೆ ವಸಂತ ಮುಖ ತೋರಲಿಲ್ಲ
ಉ : ಕುಂಬಾರ, ಕಮ್ಮಾರ, ನೇಕಾರ, ಕೇರಿಯ ಮಾರ ಇವರಾರಿಗೂ ವಸಂತ ಮುಖ ತೋರಲಿಲ್ಲ.
35. ಹುಲಿಗೆ ಪರಮಾನಂದವಾಗಲು ಕಾರಣವೇನು ?
ಉ : ಶಾನುಭೋಗರ ದುಂಡು ದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.
36. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ ?
ಉ : ಕವಿಗೆ ಹುಲ್ಲಿನ ಹಾಸು 'ಹೊಸ ಪಚ್ಚೆಯ ಮಕಮಲ್ಲಿನ ಜಮಖಾನೆಯಂತೆ' ಕಂಡಿದೆ.
37. ಶ್ರೀ ರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದಳು ?
ಉ : ಶ್ರೀ ರಾಮನಿಗೆ ಸಮರ್ಪಿಸಲು ಶಬರಿ ಹಣ್ಣು-ಹಂಪಲುಗಳನ್ನು ಸಂಗ್ರಹಿಸಿದಳು.
38. ಬಾಲ ರವಿಯು ಎಲ್ಲಿ ಥಳ ಥಳಿಸುತ್ತಿರುವನು ?
ಉ : ಬಾಲರವಿಯು ಹೊಳೆಯುವ ರಂಗೋಲಿಯಲ್ಲಿ ಥಳ ಥಳಿಸುತ್ತಿರುವನು.
39. ಗಡಿಪದೇಶದಲ್ಲಿ ಬ್ಲಾಕ್‌ಔಟ್ ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ ?
ಉ : ಗಡಿ ಪದೇಶದಲ್ಲಿ ವಿಮಾನದಾಳಿಯಿಂದ ರಕ್ಷಿಸಿಕೊಳಲು 'ಬ್ಲಾಕ್‌ಔಟ್' ನಿಯಮವನ್ನು ಪಾಲಿಸಲಾಗುತ್ತದೆ.
40. ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ ?
ಉ : ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ತ್ಯಾಗದ ಪ್ರತೀಕ ಎಂದು ತೋರಿಸುತ್ತಾನೆ.
41. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಗೆ ಯಾವ ಪದವಿಯನ್ನು ನೀಡಿ ಗೌರವಿಸಿತು ?
ಉ : ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್' ಪದವಿಯನ್ನು ನೀಡಿ ಗೌರವಿಸಿತು.
42. ಭಗವದ್ಗೀತೆಯನ್ನು ರಚಿಸಿದವರು ಯಾರು ?
ಉ : ಭಗವದ್ಗೀತೆಯನ್ನು ರಚಿಸಿದವರು ಮಹರ್ಷಿವೇದವ್ಯಾಸರು.
43. ಹಲಗಲಿಯ ನಾಲ್ವರು ಪ್ರಮುಖರು ಯಾರು ?

DDPI Office Kolar Dist.

ಉ : ಪೂಜೇರಿಹನುಮ. ಬ್ಯಾಡರಬಾಲ ಜಡಗ ಮತ್ತು ರಾಮ ಇವರು ಹಲಗಲಿಯ ನಾಲ್ವರು ಪ್ರಮುಖರಾಗಿದ್ದರು.

44. ಧರ್ಮಾಧಿಕರಣರು ಏಕೆ ವಿಸ್ಮಯ ಹೊದಿದರು ?

ಉ : ದುಷ್ಟ ಬುದ್ದಿಯು ವಟವೃಕ್ಷವೇ ಸಾಕ್ಷಿ ಎಂದು ಹೇಳಿದ್ಧರಿಂದ ಧರ್ಮಾಧಿಕರಣರು ವಿಸ್ಮಯ ಹೊಂದಿದರು.

45. ಮನೆ ಮಂಚಮ್ಮನ ಕಥೆ ಹೇಳಿದ ಕವಿ ಯಾರು ?

ಉ : ಮನೆ ಮಂಚಮ್ಮನ ಕಥೆ ಹೇಳಿದ ಕವಿ ಸಿದ್ದಲಿಂಗಯ್ಯ.

46. ಯುದ್ಧದ ಬಗ್ಗೆ ಮುದುಕಿಯ ಅಭಿಪ್ರಾಯವೇನ್ನು ?

ಉ : ಎಲ್ಲರ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ ಎಂಬುದು ಯುದ್ಧದ ಬಗ್ಗೆ ಮುದುಕಿಯ ಅಭಿಪ್ರಾಯವಾಗಿತ್ತು.

47. ಶಾನು ಭೋಗರ ರಾಜ ಭಕ್ತಿಯ ಲಾಂಭನ ಯವುದು ?

ಉ : ಶಾನು ಭೋಗರ ರಾಜ ಭಕ್ತಿಯ ಲಾಂಭನ ಖಿರ್ದಿಪುಸ್ತಕ.

48. ಇಂದಲ್ಲ ನಾಳೆ ಫಲಕೊಡುವ ಅಂಶಗಳಾವುವು ?

ಉ : ಭೂಮಿಗೆ ಬಿದ್ದ ಬೀಜ ಮತ್ತು ಎದೆಗೆ ಬಿದ್ದ ಅಕ್ಷರ ಇವು ಇಂದಲ್ಲ ನಾಳೆ ಫಲಕೊಡುವ ಅಂಶಗಳಾಗಿವೆ.

49. ಶ್ರೀ ರಾಮನ ಯಜ್ಞ ಕುದುರೆ ಯಾರ ಆಶ್ರಮಕ್ಕೆ ಬಂದಿತು ?

ಉ : ಶ್ರೀ ರಾಮನ ಯಜ್ಞ ಕುದುರೆ 'ವಾಲ್ಮೀಕಿ' ಆಶ್ರಮಕ್ಕೆ ಬಂದಿತು.

50. 'ಹಸುರು' ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ ?

ಉ: ಅಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ.

DDPI Office Kolar Dist.

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

**1, ಮಹಿಳೆಯ ಆರ್ತನಾದ ಕೇಳಿದ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವವು?**

ಉ: ರಾಹಿಲನು ಒಂದಿಷ್ಟು ದೂರ ಚಲಿಸಿದ್ದೆನೋ ಇಲ್ಲವೋ ಮಹಿಳೆಯೊಬ್ಬಳ ಆರ್ತನಾದ ಆ ಮಹಿಳೆಯ ಶಬ್ದವನ್ನು ಭೇದಿಸಿ ಆತನ ಕಿವಿಯೊಳಗೆ ನುಗ್ಗಿತು,ಆತನು ಬೆಚ್ಚಿದನು, ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು? ಆ ಮನೆಯಿಂದ ಒಂದೇ ಒಂದು ಬೆಳಕಿನ ಕಿರಣವೂ ಹೊರಗಡೆ ಹಾಯುತ್ತಿರಲಿಲ್ಲ, ಗಡಿಪ್ರದೇಶದಲ್ಲಿ ಬ್ಲಾಕ್ ಟ್ ನಿಯಮವನ್ನು ಪಾಲಿಸಲಾಗುತ್ತಿರುವ ಈ ಸಂದರ್ಭದಲ್ಲಿ ಯಾವ ರೀತಿಯ ಕೌರ್ಯ ನಡೆಯುತ್ತಿದೆ? ಎಂಬ ಪ್ರಶ್ನೆಗಳು ರಾಹಿಲನ ಮನದಲ್ಲಿ ಮೂಡಿದವು.

**2. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?**

ಉ: " ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನುಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆ.ಆದರೆ ನನ್ನ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ದವಂತೆ, ಯುದ್ದ!" ಎಂದು ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದಳು.

**3. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?**

ಉ: "ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗ ಕೊನೆಗೂ ದಕ್ಕಲಿಲ್ಲವಲ್ಲ? ಈ ಯುದ್ದವಿಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದೆವಲ್ಲ ದೇವರೇ? ಈ ಮನುಷ್ಯರಿಗೆ ಎಂತಹ ಬುದ್ಧಿಯ ಕೊಡುತ್ತೀಯಾ?" ಎಂದು ಮುದುಕಿಯು ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದಳು.

**4. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?**

ಉ: ದೊರೆವಳೆ ಸೀತೆ ಭೂಮಿಜಾತೆ ಆತ್ಮಕಾಮಕಲ್ಪಲತೆ ನಾನೆರೆವೆ ದೊರೆವಳೇ ದೊರೆವಳೇ? ಈ ಬೇಗೆ ಕೆಡದಲಾ, ನನ್ನೆದೆಯಾ ಬಿಡದಲಾ ಈ ಜಗವ ಸುಡದಲಾ, ಹಾ" ಎಂದು ರಾಮನು ಗಿರಿವನವನ್ನು ಪ್ರಾರ್ಥಿಸಿದನು.

**5. ಶಬರಿಯು ರಾಮನ ಗುಣವನ್ನು ಹೇಗೆ ಹಾಡಿಹೊಗಳುತ್ತಾಳೆ?**

ಉ: ರಾಮನು ದಶರಥನ ಪುತ್ರನಂತೆ, ಸಾಧುಜನರ ಮಿತ್ರನಂತೆ.ಧೀರ, ಶೂರ, ಗಂಭೀರ ಸದ್ಗುಣ ಸಾರನಂತೆ. ರಾಮನು ಅಂಜಿಸುವವರಂಜುವಂತೆ ಬಿಲ್ಲ ಹಿಡಿದು ಬರುವನಂತೆ. ಆದರೂ ಬಲು ಸೌಮ್ಯನಂತೆ. ಹಸುಳೆಯಂತೆ ಕಾಣುವ ರಾಮನು ಅರಸುತನವ ತೊರೆದು ತವಸಿತನವ ಕೊಂಡನಂತೆ. ರಾಮನ ಮನದಲ್ಲಿ ಭಯವೇ ಇಲ್ಲವಂತೆ, ಕೆಟ್ಟಕನಸಿನಿರುಳ ಕಳೆವ ಸುಪ್ರಭಾತದಂಥವನು.ಗುರುಸಿದ್ಧರೇ ಮೆಚ್ಚಿದಂಥ ಸನ್ಮಂಗಳ ಮೂರುತಿ" ಎಂದು ಶಬರಿಯು ರಾಮನ ಗುಣವನ್ನು ಹಾಡಿಹೊಗಳಿದ್ದಾಳೆ.

**6. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?**

ಉ: ರಾಮನ ಸ್ವಾಗತಕ್ಕಾಗಿ ಶಬರಿಯು ತಳಿರು ಹೂ ಹಣ್ಣು ಹಂಪಲುಗಳನ್ನು ಸಂಗ್ರಹಿಸಿದ್ದಳು. ಮಧುಪರ್ಕವನ್ನು ತಯಾರಿಸಿಡುತ್ತಿದ್ದಳು. ಬಗೆ ಬಗೆಯ ಕಂಪನಿಡುವ ಹೂವಿನ ಮಾಲೆಯನ್ನು ಕಟ್ಟುತ್ತಿದ್ದಳು. ಹೀಗೆ ಶಬರಿಯು ರಾಮನ ಸ್ವಾಗತಕ್ಕಾಗಿ ಸಿದ್ಧತೆಗಳನ್ನು ಮಾಡಿಕೊಂಡಿದ್ದಳು.

**7. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?**

ಉ:ಗ್ರಾಮ ನೈರ್ಮಲೀಕರಣ ,ವೈದ್ಯಕೀಯ ಸಹಾಯ ,ವಿದ್ಯಾಪ್ರಚಾರ ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಲಿತ ಕ್ಷೇತ್ರಗಳಾದೆವು.

**8 .ಶಿಕ್ಷಣದ ಬಗ್ಗೆ ವಿಶ್ವೇಶವರಯ್ಯ ಅವರು ಏನೆಂದು ಹೇಳಿದ್ದಾರೆ ?**

ಉ: ಶಿಕ್ಷಣಕ್ಕಾಗಿ ಶಿಕ್ಷಣ ಇರಬೇಕು .ಅದು ಕೆಲವೇ ಜನರ ಸೊತ್ತಾಗಿದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು." ಎಂಬುದನ್ನು ವಿಶ್ವೇಶವರಯ್ಯನವರು .ಶಿಕ್ಷಣದ ಬಗ್ಗೆ ಹೇಳಿದ್ದಾರೆ.

**9.ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?**

ಉ: "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆಮಾತನಾಡಿದ್ದೀರಿ, ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ತಾವು ತಮ್ಮಿಂದ ಕಲಿಯೋಣ" ಎಂದು ನೆಹರೂ ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಹೇಳಿದ್ದಾರೆ.

**10. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?**

DDPI Office, Kolar Dist.

ಉ: ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ಎಂದು ಅಶೋಕ ಪೈ ಅವರ ಸಂಶೋಧನೆ ಹೇಳುತ್ತದೆ. ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತಿರುತ್ತವೇನೋ. ಈ ಅನುಕಂಪನ ಇಡೀ ಜೀವ ಸಂಕುಲವನ್ನೇ ಒಂದು ಎಂದು ಹೇಳುತ್ತದೆ. ಒಂದು ಕೊಠಡಿಯಲ್ಲಿ ಕುಳಿತಿರುವವರ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ ಎಂಬುದನ್ನು ಸಂಶೋಧನೆ ಮಾಡಿದ್ದರು.

**11. ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ಏನು?**

ಉ:ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳುವಳಿಕೆ,ಜ್ಞಾನ ಮಾತ್ರ ಅಲ್ಲ. ಅದು ಕ್ರಿಯೆಯ ಅನುಭವದಿಂದ ಒಡಮೂಡುವದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿಮೂಡಿದ ತಿಳುವಳಿಕೆ. ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.

**12.ಪ್ರಜ್ಞೆಯನ್ನೇ ದೇವರು ಅಂದುಕೊಂಡರೆ ಆಗುವ ತೊಂದರೆ ಏನು?**

ಉ: ಪ್ರಜ್ಞೆಯನ್ನೇ ದೇವರು ಅಂದುಕೊಂಡರೆ ಸುಡುವ ಬೆಂಕಿಯನ್ನು ನೆತ್ತಿ ಮೇಲೆ ಇಟ್ಟುಕೊಂಡಂತಾಗುತ್ತದೆ. ತಮ್ಮ ಪ್ರಜ್ಞೆ ಮುಂದೆ ಸುಳ್ಳು ಹೇಳಕಾಗಲ್ಲ. ಅದೇ ಕಷ್ಟ ಆಗೋದು ಇತರ ದೇವರಿಗಾದರೆ ಯಾವುದೇ ಉಗ್ರ ದೇವತೆ ಇರಲಿ, ಏನೋ ಸ್ವಲ್ಪ ಹೊಟ್ಟೆ ಒಲಕ್ಕೆ ಹಾಕೋಂತ ಸುಳ್ಳುಪಳ್ಳು ಹೇಳಿಬಿಡಬಹುದು. ಆದರೆ ಪ್ರಜ್ಞೆ ಮುಂದೆ ಇದು ನಡೆಯದು.

**13. ಹುಲಿಯು ಹಿಂದಿನಿಮದ ಹಾರಿ ಕೊಲ್ಲದಿರಲು ಕಾರಣಗಳೇನು?**

ಉ: ಹುಲಿಯು ಬೇಟೆಯಾಡುವಾಗ ಒಂದು ಧರ್ಮವನ್ನು ಅನುಸರಿಸುತ್ತದೆ. ಯಾರನ್ನೇ ಆಗಲಿ ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೇ ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಬರ್ಮವಲ್ಲವಷ್ಟೆ.

**14. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?**

ಉ: ಒಮ್ಮೆ ಶಾನುಭೋಗರು ಚಿಕ್ಕನಾಯಕನ ಹಳ್ಳಿಗೆ ಇರಸಾಲಿಗೆ ಹೋಗಿ ಬರುವಾಗ ಸಂಜೆ ಆರು ಆರುಗಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕು. ಕಾಡುದಾರಿ, ಆದರೂ ಬೆಳದಿಂಗಳ ದಿನ ಸ್ವಲ್ಪ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದುಕೊಂಡು ಬೇಗ ಬೇಗ ನಡೆದರು. ಆದರೂ ಕಣಿವೆಗೆ ಬರುವ ವೇಳೆಗೆ ಆಗಲೇ ರಾತ್ರಿ ಹೆಜ್ಜೆಯಿಟ್ಟಿತ್ತು. ಹಸಿವಿನ ಜೊತೆ ಭಯವೂ ಸೇರಿ ಅವರ ಕಾಲು ಮತ್ತಷ್ಟು ಚುರುಕಾಯಿತು.

**15. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?**

ಉ: ಧರ್ಮಬುದ್ಧಿಗೆ ದುಷ್ಟಬುದ್ಧಿಯು "ನಾವು ಈ ಹಣವನ್ನು ಹಂಚಿಕೊಂಡು ಮನೆಗೆ ಹೋದರೆ ಸ್ವ ಇಚ್ಛೆಯಿಂದ ಇರು ಆಗುವುದಿಲ್ಲ.ಏಕೆಂದರೆ ನಾವು ಮತ್ತೆ ವ್ಯಾಪಾರಕ್ಕೆ ಹೋಗಬೇಕು. ಆದ್ದರಿಂದ ನಮಗೆ ಖರ್ಚಿಗೆ ಬೇಕಾಗುವಷ್ಟು ಹಣವನ್ನು ತೆರೆದುಕೊಂಡು ಉಳಿದ ಹಣವನ್ನು ಇಲ್ಲಿಯೇ ಮರದ ಕೆಳಗೆ ಹೂಳಿಡೋಣ ಎಂದು ಹೇಳಿದನು.

**16. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?**

ಉ: ದುಷ್ಟಬುದ್ಧಿಯು ತನ್ನ ತಂದೆಯನ್ನು ಕಟ್ಟೇಕಾಂತದಲ್ಲಿ ಕರೆದು ನಡೆದ ವೃತ್ತಾಂತವನ್ನೆಲ್ಲಾ ಹೇಳಿದನು. ನೀನು ದರ್ಮಬುದ್ಧಿಯೇ ಹೊನ್ನನೆಲ್ಲ ಕದ್ದಿದ್ದು ಎಂದು ಹೇಳಬೇಕು. ನೀನು ಹೇಳುವ ಈ ಸುಳ್ಳಿನ ಮಾತಿನಿಂದ ನಮ್ಮ ಪರಿವಾರವೆಲ್ಲವು ಹಲವು ಕಾಲ ಹಸಿಯದೆ ಉಣ್ಣಬಹುದು. ನೀವು ಆ ಮರದ ಪೊಟರೆಯಲ್ಲಿ ಅಡಗಿ ಕುಳಿತಿದ್ದು ಧರ್ಮಬುದ್ಧಿಯೆ ಪೊನ್ನಂ ಕೊಂಡನು ಎಂದು ಹೇಳಬೇಕೆಂದು ಹೇಳಿದನು.

**17. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?**

ಉ: ಧರ್ಮಾಧಿಕರಣರು ವಟವೃಕ್ಷವನ್ನು ಅಷ್ಟವಿಧದಿಂದ ಅರ್ಚನೆ ಮಾಡಿದರು. ಧರ್ಮಬುದ್ಧಿಯರ ಹತ್ತಿರ ನಡೆದ ವೃತ್ತಾಂತವನ್ನು ಹೇಳಿಸಿದರು. ವಟವೃಕ್ಷವನ್ನು ಕುರಿತು "ಎಲೇ ವಟವೃಕ್ಷವೇ ನಿನ್ನಲ್ಲಿ ಯಕ್ಷಾದಿಯಾಗಿ ದಿವ್ಯದೇವತೆಗಳು ವಾಸಮಾಡುತ್ತಾರೆ. ಅಂತಹ ಪವಿತ್ರ ವೃಕ್ಷ ನೀನು. ಆದ್ದರಿಂದ ನಿನ್ನನ್ನು ಸಾಕ್ಷಿಮಾಡಿ ಕೇಳುತ್ತೇನೆ ತಪ್ಪದೆ ಸಾಕ್ಷಿಹೇಳಬೇಕೆಂದು" ಹೇಳಿದರು.

**18. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?**

ಉ: ಕತ್ತಲೆಯನ್ನು ಹೋಗಲಾಡಿಸುವ ದೀಪದಂತೆ ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ಪ್ರೀತಿ ಅಜ್ಞಾನದ ಹಣತೆ ಹಚ್ಚಿ ಸ್ವಾಸ್ಥದ ನೆಯಾಗಿಸಬೇಕು. ಬಿರುಗಾಳಿಯಂತೆ ಜೀವನದಲ್ಲಿ ಬರುವ ಸಮಸ್ಯೆಗಳನ್ನು ಎಚ್ಚರದಿಂದ ಬಗೆಹರಿಸಿ ಮುನ್ನಡೆಯಬೇಕು. ಜೀವನವೆಂಬ ಹಡಗನ್ನು ಜ್ಞಾನ, ಪ್ರೀತಿಯ ಬೆಳಕಿನಲ್ಲಿ ಮುನ್ನಡೆಸಬೇಕು ಎಂದು ಲವಿ ಹೇಳಿದ್ದಾರೆ.

**19. ಕಾಡುಗಳಿಗೆ ಹೇಗೆ ಮುಟ್ಟಬೇಕಾಗಿದೆ?**

ಉ; ಮನುಷ್ಯನ ದುರಾಸೆಯಿಂದ ನದೀಜಲಗಳು ಕಲುಷಿತವಾಗಿದೆ. ಮುಂಗಾರಿನ ಮಳೆಯು ಹೊಯ್ದಾಗ ನದಿಜಲಗಳ ಕಲ್ಮಶಗಳೆಲ್ಲ ಕೊಚ್ಚಿ ಹೋಗಿ ತಿಳಿನೀರಾಗುತ್ತದೆ. ನಮ್ಮ ಸಮಾಜವು ಬ್ರಷ್ಟಾಚಾರ, ಕೋಮುಗಲಭೆ ಮುಂತಾದ ಸಮಸ್ಯೆಗಳಿಂದ ತುಂಬಿಹೋಗಿದೆ. ಎಲ್ಲರೂ ನೈತಿಕ ಶಿಕ್ಷಣವನು ಪಡೆಯುವ ಮೂಲಕ ಈ ಸಮಸ್ಯೆಗಳನ್ನು ಪರಿಹರಿಸಬಹುದು. ಎಲೆ ಉದುರಿಸಿ

DDPI Office, Kolar Dist.

ಬರಡಾಗಿಸುವ ಮರವು ವಸಂತಕಾಲ ಬಂದಾಗ ಚಿಗುರುವ ಹಾಗೆ ನಿರಾಶೆ, ಅಪನಂಬಿಕೆ ಭಯದಿಂದ ತುಂಬಿದ ಮನಸ್ಸುಗಳಿಗೆ ಪ್ರೀತಿ, ವಿಶ್ವಾಸ, ಭರವಸೆಯನ್ನು ತುಂಬಿ ಹೊಸ ಸಮಾಜವನ್ನು ಕಟ್ಟೋಣ ಎಮದು ಕವಿ ಹೇಳಿದ್ದಾರೆ.

**20. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?**

ಉ: ಮತಗಳು ಬೇರೆಯಾದರು ಅದರ ದಾರಿ ಒಂದೆ. ಅದೆ ಮನುಷ್ಯ ಒಳ್ಳೆಯವನಾಗಿ ಸನ್ಮಾರ್ಗದಲ್ಲಿ ನಡೆಯಬೇಕು ಎಮದು ಎಲ್ಲಿ ಮತಗ್ರಂಥಗಳು ಹೇಳುತ್ತವೆ. ಅದನ್ನು ಅರ್ಥಮಾಡಿಕೊಂಡು ಸಹಬಾಳ್ವೆ ಮಾಡಬೇಕು. ಭಯದಿಂದ ನಡುಗುತ್ತಿರುವ ಮನಸ್ಸುಗಳಿಗೆ ಧೈರ್ಯವನ್ನು ಹೇಳೋಣ. ಸಂಶಯವನ್ನು ಹೋಗಲಾಡಿಸಿ ಅವರಿಗೆ ಉತ್ತಮ ಶಿಕ್ಷಣವನ್ನು ನೀಡಿ ಉತ್ತಮ ಭವಿಷ್ಯದ ಕನಸ್ಸನ್ನು ನನಸಾಗಿಸಲು ಸಹಾಯ ಮಾಡೋಣ ಎಂದು ಕವಿ ಹೇಳಿದ್ದಾರೆ.

**21. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?**

ಉ: ಕವಿ ಬೇಂದ್ರೆಯವರು ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಹೇಳಿದ್ದಾರೆ. ಕಾಲವೆಂಬ ಹಕ್ಕಿಯು ಆಕಾಶದಷ್ಟೆ ವಿಶಾಲವೂ, ಅನಂತವೂ ಆಗಿದೆ. ಇದಕ್ಕೆ ಆದಿ ಅಂತ್ಯವಿಲ್ಲ. ಈ ಹಕ್ಕಗೆ ಮೇಘಮಂಡಲಕ್ಕೆ ಸಮನಾದ ನೀಲಿಬಣ್ಣವಿದೆ. ಆಕಾಶದಲ್ಲಿ ಮೋಡಗಳು ಚಲಿಸುವ ಹಾಗೆ ಕಾಲಪಕ್ಷಿಯು ಯುಗ ಯುಗಗಳನ್ನು ಹಿಂದಕ್ಕೆ ತಳ್ಳುತ್ತ ಮುಂದೆ ಸಾಗುತ್ತಿದೆ. ಆಕಾಶದಲ್ಲಿ ನಕ್ಷತ್ರಗಳು ಮಾಲೆಯಾಗಿರುವಂತೆ ಕಾಲದ ಪಕ್ಷಿಯು ದಿನ, ಮಾಸ ,ವರ್ಷವೆಂಬ ಮಾಲೆಯನ್ನು ಧರಿಸಿದೆ. ಹಗಲು ರಾತ್ರಿಗಳೆಂಬ ಸೂರ್ಯ ಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡಿದೆ ಎಂದು ಕವಿ ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ.

**22.ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?**

ಉ: ಯುಗದಿಂದ ಯುಗಕ್ಕೆ ಕಾಲ ಬದಲಾಗುತ್ತದೆ.ಮಾನವನ ಜೀವನದಲ್ಲೂ ಬದಲಾವಣೆಯಾಗುತ್ತದೆ. ಮುಂದಿನ ಯುಗವು ಹೊಸತನವನ್ನು ತರುವಂತಹ ಪರಿವರ್ತನೆಯ ಕಾಲವಾಗುತ್ತದೆ. ಮುದುಡಿಹೋಗಿದ್ದ ಮನಸ್ಸುಗಲಿಗೆ , ಪ್ರಕೃತಿಗೆ ಹೊಸಚೇತನವನ್ನು ನೀಡುತ್ತದೆ. ಹೊಸಕಾಲದ ನಿರ್ಮಾಪಕರಾದ ಹಸುಮಕ್ಕಳನ್ನು ಹರಸಿ ಕಾಲವು ಮಂದೆ ಹೋಗುತ್ತದೆ.

**23. ಹಕ್ಕಿಯು ಯಾವ ಮೇರೆ ಮೀರಿ ನೀರನ್ನು ಹೀರಿದೆ?**

ಉ: ಮನುಷ್ಯ ಎಂದಿಗೂ ಸೃಜನಶೀಲ ಒಂದರನಂತರ ಒಂದು ಯಶಸ್ಸನ್ನು ಪಡೆಯಲು ಹಾತೊರೆಯುವನು. ತನ್ನ ಬೆಳ್ಳಿಯ ಹಳ್ಳಿಯ ಮೇರೆಯನ್ನು ಮೀರಿ ನೀರನ್ನು ಹೀರಿದ ಪ್ರಪಂಚವನ್ನೆಲ್ಲ ಸುತ್ತಿ ಬಂದ ಕಾಲಪಕ್ಷಯು ಹಾರಿದಮತೆ, ಕಾಲಚಕ್ರ ಉರುಳಿದಮತೆ ಆತನ ಸಮಚಾರ ಚಂದರಲೋಕದ ಕಡೆ, ಅಲ್ಲಿಯ ನೀರನ್ನು ಕುಡಿದು ಸಂತೋಷಪಟ್ಟ. ಆರಲು ಹಾಡಲು ತಾ ಹಾರಾಡಲು ಮಂಗಳಗ್ರಹಕ್ಕೂ ತಲುಪಿದ. ಹೀಗೆ ಕಾಲದ ಹಕ್ಕಿಯು ತನ್ನ ಮೇರೆ ಮೀರಿ ಮುಮದೆ ಸಾಗಿ ಅಲ್ಲಿಯ ನೀರನ್ನು ಹೀರಿದೆ.

**24.ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?**

ಉ: ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಆಡಳಿತ ಸೂತ್ರ ಹಿಡಿದರು. 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶಸ್ತ್ರೀಕರಣದ ಹುಕುಮನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ. ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು. ಈ ಹುಕುಮನ್ನು ವಿರೋಧಿಸಿ ಅಲ್ಲಲ್ಲಿ ದಂಗೆಗಳಾದವು.

**25. ಲಾವಣಿಗಳನ್ನು ಏಕೆವೀರಗೀತೆಗಳು ಎನ್ನಲಾಗಿದೆ?**

ಉ: ಲಾವಣಿಗಗಳು ಜನಪದ ಸಾಹಿತ್ಯದ ಒಂದು ಪ್ರಕಾರವಾಗಿದ್ದು ವೀರತನ, ಸಾಹಸವನ್ನು ವರ್ಣಿಸಿರುವುದರಿಂದ ಲಾವಣಿ ಎಂದರೆ ' ವೀರಗೀತೆ' ಎಮದು ಕರೆಯುವುದು ವಾಡಿಕೆ. ಕನ್ನಡನಾಡಿನ ಮೇಲೆ ನಡೆದ ದಾಳಿ-ದಂಗೆಗಳನ್ನು ವೀರರು ತಡೆದು ತಮ್ಮ ತ್ಯಾಗ ಬಲಿದಾನಗಳಿಂದ ಅಮರರಾಗಿದ್ದಾರೆ. ಕನ್ನಡಿಗರ ಗೌರವವನ್ನು ಉಳಿಸಿದ್ದಾರೆ. ಇಂತಹ ವೀರ ಕಲಿಗಳ ವೀರ ಸಾಹಹ, ಉಜ್ವಲ ಜೀವನವನ್ನು ವರ್ಣಿಸುವ ಕಥನಾತ್ಮಕ ಕಾವ್ಯಗಳೇ ಲಾವಣಿಗಳು.

**26.ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?**

ಉ: ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಈಗ ಅದು ಘನೀಭೂತವಾಗಿದೆ. ಅದರ ದುರ್ಗಂಧದಿಂದ ಭಾರತದ ವಾತಾವರಣವನ್ನೆಲ್ಲ ತಂಬಿದೆ ಎಮದು ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರು ಅಭಿಪ್ರಾಯ ಪಟ್ಟಿದ್ದಾರೆ.

**27. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು. ಏಕೆ?**

ಉ: ವಿವೇಕಾನಂದರ ಧಾರ್ಮಿಕ ಚಿಂತನೆಗಳನ್ನು ಅವಲೋಕಿಸಿದಾಗ ಅವರು ಸ್ಪಷ್ಟವಾಗಿ ಕೋಮುವಾದ ವಿರೋದಿಯಾಗಿದ್ದರೆಂದು ತಿಳಿದು ಬರುತ್ತದೆ. ಕೋಮುವಾದವು ಏಕಧರ್ಮ ಮತ್ತು ಏಕ ಸಂಸ್ಕೃತಿಯೇ ಶ್ರೇಷ್ಠವೆಂದೂ ಅದೇ ಅಚಿತಿಮವೆಂದೂ ನಂಬುತ್ತ ನಂಬಿಸುತ್ತ, ಪರಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ. ಇಂತಹ ಪ್ರವೃತ್ತಿಗೆ ವಿವೇಕಾನಂದರು ಕಟ್ಟಾವಿರೋಧಿಯಾಗಿದ್ದರು.

**28. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?**

DDPI Office, Kolar Dist.

ಉ: 10-09-1892 ರಂದು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಮಾತನಾಡುತ್ತ ವಿವೇಕಾನಂದರು " ಸ್ವಮತಾಭಿಮಾನ, ಅನ್ಯ ಮತ ದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರಿಯುತ್ತಿತ್ತು" ಎಂದು ಹೇಳಿದ್ದಾರೆ.

**29. ವಿವೇಕಾನಂದರು ಇಂದಿಗೂ ಸತ್ಯ ಏಕೆ?**

ಉ: ವಿವೇಕಾನಂದರ' ಧೀರೋದಾತ್ತ' ನಿಲುವುಗಳು ವೈಯಕ್ತಿಕ ಮಾತ್ರವಾಗದೆ ಸಾಮಾಜಿಕವಾಗಿ ರೂಪಾಂತರಗೊಂಡು ಗಟ್ಟಿಯಾದದ್ದೇ ಅವರ ವ್ಯಕ್ತಿತ್ವದ ವಿಶೇಷ ಅವರದು ಪ್ರಖರ ಸಾಮಾಜಿಕ ವ್ಯಕ್ತಿತ್ವ. ದೀನ ದಲಿತರ ಉದ್ಧಾರವೇ ಅವರ ಧರ್ಮದ ಮೊದಲ ತತ್ವ. ಅದೇ ಅವರ ವೈಚಾರಿಕ ಸತ್ವ. ಆದ್ದರಿಂದ ವಿವೇಕಾನಂದರು ಇಂದಿಗೂ ಸತ್ಯ.

**30. ವಸಂತ ಮುಖತೋರಲಿಲ್ಲ ಪದ್ಯದಲ್ಲಿ ಪಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**

ಉ: ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಮೈತುಂಬಿ ನಿಂತಿದೆ. ಅದರ ಮೇಲೆ ರೆಕ್ಕೆ ಬಿಚ್ಚಿ ಹಾರುವ ಹಕ್ಕಿಗಳ ಕಲರವ ಕೇಳುತ್ತಿದೆ.ಕೋಗಿಲೆಗಳು ಅಲ್ಲಿ ಕುಳಿತು ಮನತುಂಬಿ ಹಾಡುತ್ತಿವೆ. ಕಡಲುಕ್ಕಿ ಹರಿಯುವ ಸಂಭ್ರಮ ಇಳೆಯನ್ನೆಲ್ಲಾ ಆವರಿಸಿದೆ. ಈ ರೀತಿಯಾಗಿ ಕವಿಯು ವಸಂತ ಮುಖ ತೋರಲಿಲ್ಲ ಪದ್ಯದಲ್ಲಿ ಪ್ರಕೃತಿಯ ಸಂಭ್ರಮವನ್ನು ವ್ಯಕ್ತಪಡಿಸಿದ್ದಾರೆ.

**31. ವಸಂತ ಮುಖ ತೋರಲಿಲ್ಲ ಪದ್ಯದಲ್ಲಿ ಪುಟ್ಟ ಪೋರಿಯ ಗುಡಿಸಲಿನ ಸ್ಥಿತಿಯನ್ನು ಹೇಗೆ ಚಿತ್ರಿಸಿದ್ದಾರೆ?**

ಉ: ಗುಡಿಸಲಿನ ಗೋಡೆಯು ಸುಣ್ಣಕಾಣದೆ ಮುಖ ಮುಚ್ಚಿಕೊಂಡಿದೆ. ಗುಡಿಸಲೊಳಗೆ ಕತ್ತಲು ಗವ್ವೆನ್ನುತ್ತಿದೆ. ಗುಡಿಸಲಿನಲ್ಲಿ ಗೂರುತ್ತ ಅಮ್ಮ ಮಲಗಿದ್ದಾಳೆ. ತೂತುಬಿದ್ದ ಸೀರೆಯಲ್ಲಿ ಬಾಲರವಿ ಸೋರಗಿದ್ದಾನೆ.

**32. ಪುಟ್ಟಿಯ ಪ್ರಶ್ನೆಗಳೇನು?**

ಉ: ಗುಡಿಸಲೊಳಗೆ ಬರಲು ವಸಂತ ಹೆದರಿದನೆ? ಹರಿದ ಚಿಂದಿ ಬಟ್ಟೆಗಲ ಕಂಡು ಅವನು ಮರುಗುದನೆ? ಮತ್ತೆ ಮತ್ತೆ ನೆಲವ ತಟ್ಟಿ ಪುಟ್ಟಿಯು ಪ್ರಶ್ನಿಸಿಕೊಳ್ಳುತ್ತಾಳೆ.

**33. ಯಾರು ಯಾರಿಗೆ ವಸಂತ ಮುಖ ತೋರಲಿಲ್ಲ?**

ಉ: ಕಮ್ಮಾರನಿಗೆ, ಕುಂಬಾರನಿಗೆ, ನೇಕಾರನಿಗೆ, ಕೇರಿಯ ಮಾರನಿಗೆ ವಸಂತ ಮುಖ ತೋರಲಿಲ್ಲ. ಇದರಿಂದಾಗಿ ಕಮ್ಮಾರನ ಕುಲುಮೆ ಉರಿಯಲಿಲ್ಲ. ಕುಂಬಾರನ ಕುಲಾಲಚಕ್ರ ತಿರುಗಲಿಲ್ಲ. ನೇಕಾರನ ಮಗ್ಗ ಉಸಿರಾಡಲಿಲ್ಲ. ಕೇರಿಯ ಮಾರನ ಒಲೆ ಹೊತ್ತಲಿಲ್ಲ.

**34. ಭಗತ್ ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಮದು ತೋರಿಸುತ್ತಾರೆ?**

ಉ: ಜಲಿಯನ್ ವಾಲಾಬಾಗ್ ಅಂತರ್ಮುಖಿಯಾಗಿ ನಿಂತ ಭಗತ್ ಸಿಂಗ್ ಅಲ್ಲಿಯ ಮಣ್ಣನ್ನು ತನ್ನ ಡಬ್ಬದಲ್ಲಿ ತುಂಬಿಕೊಂಡನು. ಮನೆಗೆ ಹಿಂತಿರುಗಿದಾಗ ಅವನ ಸಹೋದರಿ ಎಂದಿನಂತೆ ಅವರನ್ನು ಊಟಕ್ಕೆಬ್ಬಿಸಿದರೆ ಒಲ್ಲೆನೆಂದು ತಿರುಗಿಸಿದ. ಅವನಿಗೆ ಪ್ರಿಯವಾದ ಮಾವಿನ ಹಣ್ಣೊಂದನ್ನು ಕೂಡ ನಿರಾಕರಿಸಿ , ಅವಳನ್ನು ಮನೆಯ ಹಿಂಬಾಗಕ್ಕೆ ಕರೆದೊಯ್ದು , ತನ್ನ ಡಬ್ಬಿಯಲ್ಲಿ ಮಣ್ಣನ್ನು ತೋರಿಸಿದ. ರಕ್ತದಲ್ಲಿ ಕಲೆಸಿದಂತಿದ್ದ ಆ ಮಣ್ಣು ತ್ಯಾಗದ ಪ್ರತೀಕ ಎಂದು ತಿಳಿಯ ಹೇಳಿದ.

**35. ಜಲಿಯನ್ ವಾಲಾಭಾಗ್‌ನಲ್ಲಿರುವ ಒಕ್ಕಣೆ ಏನು?**

ಉ: "ಏಪ್ರಿಲ್-12-1919 ರಂದು ಬ್ರಿಟಿಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ಧ ಹಿಂದೂ ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ" ಎಂದು ಜಲಿಯನ್ ವಾಲಾಬಾಗ ನಲ್ಲಿ ಒಕ್ಕಣೆ ಬರೆಯಲಾಗಿತ್ತು.

**36. ಭಗತ್ ಸಿಂಗ್ ನ ಸಹಚರರು ಯಾರು ಯಾರು?**

ಉ: ಜಲಿಯನ್ ವಾಲಾಬಾಗಿನ ರಕ್ತಸಿಕ್ತವಾದ ಮಣ್ಣನ್ನು ನಿಧಿಯಂತೆ ಕಾಪಾಡಿಕೊಂಡು ಬಂದಿದ್ದ ಬಾಲಕ ಭಗತ್ ಸಿಂಗ್ ಮುಂದೆ ತನ್ನ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ಮರಣದಂಡನೆಗೆ ಈಡಾಗಿ ತನ್ನ ಸಹಚರರಾದ ಸುಖದೇವ್, ರಾಜಗುರು ಭಟುಕೇಶ್ವರ ದತ್ತರೊಂದಿಗೆ ಹಸನ್ಮುಖಿಯಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಅಮರನಾದನು.

**37.ಒಗಟುಗಳಿಂದ ಶೈಕ್ಷಣಿಕ ಲಾಭವೇನು?**

ಉ: ಒಗಟುಗಳನ್ನು ಬಿಡಿಸುವುದರಿಂದ ಮನಸ್ಸು ಉಲ್ಲಸಿತವಾಗಿರುತ್ತದೆ. ಚಿಂತನಾಶಕ್ತಿ ಹೆಚ್ಚಾಗುತ್ತದೆ. ಸೃಜನಶೀಲತೆ ಬೆಳೆಯುತ್ತದೆ. ಬೌದ್ಧಿಕ ಸಾಮರ್ಥ್ಯ ಹೆಚ್ಚಾಗುವುದರಿಂದ ಓದುವುದರಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಾರೆ.

**38.ಅಂಗಿ ಎನ್ನುವ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿರಿ.**

ಉ: ಕೈಯುಂಟು ಕಾಲಿಲ್ಲ. ಶಿರಹರಿದ ಮುಂಡ ಮೈಯೊಳಗೆ ನವಗಾಯ ಒಂಬತ್ತು ತುಂಡ ಒಯ್ಯ ಒಯ್ಯನೇ ಬಂದು ಹೆಗಲೇರಿಕೊಂಡ ರಾಯ ರಾರಿಗೆಲ್ಲ ತಾನೇ ಪ್ರಚಂಡ. ಇದು ಅಂಗಿ ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆ.

DDPI Office, Kolar Dist.

**೩೯. ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ?**

ಉ: ಕೆಸರಲ್ಲಿ ಹುಟ್ಟೋದು ಕೆಸರಲ್ಲಿ ಬೆಳೆಯೋದು ಅದು ಒಂದು ಗಿಡದ ಪರಿಕಾರ ಎಲೆ ಬಾಲೆ ಬಾರೆ ನಮ್ಮರ್ಥ ಒಡೆದ್ಹೇಳೆ ಎಂದು ಒಗಟು ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ವಿವರಿಸುತ್ತದೆ.

**40. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿರಿ?**

ಉ: ಶ್ರೀರಾಮನ ಅಶ್ವಮೇಧ ಕುದುರೆಯು ರಾಜ್ಯವನ್ನು ಸುತ್ತಿ ಬರುತ್ತಿರಲು ಎಲ್ಲರಾಜ್ಯಗಳ ಶಕ್ತಿಶಾಲಿಗಳಾದ ಮಹಾರಾಜರುಗಳು ರಾಮನ ಕುದುರೆಯೆಂಬ ಹೆಸರನ್ನು ಕೇಳಿಯೇ ಅದನ್ನು ತಡೆಯಲು ಹೆದರಿದರು. ಕುದುರೆಗೆ ನಮಿಸಿ ಬೀಳ್ಕೊಡುತ್ತಿದ್ದರು. ಹೀಗೆ ರಾಜ್ಯಗಳನ್ನು ಸಂಚರಿಸುತ್ತಾ ಬರುತ್ತಿರುವ ಸುಂದರವಾದ ಅಶ್ವಮೇಧ ಕುದುರೆಯು ವಾಲ್ಮೀಕಿ ಆಶ್ರಮದಲ್ಲಿ ಬೆಳೆದ ಹಸುರಿನ ಹುಲ್ಲಿಗೆ ಆಸೆಪಟ್ಟು ಆಶ್ರಮಕ್ಕೆ ಬಂದಿತು.

**41. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೇಂದು ಬರೆಯಲಾಗಿತ್ತು.?**

ಉ:ಯಜ್ಞಾಶ್ವದ ಹಣೆಯ ಪಟ್ಟಿಯಲ್ಲಿ" ಭೂಮಿಯಲ್ಲಿ ಕೌಸಲ್ಯೆಯ ಮಗ ರಾಮನೋರ್ವನೆ ವೀರನು. ಆತನ ಯಜ್ಞದ ಕುದುರೆ ಇದು.ರಾಮನನ್ನು ಎದುರಿಸಿ ಯುದ್ಧ ಮಾಡಲು ಶಕ್ತಿ ಇರುವ ಯಾರಾದರೂ ಇದ್ದರೆ ಈ ಕುದುರೆಯನ್ನು ತಡೆಯಬಹುದು.(ಕಟ್ಟಬಹುದು)." ಎಂದು ಬರೆಯಲಾಗಿತ್ತು.

**42 . ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯ ಭಯವನ್ನು ಬಿತ್ತಿದನು ?**

ಉ; ಕರ್ಣ ಕೌರವರು ಯಾದವರಿಗೆ ಭೇದವಲ್ಲ .ಇಬ್ಬರೂ ಒಂದೇ ವಂಶದವರು ನಿನ್ನಾಣೇಯಾಗಿಯೂ ನೀನೆ ಈ ಭೂಮಿಗೆ ಒಡೆಯ ,ಆದರೆ ನಿನಗೆ ಅದರ ಅರಿವಿಲ್ಲ ಲಲನೆ ಪಡೆದ ಐದು ಮಂತ್ರಗಳಲ್ಲಿ ಮೊದಲಿಗನೇ ನೀನು .ಎಂದು ಆತನ ವಂಶದ ಕುರಿತು ಹೇಳಿ ಕರ್ಣನಲ್ಲಿ ಭಯವನ್ನು ಬಿತ್ತಿದನು ಕೃಷ್ಣ.

**43.ಕುಂತಿ ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು ?**

ಉ; ಕುಂತಿಯು ಮೊದಲು ಸೂರ್ಯನನ್ನು ಸ್ಮರಿಸಿ ಮಂತ್ರವನ್ನು ಪಠಸಿ ಕರ್ಣನನ್ನು ಪಡೆದಳು.ಯಮಧರ್ಮನ ಸ್ಮರಿಸಿ ಮಂತ್ರವನ್ನು ಪಠಿಸಿ ಧರ್ಮರಾಯನನ್ನು, ವಾಯುದೇವನನ್ನುಸ್ಮರಿಸಿ ಮಂತ್ರವನ್ನು ಪಠಸಿ ಭೀಮನನ್ನು ಮತ್ತು ಇಂದ್ರನನ್ನು ಸ್ಮರಿಸಿ ಮಂತ್ರವನ್ನು ಪಠಿಸಿ ಅರ್ಜುನನ್ನು ಪಡೆದಳು . ಮಾದ್ರಿಯು ಅಶ್ವಿನಿದೇವತೆಗಳನ್ನು ಸ್ಮರಿಸಿ ಮಂತ್ರವನ್ನು ಪಠಿಸಿ ನಕುಲ ಸಹದೇವರನ್ನು ಪಡೆದಳು.

**44.ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವಗಳೇನು?**

ಉ: ಕೃಷ್ಣನು ಕರ್ಣನಿಗೆ ಆತನ ಜನ್ಮ ವೃತ್ತಾಂತವನ್ನು ಹೇಳಿ ಆತನ ಮನಸನ್ನು ತಲ್ಲಣಗೊಳಿಸಿದನು. ನಿನ್ನನ್ನು ಕೌರವ ಪಾಂಡವರಿಗೆಲ್ಲ ಹಸ್ತಿನಾಪುರದ ರಾಜನನ್ನಾಗಿ ಮಾಡುತ್ತೇನೆ ಎಂಬ ಆಮಿಷವನ್ನು ಒಡ್ಡಿದಾಗ ಅವನ (ಕರ್ಣನ) ಕೊರಳ ಸೆರೆ ಹಿಗ್ಗಿದವು. ಕಣ್ಣಿನಿಂತ ನೀರು ಹರಿದು ತುಂಬಾ ಸಂಕಟ ಪಟ್ಟಿದನು . "ಅಯ್ಯೋ ಕುರುಪತಿಗೆ ಕೇಡಾಯಿತು" ಎಂದು ತನ್ನ ಮನಸಿನಲ್ಲಿ ಅಂದುಕೊಂಡನು. ಕೃಷ್ಣನ ದ್ವೇಷದ ಬೆಂಕಿ ಹೊಗೆಯಾಡಿದ ಮೇಲೆ ಅದು ಪೂರ್ತಿಯಾಗಿ ಕೌರವರನ್ನು ಸುಡದೆ ಹಾಗೇ ಬಿಡುವುದೇ ನನ್ನ ಜನ್ಮ ವೃತ್ತಾಂತವನ್ನು ಹೇಳಿ ಕೊಂಡನು .ಇನ್ನು ಹೆಚ್ಚಿಗೆ ಏನು ಮಾತನಾಡಲಿ ಎಂದು ದುಃಖಿಸಿದನು.

**45.ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?**

ಉ: ಕೃಷ್ಣ ಎಷ್ಟೇ ಆಮಿಷಗಳನ್ನು ಒಡ್ಡಿದರು ನಾನು ಕೌರವೇಂದ್ರನಿಗಾಗಿಯೇ ಯುದ್ಧವನ್ನು ಬಲದಲಿ ಹೋರಾಡಿ ಶತ್ರುಗಳ ರುಂಡವನ್ನು ಮಹಾಭಾರತ ಯುದ್ಧವನ್ನು ಮಾರಿಗೌತಣವಾಗಿ ನೀಡುತ್ತೇನೆ, ನನ್ನ ಗಜಭುಜ ಬಲದ ಶೌರ್ಯವನ್ನು ತೋರಿಸುತ್ತೇನೆ ನನ್ನ ಒಡೆಯನಾದ ದುರ್ಯೋಧನನ ಜಯಕ್ಕಾಗಿ ನನ್ನ ಶರೀರವನ್ನೇ ನೂಕುವೇನು (ಪ್ರಾಣಬಿಡುವೆನು) .ಆದರೆ ನಿನ್ನ ತಂದೆಯಾದ ಸೂರ್ಯನಾಣೆಯಾಗಿ ಹೇಳುತ್ತೇನೆ ಎಂದು ಕರ್ಣನು ತೀರ್ಮಾನಿಸಿದನು.

**46. ಕವಿಗೆ ಯಾವ್ಯಾವುದರಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ ?**

ಉ: ಕವಿಗೆ ಆಶ್ವೇಜ ಮಾಸದ ನವರಾತ್ರಿಯಲ್ಲಿ ಭೂಮಿಯು ನವೀನವಾಗಿ ಕಾಣುತ್ತಿದೆ ಆಕಾಶವು ಹಸುರು,ಮುಗಿಲು ಹಸುರು, ಗದ್ದೆಯ ಬಯಲು ಹಸುರಾಗಿ ಕವಿಯ ಕಣ್ಮನ ಸೆಳೆಯುತ್ತಿದೆ. ನಡುವಿನ ಕಣಿವೆಯೂ ಹಸುರಿನಿಂದ ಕಂಗೊಳಿಸುತ್ತಿದೆ ಇವುಗಳ ಮೇಲೆ ಬೀಳುವ ಸಂಜೆಯ ಬಿಸಿಲು ಕೂಡ ಕವಿಯ ನೋಟಕ್ಕೆ ಹಸುರಾಗಿ ಕಾಣಿಸುತ್ತಿದೆ.

**47.ಹಸುರು ಸಕಲೇಂದ್ರಿಯವನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?**

ಉ: ಆಶ್ವೇಜ ಮಾಸದ ನವರಾತ್ರಿಯ ಸಂದರ್ಭ ಕವಿಯು ಮಲೆನಾಡಿನ ಸೊಬಗಲ್ಲಿ ಮಿಂದೆದ್ದಿದ್ದಾರೆ. ಸುರಿಯುವ ಮಳೆಯಲ್ಲಿ ಚಿಗುರಿ ಸೊಂಪಾಗಿ

DDPI Office, Kolar Dist.

ಬೆಳೆದ ಗಿಡಮರಗಳು ಪ್ರಕೃತಿಯ ಸೊಬಗನ್ನು ಹೆಚ್ಚಿಸಿ ಕವಿಗೆ ನೋಡಿದ್ದೆಲ್ಲಾ ,ಕೇಳಿದ್ದೆಲ್ಲಾ, ಸ್ಪರ್ಶಿಸಿದ್ದೆಲಾ ಹಸುರಾಗಿ ಕಾಣುತ್ತಿದೆ ,ಆಕಾಶದಿಂದ ಭೂಮಿಯವರೆಗೆ ಎಲ್ಲವೂ ಹಸುರಾಗಿ ಕಾಣುತ್ತಿದೆ ಹೂವಿನ ಕಂಪು, ಗಾಳಿಯ ತಂಪು ,ಹಕ್ಕಿಯ ಕೊರಳಿನ ಇಂಪು ಹಸುರಾಗಿ ಭೂಮಿಯ ಉಸಿರೆ ಹಸುರಾಗಿ ಕವಿಯ ಸಕಲೇಂದ್ರಿಯವನ್ನು ವ್ಯಾಪಿಸಿದೆ.

**48.ಕವಿಯಾತ್ಮ ಹಸುರುಗಟ್ಟಲು ಕಾರಣವಾದ ಹಿನ್ನಲೆಯ ಅಂಶಗಳೇನು?**

ಉ: ಆಶ್ವೀಜ ಮಾಸದ ನವರಾತ್ರಿಯಲ್ಲಿ ಧಾತ್ರಿಯು ನವನವೀನವಾಗಿ ಮೈತಳೆದು ನಿಂತಿದೆ. ಕವಿಗೆ ಎತ್ತ ನೋಡಿದರೂ ಮಲೆ,ಕಣಿವೆ, ಗದ್ದೆಯ ಬಯಲು ಹಾಸಿದ ಹಸುರಿನ ಜಮಖಾನೆಯಂತೆ ತೋರುತ್ತಿದೆ ಅತ್ತ ,ಇತ್ತ,ಸುತ್ತ ,ಎತ್ತಲೂ ಹಸುರನ್ನೇ ಕಾಣುವ ಕಣ್ಣು ಹಸುರಿನ ಸಾಗರವನ್ನೇ

(ವಿಶಾಲತೆ)ಕಲ್ಪಿಸಿಕೊಳ್ಳುತ್ತಿದೆ ಇಂತಹ ಹಸುರಿನ ಪ್ರಕೃತಿಯ ಮಧ್ಯದಲ್ಲಿರುವ ಕವಿಯ ಆತ್ಮವು ಹಸುರಾಗಿ ಸಂತಸವನ್ನು ಪಡೆಯುತ್ತಿದೆ.

**49.ತಾನು ಹೋರಾಡುತ್ತಿರುವುದು ನೆಲಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?**

ಉ: ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರನ್ನು ನೋಡಲು ದುರ್ಯೋಧನನು ಬರುತ್ತಾನೆ ಆಗ ಭಿಷ್ಮನು ನೀನು ಒಪ್ಪುವುದಾದರೆ ಪಾಂಡವರೊಡನೆ ಸಂದಿಯನ್ನು ಮಾಡಿಸುತ್ತೇನೆ ನಾನು ಹೇಳಿದರೆ ಅವರು ಕೇಳುತ್ತಾರೆ ಎನ್ನುತ್ತಾನೆ.ಆಗ ದುರ್ಯೋಧನನು ನಾನು ನಮಸ್ಕರಿಸಲು ಬಂದಿದ್ದೇನೆಯೇ

ಹೊರತು ಸಂಧಿಮಾಡಿಕೊಳ್ಳಲು ಅಲ್ಲ. ನೆಲಕ್ಕಾಗಿಹೋರಾಡುತ್ತೇನೆ ಎಂದು ಕೊಂಡಿದ್ದೀಯಾ ಇಲ್ಲ. ಛಲಕ್ಕಾಗಿ ಹೋರಾಡುತ್ತೇನೆ. ಪಾಂಡುಸುತರೊಳೀನೆಲನಿದು ಪಾಳು ನೀ ನನ್ನ ಪ್ರೀತಿಯ ಗೆಳೆಯನಾದ ಕರ್ಣನನ್ನು ಕೊಲಿಸಿದ ಈ ನೆಲದಲ್ಲಿ ಮಾತ್ರ ಬಾಳೂವುದಿಲ್ಲ ಎಂದು ಹೇಳುತ್ತಾನೆ.

**50.ಈ ನೆಲನೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?**

ಉ: ನನ್ನ ಪ್ರೀತಿಯ ತಮ್ಮನಾದ ದುಶ್ಯಾಸನನನ್ನು ಮತ್ತು ಪ್ರೀತಿಯ ಗೆಳಯನಾದ ಕರ್ಣನನ್ನು ಸಾಯಿಸಿದ ಪಾರ್ಥಭೀಮರು ಇರುವವರೆಗೆ ನನ್ನ ದೇಹದಲ್ಲಿ ಪ್ರಾಣವಿರುವವರೆಗೂ ಸಂಧಿಯನ್ನು ಮಾಡಿಕೊಳ್ಳುವುದಿಲ್ಲ ಅವರಿಬ್ಬರನ್ನು ಮೊದಲು ಸಾಯಿಸಿ ಬಳಿಕ ಧರ್ಮರಾಯನೊಡನೆ ಸಂಧೀಯಿನ ೞವೇನು ಮಾಡಿಕೊಳ್ಳುವೆನು ಅಲ್ಲಿಯವರೆಗೂ ಈ ನೆಲದೊಡನೆ ಸಹಬಾಳ್ವೆ ಮಾಡುವುದಿಲ್ಲ ಎಂದು ದುರ್ಯೋಧನ ಹೇಳುತ್ತಾನೆ.

★★★★★★★★★★★★★★★★

DDPI Office, Kolar Dist.

**ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ & ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು.**

**ಸಾರಾ ಅಬೂಬಕ್ಕರ್**

ಲೇಖಕಿ ಸಾರಾ ಅಬೂಬಕ್ಕರ್ ಅವರು 30 ಜೂನ್ 1936 ರಂದು ಕಾಸರಗೋಡಿನಲ್ಲಿ ಜನಿಸಿದರು. (ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳುವುದು ಅಪರೂಪ ಎನ್ನುವ ಸಂದರ್ಭದಲ್ಲಿ ಬರವಣಿಗೆ ಆರಂಭಿಸಿದ ಇವರು ಇಂದು) ನಾಡಿನ ಖ್ಯಾತ ಕತೆಗಾರ್ತಿ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯತೆಯನ್ನು ಗಳಿಸಿದ್ದಾರೆ. ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ ಮೊದಲಾದವು ಇವರ ಪ್ರಮುಖ ಕಾದಂಬರಿಗಳು ಇವರ ಸಾಹಿತ್ಯ ಕೃಷಿಗಾಗಿ ಅನೇಕ ಪ್ರಶಸ್ತಿಗಳು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ ಲಭಿಸಿವೆ.

**ಕುಮಾರವ್ಯಾಸ**

ಕುಮಾರವ್ಯಾಸ ಎಂದೇ ಪ್ರಸಿದ್ಧನಾಗಿರುವ ಗದುಗಿನ ನಾರಾಣಪ್ಪ. ಗದಗ ಪ್ರಾಂತ್ಯದ ಕೋಳಿವಾಡದಲ್ಲಿ ಕ್ರಿ.ಶ. 1420ರಲ್ಲಿ ಜನಿಸಿದರು, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರನ್ನು ಹೊಂದಿರುವ ಕರ್ಣಾಟ ಭಾರತ ಕಥಾಮಂಜರಿ ಎಂಬ ಕಾವ್ಯವನ್ನು ಬರೆದು ಖ್ಯಾತನಾದ ಈತ ಐರಾವತ ಎಂಬ ಕೃತಿಯನ್ನೂ ರಚಿಸಿದ್ದಾನೆ, ರೂಪಕಾಲಂಕಾರವನ್ನು ನಿರರ್ಗಳವಾಗಿ ಪ್ರಯೋಗಿಸಿ 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದನ್ನು ಪಡೆದಿದ್ದಾರೆ.

**ಎ.ಎನ್ ಮೂರ್ತಿರಾವ್**

ಆಧುನಿಕ ಕನ್ನಡದ ಸಾಹಿತ್ಯದ ಪ್ರಮುಖ ಗದ್ಯಬರಹಗಾರರಲ್ಲಿ ಒಬ್ಬರಾದ, ಎ.ಎನ್ ಮೂರ್ತಿರಾವ್‌ರವರು ಪ್ರಬಂಧಕಾರರಾಗಿಯೇ ಮಾನ್ಯರಾಗಿದ್ದಾರೆ. ಇವರ ಪೂರ್ಣ ಹೆಸರು ಅಕ್ಕಿ ಹೆಬ್ಬಾಳು ನರಸಿಂಹ ಮೂರ್ತಿರಾವ್, ಎ.ಎನ್. ಮೂರ್ತಿರಾವ್‌ರವರು 1900 ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಲಿನಲ್ಲಿ ಜನಿಸಿದರು, ಇವರು 'ಹಗಲುಗನಸುಗಳು, ಅಲೆಯುವಮನ, ಅಪರವಯಸ್ಕನ ಅಮೇರಿಕಾಯಾತ್ರೆ, ಮಿನುಗು–ಮಿಂಚು, ಪೂರ್ವಸೂರಿಗಳೊಡನೆ ಚಂಡಮಾರುತ, ಚಿತ್ರಗಳು–ಪತ್ರಗಳು, ದೇವರು' ಎಂಬ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ, 'ಚಿತ್ರಗಳು–ಪತ್ರಗಳು' ಎಂಬ ಕೃತಿಗೆ ಕೇಂದ್ರ ಸಾಹಿತ್ತಯ ಆಕಾಡೆಮಿ ಪ್ರಶಸ್ತಿ, ದೇವರು' ಎಂಬ ಕೃತಿಗೆ ಪಂಪ ಪ್ರಶಸ್ತಿ ಲಭಿಸಿದೆ.

**ಪು.ತಿ.ನ**

ಪು.ತಿ.ನ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್, ಇವರು ಮಂಡ್ಯ ಜಿಲ್ಲೆಯ ಮೇಲು ಕೋಟೆಯಲ್ಲಿ 1905ರಲ್ಲಿ ಜನಿಸಿದ್ದಾರೆ. ಕನ್ನಡ ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು ಅಹಲ್ಯೆ, ಕೋಕುಲ ನಿರ್ಗಮನ, ಶಬರಿ, ಹಣತೆ ಮೊದಲಾದ ಕೃತಿಗಳನ್ನು ಬರೆದಿದ್ದಾರೆ, ಇವರಿಗೆ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ತಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ.

**ದೇವನೂರ ಮಹದೇವ.**

ಕ್ರಿ. ಶ. 1948 ರಲ್ಲಿ ನಂಜನಗೂಡಿನ ದೇವನನೂರಿನಲ್ಲಿ ಜನಿಸಿದರು. ಇವರು ಬಂಡಾಯ ಮತ್ತು ದಲಿತ ಸಾಹಿತ್ಯದ ಪ್ರಮುಖರಲ್ಲಿ ಒಬರು. ಶಬ್ದಶಿಲ್ಪಿ ಎಂದೇ ಹೆಸರಾಗಿದ್ದಾರೆ. ದ್ಯಾವನೂರು, ಒಡಲಾಳ, ಕುಸುಮಬಾಲೆ ಮುಂತಾದ ಪ್ರಸಿದ್ಧ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

DDPI Office, Kolar Dist.

**ಜಿ.ಎಸ್.ಶಿವರುದ್ರಪ್ಪ**

ರಾಷ್ಟ್ರಕವಿ ಎಂಬ ಅಭಿದಾನಕ್ಕೆ ಪಾತ್ರರಾಗಿರುವ ಜಿ.ಎಸ್.ಶಿವರುದ್ರಪ್ಪನವರು 1926ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದ್ದಾರೆ. ಸಾಮಗಾನ, ದೇವಶಿಲ್ಪಿ, ಎದೆ ತುಂಬಿ ಹಾಡಿದೆನು, ದೀಪದ ಹೆಜ್ಜೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ ಪುರಸ್ಕಾರ, ಪಂಪ ಪ್ರಶಸ್ತಿಗಳು ಲಭಿಸಿವೆ.

**ರನ್ನ**

ಕನ್ನಡದ ರತ್ನತ್ರಯರಲ್ಲಿ ಒಬ್ಬನೆನಿಸಿಕೊಂಡಿರುವ ರನ್ನ 949 ರಲ್ಲಿ ಬಾಗಲಕೋಟೆ ಜಿಲ್ಲೆಯ ಮುದುವೊಳಲಿನಲ್ಲಿ ಜನಿಸಿದರು. ಚಾಲುಕ್ಯ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದನು, ಇವರ ಪ್ರಮುಖ ಕೃತಿಗಳೆಂದರೆ "ಸಾಹಸಭೀಮ ವಿಜಯಂ" (ಗದಾಯುದ್ಧ) ಅಜಿತ ತೀರ್ಥಂಕರ ಪ್ರರಾಣ ತಿಲಕ ಪರಶುರಾಮ ಚರಿತಂ ಇತ್ಯಾದಿ, ಇವರಿಗೆ ಕವಿ ಚಕ್ರವರ್ತಿ' ಎಂಬ ಬಿರುದು ಇತ್ತು.

**ಲಕ್ಷ್ಮೀಶ**

ಲಕ್ಷ್ಮೀಪತಿ ಎಂಬ ಹೆಸರುಳ್ಳ ಈ ಕವಿಯು ಕ್ರಿ.ಶ 1550ರಲ್ಲಿ ಚಿಕ್ಕಮಂಗಳೂರು ಜಿಲ್ಲೆಯ ದೇವನೂರಿನಲ್ಲಿ ಜನಿಸಿದ್ದಾರೆ. ಜೈಮನಿಭಾರತ ಇವರ ಪ್ರಸಿದ್ಧ ಕಾವ್ಯವಾಗಿದೆ. ಈ ಕವಿಯು ತನ್ನ ಕಾವ್ಯದಲ್ಲಿ ಉಪಮಾಲಂಕಾರಗಳನ್ನು ಹೆಚ್ಚು ಬಳಸಿದ್ದರಿಂದ 'ಉಪಮಾಲೋಲ' ನೆಂದೂ ಕರ್ಣಾಟ ಕವಿಚೂತವನ ಚೈತ್ರ ಎಂಬ ಬಿರುದುಗಳನ್ನು ಗಳಿಸಿದ್ದಾರೆ.

**ಕುವೆಂಪು**

ಈ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು ಮಲೆನಾಡಿನ ಕುಪ್ಪಳ್ಳಿಯಲ್ಲಿ 1904ರಲ್ಲಿ ಜನಿಸಿದ್ದಾರೆ. ಇವರ ಕೃತಿಗಳೆಂದರೆ ಕೊಳಲು, ಪಕ್ಷಿಕಾಶಿ, ಕಾನೂರು ಹೆಗ್ಗಡತಿ, ಶ್ರೀರಾಮಾಯಣ ದರ್ಶನಂ ಮೊದಲಾದವುಗಳು, ಪ್ರಶಸ್ತಿಗಳು ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಂಪ ಪ್ರಶಸ್ತಿ ಇತ್ಯಾಧಿ.

**ದ.ರಾ. ಬೇಂದ್ರೆ**

ಅಂಬಿಕಾತನಯದತ್ತ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಇವರು ಧಾರವಾಡದಲ್ಲಿ 1896 ರಂದು ಜನಿಸಿದರು. ನವೋದಯ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು, ಸಖೀಗೀತ, ನಾಕುತಂತಿ, ನಾದಲೀಲೆ, ಇತ್ಯಾದಿ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಸಂದ ಪ್ರಶಸ್ತಿಗಳೆಂದರೆ ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಬಿಸಿದೆ.

DDPI Office, Kolar Dist.

**ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣ ವಿಭಾಗಿಸಿ ,ಛಂದಸ್ಸಿನ ಹೆಸರು ಬರೆಯಿರಿ .**

**ಕಂದ ಪದ್ಯ**

1.

| 4 | 4 | 4 | |
|---|---|---|---|
| –∪∪ | –∪∪ | –∪∪ | |
| ಮಲ್ಲಿಗೆ | ಯಲ್ಲದೆ | ಸಂಪಗೆ | = 12 ಮಾತ್ರೆಗಳು |

| 4 | 4 | 4 | 4 | 4 | |
|---|---|---|---|---|---|
| –∪∪ | – – | ∪–∪ | –∪∪ | – – | |
| ಯಲ್ಲಿದೆ | ದಾಳಿಂ | ಬಮಲ್ಲಿ | ದೊಪ್ಪುವ | ಚೆಂದಂ | =20 |

2. ಅತಿಕುಟಿ ಲಮನಂಧನಲು
   ಬ್ಧತೆಯಿಂದಂದು ಷ್ಪಬುದ್ಧಿನುಡಿದಂಪುಸಿಯಂ

3. ನಿಮಗೆ ಪೊಡೆಮಟ್ಟು ಪೋಪೀ
   ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ

**ಭಾಮಿನಿ ಷಟ್ಪದಿ**

1.

| | | | | |
|---|---|---|---|---|
| ∪∪∪ | ∪ ∪ ∪ ∪ | ∪ ∪∪ | – ∪∪ | |
| ಜಲ ನಿ | ದ್ಹಿ ಗೆ ಸ ರಿ | ಸ ರ ಸಿ | ಯಾವುದು | = |

| | | | |
|---|---|---|---|
| ∪∪∪ | ∪∪∪∪ | – ∪ | – – |
| ನೆಲಕೆ | ಹಿತವನ | ದಾರು | ಮರ್ತ್ಯಾ |

| | | | | | | |
|---|---|---|---|---|---|---|
| ∪∪∪ | – ∪ ∪ | – ∪ | – – | ∪∪∪ | ∪∪– | – |
| ವಳಿಗೆ | ಮಾತೆಯ | ದಾರು | ಸೂರ್ಯ | ಪ್ರಭೆಗೆ | ಸರಿಯೇ | ನು |

2. ಮಕ್ಕಳೈವರೊಳಾನು ಹಿರಿಯನು
   ತಕ್ಕಮಾತೆಯ ಮಾತುಸಂದೇ
   ಹಕ್ಕನೆಲೆಯಲ್ಲದುನಿಲಲಿಧಾರುಣಿಯ ಬಯಸುವರೆ

3. ಏನು ಹೇಳ್ವೆ ಕರ್ಣಚಿತ್ತ
   ಗ್ಲಾನಿಯಾವುದು ಮನಕೆಕುಂತೀ
   ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ.

**ವಾರ್ಧಕ ಷಟ್ಪದಿ**

1.

| | | | |
|---|---|---|---|
| ∪∪∪∪∪ | – ∪∪∪ | ∪∪∪– | ∪∪∪∪∪ |
| ಸತಿಮಡಿಸಿ | ನೀಡುವೆಲೆ | ವಿಡಿದಕೈ | ಬಸ ವಳಿದು |

| | | | |
|---|---|---|---|
| ∪∪ – ∪ | ∪ ∪ ∪ ∪ ∪ | ∪∪ – ∪ | ∪∪∪– |
| ದ ತಿ ಚಿಂತೆ | ಯೊಳು ಮರೆದ | ತನುಜೊಮ್ಮು | ವಿಡಿದಪು |

| | | | | | | |
|---|---|---|---|---|---|---|
| ∪ ∪ –∪ | – ∪ – | – ∪ – | ∪∪∪∪∪ | – – ∪ | –∪∪∪ | – |
| ರ್ಬತಿಭಾರ | ವಾಗಿ ಕ | ಣ್ಣುಚ್ಚಿತೋಳ್ | ತೊಡೆಮಿಡುಕೆ | ಸುಯ್‌ಸೂಸೆ | ನಿ ದ್ರೆ ಕ ವಿ | ದು |

2. ಪೊರಮಡುವಭೂಪಾಲನಂಕಂಡುಕಂಗೆಟ್ಟು
   ಮರುಗಿಬಸುರಂಹೊಸೆದುಬಸವಳಿದುಬಿಸುಸುಯ್ದು
   ಪೋರಮಟ್ಟುಬಾಯ್ವಿಟ್ಟುಕೈನೀಡಿಕರೆದುಕಟ್ಟೊರಲಿಸೈರಿಸಲಾರದೆ

DDPI Office, Kolar Dist.

3. ಉರ್ವಿಯೊಕೌಸಲ್ಯೆಪಡೆದಕುವರಂರಾಮ
ನೊರ್ವನೇವೇರನಾತನಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂತಡೆಯಲಂದಿರ್ದಲೇಖನವನೋದಿ

**ಖ್ಯಾತ ಕರ್ನಾಟಕಗಳು (ವೃತ್ತಗಳು)**

**ಉತ್ಪಲಮಾಲ ವೃತ್ತ**

| | ಭ | ರ | ನ | ಭ | ಭ | ರ | ಲಘು ಗುರು | |
|---|---|---|---|---|---|---|---|---|
| | –UU | –U– | UUU | –UU | –UU | –U– | U – | |
| 1. | ಕಟ್ಟುಗೆ | ಕಟ್ಟದಿ | ರ್ಕೆಕಡ | ಲಂಕಪಿ | ಸಂತತಿ | ವಾಮನ | ಕ್ರಮಂ | =20 ಅಕ್ಷರಗಳು |

U – – – U – U U U –
ಯ ಮಾ ತಾ ರಾ ಜ ಭಾ ನ ಸ ಲ ಗಂ

2. ಮೇದಿನಿಯಂಕ್ರಮಕ್ರಮದೆಪರ್ವಿದುದಾತ್ತನಭೋವಿಭಾಗಮಾ
3. ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದಪಾರ್ಥಭೀಮರು
ಳ್ಳನ್ನೆಗ

**ಚಂಪಕಮಾಲಾವೃತ್ತ**

| | ನ | ಜ | ಭ | ಜ | ಜ | ಜ | ರ | |
|---|---|---|---|---|---|---|---|---|
| | UUU | U–U | –UU | U – U | U–U | U – U | –U– | |
| 1. | ನೆನೆಯ | ದಿರಣ್ಣ | ಭಾರತ | ದೊಳಿಂಪೆ | ರರಾಗು | ಮನೊಂದೆ | ಚಿತ್ತದಿಂ | = 21 ಅಕ್ಷರಗಳು |

2. ಒಡವೆಯನರ್ಥಿಗಿತ್ತೆನವನ ಇತಮಂಗುರುಗಿತ್ತೆನೀಗಳೊಂ

**ಶಾರ್ದೂಲವಿಕ್ರೀಡಿತ ವೃತ್ತ**

| | ಮ | ಸ | ಜ | ಸ | ತ | ತ | ಗುರು | |
|---|---|---|---|---|---|---|---|---|
| | – – – | U U– | U–U | UU– | – –U | – – U | – | |
| 1. | ಇಂತೀಕಾ | ವ್ಯಮನೋ | ಲ್ಲುಡ್ಕೇಳ್ದ | ವಿಭುದರ್ | ಮೈವೆರ್ಚಿ | ಕೊಂಡಾಡೆ | ಪೇ | = 19 ಅಕ್ಷರಗಳು |

2. ಮಾತಂಗಾಸುರವೈರಿಯಲ್ಲಿಪಡೆದುಂಬಿಲ್ಲಂಧನುರ್ವಿದ್ಯೆಗಂ

**ಮತ್ತೇ ಭ ವಿಕ್ರೀಡಿತವೃತ್ತ**

| | ಸ | ಭ | ರ | ನ | ಮ | ಯ | ಲಘು ಗುರು | |
|---|---|---|---|---|---|---|---|---|
| | UU– | –UU | – U – | UUU | – – – | U – – | U–U | |
| 1. | ಕೆರೆಯಂ | ಕಟ್ಟಿಸು | ಬಾವಿಯಂ | ಸವೆಸು | ದೇವಾಗಾ | ರಮಂಮಾ | ಡಿಸಜ್ಜ | = 20 ಅಕ್ಷರಗಳು |

U–
ರೆಯೊಳ್

2. ತುಳಿದೆಂಸಾವಿರಶಾಲೆಮೆಟ್ಟಿಲುಗಳಂಪುತ್ರಂಗೆಸಿಟ್ಟೊಣದಕೇ

**ಸ್ರಗ್ಧರಾವೃತ್ತ**

| | ಮ | ರ | ಭ | ನ | ಯ | ಯ | ಯ | |
|---|---|---|---|---|---|---|---|---|
| | – – – | – U – | –UU | UUU | U–– | U – – | U – – | |
| 1. | ಕಾರುಣ್ಯಂ | ಗೆಯ್ದುನ | ದ್ದೀಕ್ಷೆಯ | ನೆ ಸ ಗಿ | ಲಸಜ್ಜಿ | ತ್ಕಿಯಾಮಾ | ರ್ಗಮಂಪೇ | = 21 ಅಕ್ಷರಗಳು |

2.ಸೂಳ್ಳೆಸೆಚ್ಚೆಚ್ಚುಬಿಲ್ಲಂರಥದಕುದುರೆಯಂಸೂತನಂಖಂಡಿಸುತ್ತಾ

**ಮಹಾಸ್ರಗ್ಧರಾ ವೃತ್ತ**

| | ಸ | ತ | ತ | ನ | ಸ | ರ | ರ | ಗುರು | |
|---|---|---|---|---|---|---|---|---|---|
| | UU– | – –U | – – U | UUU | UU– | –U– | –U– | – | |
| 1. | ಹರಿಸಂ | ಧಾನಕ್ಕೆ | ವಂದಂದ | ವಗಡಿ | ಸಿದಹಂ | ಕಾರಮೆ | ಲ್ಲಿತ್ತೊಕ್ಕ | ಷ್ಣಂ | = 22 ಅಕ್ಷರಗಳು |

2.ಇದುಚಕ್ರವ್ಯೂಹಮನೊಡೆವದಟಂಪಾರ್ಥನಂತಾತನುಂಗೆಂ

DDPI Office, Kolar Dist.

**ಅಲಂಕಾರ ಗುರುತಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿ.**

**ಉಪಮಾಲಂಕಾರ**

೧. ಮಗುವಿನ ಮನಸ್ಸು ಮಲ್ಲಿಗೆಯಂತೆ ಕೋಮಲವಾಗಿದೆ.

**ಅಲಂಕಾರದ ಹೆಸರು** : ಉಪಮಾಲಂಕಾರ

**ಲಕ್ಷಣ** : ಎರಡು ವಸ್ತು ಅಥವಾ ಸನ್ನಿವೇಶಗಳಿಗೆ ಪರಸ್ಪರ ಹೋಲಿಕೆಯನ್ನು ಮಾಡಿ ವರ್ಣಿಸಿದಾಗ ಉಪಮಾಲಂಕಾರ.

ಉಪಮೇಯ : ಮಗುವಿನ ಮನಸ್ಸು

ಉಪಮಾನ : ಮಲ್ಲಿಗೆ

ಉಪಮಾವಾಚಕ : ಅಂತೆ

ಸಮಾನಧರ್ಮ : ಮೃದು

**ಸಮನ್ವಯ** : ಉಪಮೇಯವಾದ ಮಗುವಿನ ಮನಸ್ಸನ್ನು ಉಪಮಾನವಾದ ಮಲ್ಲಿಗೆಗೆ ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಬಂದು ಹೋಲಿಕೆ ಇರುವುದರಿಂದ ಇದು ಉಪಮಾಲಂಕಾರವಾಗಿದೆ.

೨. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.

೩. ನೀಚರಿಗೆ ಮಾಡಿದ ಉಪಕಾರ ಹಾವಿಗೆ ಹಾಲೆರೆದಂತೆ.

೪. ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ.

೫. ಸೀತೆಯ ಮುಖ ಕಮಲದಂತೆ ಅರಳಿದೆ.

**ರೂಪಕಾಲಂಕಾರ**

೧. ವದನಾರವಿಂದ

**ಅಲಂಕಾರ** : ರೂಪಕ ಅಲಂಕಾರ

**ಲಕ್ಷಣ** : ಅತಿ ಸಾಮ್ಯತೆಯಿಂದಾಗಿ ಉಪಮೇಯ ಮತ್ತು ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸಿದಾಗ ರೂಪಕ ಅಲಂಕಾರವಾಗುತ್ತದೆ.

ಉಪಮೇಯ : ವದನ

ಉಪಮಾನ : ಅರವಿಂದ

**ಸಮನ್ವಯ** : ಉಪಮೆಯವಾದ ಶಾನುಭೋಗರ ವದನವನ್ನು ಉಪಮಾನವಾದ ಅರವಿಂದ (ಕಮಲ) ಕ್ಕೆ ಅಭೇದವಾಗಿ ರೂಪಿಸಿರುವುದರಿಂದ ಇದು ರೂಪಕ ಲಂಕಾರವಾಗಿದೆ.

೨. ಸೀತೆಯ ಮುಖ ಕಮಲ ಅರಳಿತು.

೩. ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ.

೪. ವಿದ್ವಾಂಸನಾದ ಆತನು ಸಾಕ್ಷಾತ್ ಸರಸ್ವತಿ.

**ದೃಷ್ಟಾಂತ ಅಲಂಕಾರ**

೧. ಮಾತು ಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ.

**ಅಲಂಕಾರದ ಹೆಸರು** : ದೃಷ್ಟಾಂತ ಅಲಂಕಾರ

**ಲಕ್ಷಣ** : ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರುತ್ತಿದ್ದರೆ ಅದು ದೃಷ್ಟಾಂತ ಅಲಂಕಾರ

ಉಪಮೇಯ : ಮಾತು ಬಲ್ಲವನಿಗೆ ಜಗಳವಿಲ್ಲ

ಉಪಮಾನ : ಊಟ ಬಲ್ಲವನಿಗೆ ರೋಗವಿಲ್ಲ

ಎರಡು ಬೇರೆ ಬೇರೆ ವಾಕ್ಯಗಳು ಅಂದರೆ ಉಪಮೇಯವಾದ ಮಾತುಬಲ್ಲವನಿಗೆ ಜಗಳವಿಲ್ಲ ಎಂಬ ವಾಕ್ಯವು ಉಪಮಾನವಾದ ಊಟಬಲ್ಲವನಿಗೆ ರೋಗವಿಲ್ಲಎಂಬ ವಾಕ್ಯಗಲು ಅ ಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರುಬಂದಿರುವುದರಿಂದ ಇದು ದೃಷ್ಠಾಂತ ಅಲಂಕಾರವಾಗಿದೆ.

೨. ಊರು ಉಪಕಾರ ಅರಿಯದು ; ಹೆಣ ಶೃಂಗಾರ ಅರಿಯದು.

೩. ಅಟ್ಟ ಮೇಲೆ ಒಲೆ ಉರಿಯಿತು ; ಕೆಟ್ಟ ಮೇಲೆ ಬುದ್ಧಿ ಬಂದಿತು.

DDPI Office Kolar Dist.

೪. ತಾಯಿಯಂತೆ ಮಗಳು ; ನೂಲಿನಂತೆ ಸೀರೆ.

**ಅರ್ಥಾಂತರನ್ಯಾಸ ಅಲಂಕಾರ**

೧. ಆತ ಉಂಡ ಮನೆಗೆ ಕೇಡು ಬಗೆದ ; ಕೃತಘ್ನರು ಏನನ್ನು ತಾನೆ ಮಾಡರು ?

**ಅಲಂಕಾರದ ಹೆಸರು** : ಅರ್ಥಾಂತರನ್ಯಾಸ ಅಲಂಕಾರ

**ಲಕ್ಷಣ** : ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸ ಅಲಂಕಾರ

ಉಪಮೇಯ(ವಿಶೇಷವಾಕ್ಯ ) : ಆತ ಉಂಡ ಮನೆಗೆ ಕೇಡು ಬಗೆದ

ಉಪಮಾನ (ಸಾಮಾನ್ಯವಾಕ್ಯ) : ಕೃತಘ್ನರು ಏನನ್ನು ತಾನೆ ಮಾಡರು?

**ಸಮನ್ವಯ** : ಆತ ಉಂಡ ಮನೆಗೆ ಕೇಡು ಬಗೆದ ಎಂಬ ವಿಶೇಷ ವಾಕ್ಯವನ್ನು ಕೃತಘ್ನರು ಏನನ್ನು ತಾನೆ ಮಾಡರು? ಎಂಬ ಸಾಮಾನ್ಯ ವಾಕ್ಯ ಸಮರ್ಥನೆ ಮಾಡುತ್ತಿರುವುದರಿಂದ ಇದು ಅರ್ಥಾಂತರನ್ಯಾಸ ಅಲಂಕಾರವಾಗಿದೆ.

೨. ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು, ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

೩. ಉತ್ತರಕುಮಾರನು ಯುದ್ಧಕ್ಕೆ ಹೆದರಿ ಓಡಿಬಂದನು, ಹೇಡಿಗಳಿಗೆ ಜಯವೆಂಬುದಿಲ್ಲ.

೪. ದುರ್ಜನರು ನಿಂದಸುವರೆಂಬ ಭಯದಿಂದ ಸತ್ಕವಿಯಾದವನು ತನ್ನ ಕೃತಿಯನ್ನ ರಚಿಸದಿರುವನೇ? ಕತ್ತಲೆಯ ಭಯದಿಂದ ಸೂರ್ಯ ತನ್ನ ಕಿರಣಗಳನ್ನು ಪಸರಿಸದಿರುವನೇ?

**ಉತ್ಪ್ರೇಕ್ಷಾ ಅಲಂಕಾರ**

೧. ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು.

**ಅಲಂಕಾರದ ಹೆಸರು** : ಉತ್ಪ್ರೇಕ್ಷಾ ಅಲಂಕಾರ

**ಲಕ್ಷಣ** : ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ ಉತ್ಪೇಕ್ಷಾ ಅಲಂಕಾರ

ಉಪಮೇಯ : ಸೀತೆಯ ಮುಖ

ಉಪಮಾನ : ಕಮಲ

**ಸಮನ್ವಯ** : ಉಪಮೇಯವಾದ ಸೀತೆಯ ಮುಖವನ್ನು ಉಪಮಾನವಾದ ಕಮಲ ಎಂಬುದಾಗಿ ಕಲ್ಪಿಸಿರುವುದರಿಂದ ಇದು ಉತ್ಪ್ರೇಕ್ಷಾ ಅಲಂಕಾರ.

೨. ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.

೩. ರಕ್ತದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಲು ಈ ರೀತಿ ಚಿಕ್ಕಚಿಕ್ಕ ಬೆಟ್ಟಗಳನ್ನು ಹೊಸದಾಗಿ ಹರಡಿರುವರೋ ಎಂಬಂತೆ ಸತ್ತುಬಿದ್ದ ಆನೆಗಳ ಹಿಂಡು ಕಾಣುತ್ತಿತ್ತು.

೪. ಭೀಮ ದುರ್ಯೋಧನರು ಗದೆಯಿಂದ ಹೊಡೆದಾಡುವಾಗ ಬಲವಾದ ಮದಗಜಗಳು ಕಾದುತ್ತಿವೆಯೋ ಎಂಬಂತೆ ಕಾಣುತ್ತಿತ್ತು.

**ಶ್ಲೇಷಾ ಅಲಂಕಾರ**

೧. ಆ ವಿವಾಹ ಮಂಟಪವು ಪುರಂದರಪುರದಂತೆ ಸದಾ ರಂಭಾನ್ವಿತ ವಿಬುಧಮಿಳಿತವಾಗಿತ್ತು.

**ಅಲಂಕಾರದ ಹೆಸರು** : ಶ್ಲೇಷಾ ಅಲಂಕಾರ

**ಲಕ್ಷಣ** : ಒಂದು ಪದವು ಒಂದಕ್ಕಿಂತ ಹೆಚ್ಚು ಅರ್ಥಕೊಡುವಂತಿದ್ದರೆ ಅಂತಹ ಪದ ಶ್ಲೇಷ ಪದ ಎನ್ನುವರು. ಇಂತಹ ಶ್ಲೇಷಾರ್ಥಗಳನ್ನು ನೀಡಬಲ್ಲ ಪದಗಳಿರುವ ಅಲಂಕಾರವೇ ಶ್ಲೇಷಾ ಅಲಂಕಾರ.

| ಪದಗಳು | (ಉಪಮೇಯ)ವಿವಾಹ ಮಂಟಪದ ಪರವಾಗಿ | (ಉಪಮಾನ) ಸ್ವರ್ಗದ ಪರವಾಗಿ |
|---|---|---|
| ರಂಭಾನ್ವಿತ | ಬಾಳೆಗಿಡಗಳಿಂದ ಕೂಡಿತ್ತು | ರಂಬೆ ಅಪ್ಸರೆಯರಿಂದ ಕೂಡಿತ್ತು |
| ವಿಬುಧಮಿಳಿತ | ಬ್ರಾಹ್ಮಣರಿಂದ ಕೂಡಿತ್ತು | ದೇವತೆಗಳಿಂದ ಕೂಡಿತ್ತು |

DDPI Office Kolar Dist.

**ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ :**

**ತಾಳಿದವನು ಬಾಳಿಯಾನು :–**

‘ ಗಾದೆಗಳು ವೇದಗಳಿಗೆ ಸಮಾನ ’ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ ‘ ವೇದ ಸುಳ್ಳಾದರೂ ಗಾದೆ ಸುಳ್ಳಾಗದು ’ ಎಂಬ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ವದ ಗಾದೆಗಳಲ್ಲಿ ‘ ತಾಳಿದವನು ಬಾಳಿಯಾನು ’ ಎಂಬ ಗಾದೆಯೂ ಸಹ ಒಂದಾಗಿದೆ.

ಅತಿಯಾಗಿ ಕೋಪಮಾಡಿಕೊಳ್ಳದೆ ಸಮಾಧಾನದಿಂದ ಇರಬೇಕು. ಕೋಪ ಅನಾಹುತಕ್ಕೆ ಕಾರಣವಾಗುತ್ತದೆ. ಎಂಬುದನ್ನು ತಿಳಿಸುತ್ತದೆ. “ ಕೋಪಂ ಅನರ್ಥ ಸಾಧನಂ ” ಎಂಬ ಮಾತಿನಂತೆ ಕೋಪವು ಕೆಡುಕನ್ನು ಉಂಟುಮಾಡುತ್ತದೆ. ಕ್ಷಣಕಾಲ ಕೋಪದ ಕೈಗೆ ಬುದ್ಧಿ ಕೊಟ್ಟರೆ ಅದು ನಮ್ಮನ್ನು ಮಾತ್ರವಲ್ಲದೆ ಅದಕ್ಕೆ ಗುರಿಯಾದವರನ್ನೂ ಅಪಾಯಕ್ಕೆ ನೂಕುತ್ತದೆ. ಕುಂಬಾರನು ಹಲವು ದಿನಗಳು ಶ್ರಮ ಪಟ್ಟು ತಯಾರಿಸಿದ ಮಡಕೆಯನ್ನು ಒಂದು ದೊಣ್ಣೆಯಿಂದ ನಾಶ ಮಾಡಿದಂತೆ ಕೋಪವು ಅನಾಹುತವನ್ನು ಉಂಟುಮಾಡುತ್ತದೆ. ಆದರೆ ಅದನ್ನು ಸರಿಪಡಿಸಲಾಗುತ್ತದೆಯೇ ? ತಾಳ್ಮೆಯಿಂದ ಆಲೋಚಿಸಿ ಮುನ್ನಡೆದವರೇ ಜೀವನದಲ್ಲಿ ವಿಜಯಶಾಲಿಗಳಾಗಲು ಸಾಧ್ಯ. ಎಂಬುದು ಈ ಗಾದೆಯ ನೀತಿಯಾಗಿದೆ.

**<u>ಗಾದೆಗಳು</u>**

1. ತಾಳಿದವನು ಬಾಳಿಯಾನು.
2. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ.
3. ದೇಶ ಸುತ್ತು ಕೋಶ ಓದು.
4. ಕೂಡಿ ಬಾಳಿದರೆ ಸ್ವರ್ಗ ಸುಖ.
5. ಕಟ್ಟುವುದುಕಠಿಣಕೆಡಿಸುವುದು ಸುಲಭ.
6. ಹೊತ್ತ ನಾಡು ಹೆತ್ತತಾಯಿ ಸ್ವರ್ಗಕ್ಕಿಂತಲೂ ಮಿಗಿಲು.
7. ಕುಂಬಾರನಿಗೆ ವರುಷದೊಣ್ಣೆಗೆ ನಿಮಿಷ.
8. ಕೈ ಕೆಸರಾದರೆ ಬಾಯಿ ಮೊಸರು.
9. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ.
10. ಕುಳಿತು ಉಣ್ಣುವವನಿಗೆಕುಡಿಕೆ ಹೊನ್ನು ಸಾಲದು.
11. ಮಾಡಿದ್ದುಣ್ಣೋ ಮಹಾರಾಯ.
12. ಮನಸ್ಸಿದ್ದರೆ ಮಾರ್ಗ.
13. ಹುಟ್ಟುಗುಣಘಟ್ಟ ಹತ್ತಿದರೂ ಹೋಗದು.
14. ತಾಳಿದವನು ಬಾಳಿಯಾನು.
15. ಕೋಪದಲ್ಲಿಕೊಯ್ದ ಮೂಗು ಮತ್ತೆ ಬಂದಿತೇ.
16. ಮಾತೆ ಮುತ್ತು ಮಾತೆ ಮೃತ್ಯು.
17. ಬೆಳೆಯುವ ಸಿರಿ ಮೊಳಕೆಯಲ್ಲಿ.
18. ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ.
19. ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತರುಚಿಯಿಲ್ಲ.
20. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು.
21. ಒಗಟ್ಟಿನಲ್ಲಿ ಬಲವಿದೆ.
22. ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ.
23. ಮೂರ್ತಿಚಿಕ್ಕದಾದರೂಕೀರ್ತಿದೊಡ್ಡದು.

DDPI Office Kolar Dist.

24. ನಾಯಿ ಬಾಲ ಡೊಂಕು.
25. ಅತ್ತೆಗೊಂದು ಕಾಲ ಸೊಸೆಗೊಂದು ಕಾಲ.
26. ಜನರ ಸೇವೆಯೇಜನಾರ್ಧನನ ಸೇವೆ.
27. ಉಪ್ಪುಕೊಟ್ಟವನನ್ನು ಮುಪ್ಪಿನತನಕ ನೆನೆ.
28. ಗಾಳಿ ಬಂದಾಗತೂರಿಕೋ.
29. ಶಕ್ತಿಯಿಂದಾಗದುದನ್ನುಯುಕ್ತಿಯಿಂದಗೆಲ್ಲಬೇಕು.
30. ಹುಟ್ಟು ಹುಟ್ಟುತಅಣ್ಣತಮ್ಮಂದಿರು ಬೆಳೆ ಬೆಳೆಯುತ್ತ ದಾಯಾದಿಗಳು.
31. ಅಲ್ಪವಿದ್ಯೆ ಮಹಾಗರ್ವಿ
    ಅಥವಾ
    ತುಂಬಿದಕೊಡ ತುಳುಕುವುದಿಲ್ಲ
32. ಮೂರು ವರ್ಷಗಳಲ್ಲಿ ಕಲಿತದ್ದುನೂರು ವರ್ಷಗಳ ತನಕ.
33. ಮಾತು ಬಲ್ಲವ ಮಾಣಿಕ್ಯತಂದ.
34. ಮಾತು ಹಾಡಿದರೆ ಹೋಯಿತು, ಮುತ್ತು ಹೊಡೆದರೆ ಹೋಯಿತು.
35. ವಿನಾಶಕಾಲೇ ವಿಪರೀತ ಬುದ್ಧಿ.
36. ದೂರದ ಬೆಟ್ಟಕಣ್ಣಿಗೆ ನುಣ್ಣಗೆ.
37. ಆಳಾಗಬಲ್ಲವನುಅರಸನಾಗಬಲ್ಲ.
38. ಆರೋಗ್ಯವೇ ಭಾಗ್ಯ.
39. ಕಣ್ಣು ತಿಳಿಯದ್ದನ್ನು ಕರುಳು ತಿಳಿಯುತ್ತದೆ.
40. ಉಗುರಿನಿಂದ ಹೋಗುವುದಕ್ಕೆಕೊಡಲಿ ತೆಗೆದುಕೊಂಡಂತೆ.
41. ಅಂಗೈ ಹುಣ್ಣಿಗೆಕನ್ನಡಿ ಬೇಕೆ.
42. ಇಲ್ಲದವನಿಗೆಒಂದುಚಿಂತೆಇದ್ದವನಿಗೆ ನೂರುಚಿಂತೆ.
43. ಚಾಡಿ ಮಾತು ಕೇಳಿ ಚಾವಡಿ ಹಾಳಾಯಿತು.
44. ಮಗ ಉಂಡರೆಕೆಡಕಲ್ಲ ಮಳೆ ಬಂದರೆಕಡಕಲ್ಲ.
45. ಇಂದು ಮಾಡುವುದನ್ನು ನಾಳೆ ಎನ್ನಬೇಡ.

**1. ಅಲ್ಪವಿದ್ಯೆ ಮಹಾಗರ್ವಿ**

ಗಾದೆಗಳು ವೇದಗಳಿಗೆ ಸಮ. ಬಹುಶಃ ವೇದ ಸುಳ್ಳಾದರು ಗಾದೆಗಳು ಎಂದು ಸುಳ್ಳಾಗುವುದಿಲ್ಲ. ಹಿರಿಯರುತಮ್ಮಜೀವನದ ಅನುಭವಗಳನ್ನು ಗಾದೆಯರೂಪದಲ್ಲಿ ವ್ಯಕ್ತಪಡಿಸಿದ್ದಾರೆ.
ಅಲ್ಪಸ್ವಲ್ಪಕಲಿತು ಸರಿಯಾಗಿ ಸಂದರ್ಭದಲ್ಲಿಗಾದೆಮಾತು ಹುಟ್ಟಿಕೊಂಡಿದೆ

ಅರ್ಥತುಂಬಿದಕೊಡವು ಶಬ್ದವನ್ನುಂಟು ಮಾಡುತ್ತದೆ ಎಂಬ ಸುಭಾಷಿತದಉಕ್ತಿಯಂತೆಅಲ್ಪಜ್ಞಾನಅಪಾಯಕರವಾದದ್ದುಉದಾಹರಣೆ ವಿರಾಟರಾಜನ ಮಗ ಉತ್ತರಕುಮಾರನ ಬಿಲ್ವಿದ್ಯೆಯನ್ನುಅಲ್ಪಸ್ವಲ್ಪ ತಿಳಿದವನು ಆದರೆ ಮಹಾಗರ್ವಿಯಾಗಿ ಹೊರಟುಅವಮಾನಿತ ನಾಗುವ ಸಂದರ್ಭ ಅವನಿಗೆ ಒದಗಿತು
ವ್ಯಕ್ತಿ ಮೊದಲು ಪೂರ್ಣಜ್ಞಾನ ಪಡೆಯಬೇಕು ನಂತರ ಸರಿಯಾಗಿ ಬದುಕಬೇಕು ಹಾಗಿಲ್ಲದೆಅಲ್ಪವಿದ್ಯೆ ಮಹಾಗರ್ವಿಎನ್ನುವಂತಾದರು ಕೇಳು ಕಟ್ಟಿಟ್ಟ ಬುಟ್ಟಿಎಂಬುದನ್ನು ಈ ಗಾದೆ ತಿಳಿಸುತ್ತದೆ.

**2. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ**

ಗಾದೆಗಳು ವೇದಗಳಿಗೆ ಸಮಾನ ಗಾದೆಗಳು ವೇದಗಳಿಗೆ ತಲೆದಿಂಬು ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ ಚಿಕ್ಕಚಿಕ್ಕ ವಾಕ್ಯಗಳಲ್ಲಿ ಹಿರಿದಾದಅರ್ಥವನ್ನುಕೊಡುವ ನುಡಿಮುತ್ತುಗಳು ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿದೆಇಂತಹ ಗಾದೆಗಳಲ್ಲಿ ಒಂದುಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ.

ಈ ನಾನ್ನುಡಿ ಸತ್ಯದ ಸ್ವರೂಪದೊಡನೆ ಮನುಷ್ಯನ ಸ್ವಭಾವವನ್ನುಸಮೀಕರಿಸಿದೆಗಿಡವನ್ನುಯಾವ ದಿಕ್ಕಿಗೆ ಬಗ್ಗಿಸಿದರೂ ಅದೇರೀತಿ ಬೆಳೆಯುತ್ತದೆ.ಇದ್ದಾಗಲೇ ಮಕ್ಕಳಿಗೆ ಒಳ್ಳೆಯ ಸುದ್ದಿ ಸಂಸ್ಕಾರವನ್ನುಕೊಟ್ಟಾಗಅದುಕಲಿತುಉತ್ತಮ ವ್ಯಕ್ತಿಯಾಗುತ್ತಾನೆ. ಸೊಟ್ಟದಾಗಿರುವಗಿಡವನ್ನು ನೇರಗೊಳಿಸಬಹುದು. ಆದರೆ ಮರವಾಗಿ ಬೆಳೆದು ನಿಂತಾಗ ಬಗ್ಗಿಸಲು ಸಾಧ್ಯವಾಗುವುದಿಲ್ಲ. ಚಿಕ್ಕವರಿದ್ದಾಗಲೆ ಮಕ್ಕಳಿಗೆ ಒಳ್ಳೆಯ ಬುದ್ಧಿ ಸಂಸ್ಕರವನ್ನುಕೊಟ್ಟಾಗಅದುಕಲಿತುಉತ್ತಮ ವ್ಯಕ್ತಿಯಾಗುತ್ತಾನೆ. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ

DDPI Office Kolar Dist.

ಇನ್ನೊಂದುಗಾದೆಯುಇದೆಇದರಅರ್ಥವನ್ನು ಹೋಲುತ್ತದೆ. ಬಾಲ್ಯವಸ್ಥೆಯಲ್ಲಿ ಮಾನಸಿಕ ಮತ್ತು ಶಾರೀರಿಕ ಬೆಳವಣಿಗೆಗಳನ್ನು ನಿಯಂತ್ರಿಸಬಹುದು ಅವನ ನಡತೆ ಸ್ವಭಾವವನ್ನುತಿದ್ದಬಹುದುಒಮ್ಮೆ ಅವನು ಉತ್ತಮಯುವಕನಾದರೆ ಮತ್ತೆಯಾವುದೇ ಸಮಸ್ಯೆ ಬರುವುದಿಲ್ಲ ಆದ್ದರಿಂದ ನಾವು ಒಳ್ಳೆಯ ದಾರಿಯಲ್ಲಿ ಹೋಗಬೇಕು ಎಂಬುದು ಈ ಗಾದೆ ಮಾತಿನಅರ್ಥ.

### 3. ಮನಸ್ಸಿದ್ದರೆ ಮಾರ್ಗ

ಗಾದೆಗಳು ವೇದಗಳಿಗೆ ಸಮ ವೇದ ಸುಳ್ಳಾದರೆ ಗಾದೆಗಳು ನಿಂದು ಸುಳ್ಳಾಗುವುದಿಲ್ಲ ಚಿಕ್ಕ–ಚಿಕ್ಕ ವಾಕ್ಯದಲ್ಲಿ ಹಿರಿದಾದಅರ್ಥವನ್ನು ನೊಂದಿರುವ ನುಡಿಮುತ್ತುಗಳು ಹಿರಿಯರುತಮ್ಮಜೀವನದ ಅನುಭವಗಳನ್ನು ಗಾದೆಗಳಲ್ಲಿ ವ್ಯಕ್ತಪಡಿಸಿದ್ದಾರೆ ಕೈಲಾಗದುಎಂದುಕೈಕಟ್ಟಿ ಕುಳಿತ ವ್ಯಕ್ತಿ ಮನಸ್ಸುಮಾಡಿ ಕೆಲಸವನ್ನು ಸಾಧಿಸಿದ ಸಂದರ್ಭದಲ್ಲಿ ಈ ಗಾದೆ ಮಾತು ಹುಟ್ಟಿಕೊಂಡಿದೆ.

ಯಾವುದೇ ಕೆಲಸವನ್ನು ಮಾಡಲು ಮನಸ್ಸುಇಲ್ಲದಿದ್ದಾಗಅದರಕಡೆಗೆ ಲಕ್ಷ್ಯವನ್ನೇಕೊಡುವುದಿಲ್ಲ ಆದರೆ ಆ ಕೆಲಸವನ್ನು ಮಾಡಲು ಮನಸ್ಸಿದ್ದರೆ ಒಂದಲ್ಲಾಒಂದು ಮಾರ್ಗ ಹುಡುಕುತ್ತೇವೆ ಆ ಕೆಲಸ ಆಗ ನೆರವೇರುತ್ತದೆಉದಾಹರಣೆ ಏಕಲವ್ಯನಿಗೆದ್ರೋಣಾಚಾರ್ಯರು ಬಿಲ್ವಿದ್ಯೆಯನ್ನು ಕಲಿಸುವುದಿಲ್ಲ ಎಂದಾಗ ಏಕಲವ್ಯತನ್ನಗುರುದ್ರೋಣಾಚಾರ್ಯರುಎಂದು ಭಾವಿಸಿ ಪ್ರತಿಮೆಯನ್ನು ಮುಂದಿಟ್ಟುಕೊಂಡು ಮನದಲ್ಲೇ ತೀರ್ಮಾನಿಸಿ ಚಲದಿಂದಉತ್ತಮ ಬಿಲ್ಲುಗಾರನಾದನು. ಮನೆಯಲ್ಲಿ ಮತ್ತು ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಚೆನ್ನಾಗಿ ಮನಸ್ಸುಕೊಟ್ಟುಓದಿ ಎಂದುಉಪದೇಶ ಮಾಡುತ್ತಾರೆ.ಅದನ್ನುಕಾರ್ಯಗತ ಮಾಡಲು ಮಕ್ಕಳೇ ಪ್ರಯತ್ನಿಸಬೇಕಾಗುತ್ತದೆಅದಕ್ಕೆಅವರೆಮನಸ್ಸು ಮಾಡಬೇಕು ಮನಸ್ಸು ಮಾಡಿದರೆ ಬೆಟ್ಟವನ್ನುಕುಟ್ಟಿ ಪುಡಿಮಾಡಿಕೊಂಡು ಬರುತ್ತಾರೆ.ಆದರೆಮಾಡುವಮನಸ್ಸುಇರಬೇಕು.ಜೀವನದಲ್ಲಿಏನನ್ನಾದರೂ ಸಾಧಿಸುವಗುರಿಯನ್ನು ಹೊಂದಿರಬೇಕು. ಮನಸ್ಸು ಚಂಚಲ ವಾದದ್ದುಒಂದುಕಡೆ ನಿಲ್ಲುವುದಿಲ್ಲ ಅದಕ್ಕೆ ಸತತವಾದ ಪ್ರಯತ್ನಅವಶ್ಯಕವಾಗಿದೆ.

ಮನಸ್ಸು ಮಾಡಿದರೆಎಲ್ಲವೂ ಸಾಧ್ಯಆದ್ದರಿಂದಯಾವುದೇ ಕೆಲಸವನ್ನು ಮಾಡಲು ಮನಸ್ಸು ಬಹಳ ಮುಖ್ಯವಾಗುತ್ತದೆಎಂಬುದನ್ನುಈ ಗಾದೆಮಾತು ತಿಳಿಸುತ್ತದೆ

### 4. ತಾಳಿದವನು ಬಾಳಿಯಾನು

ಗಾದೆಗಳು ವೇದಗಳಿಗೆ ಸಮ ವೇದ ಸುಳ್ಳಾದರು ಗಾದೆ ಸುಳ್ಳಾಗದು ಚಿಕ್ಕಚಿಕ್ಕ ವಾಕ್ಯಗಳಲ್ಲಿ ಹಿರಿದಾದ ಅರ್ಥವನ್ನೊಳಗೊಂಡಿರುವ ನುಡಿಮುತ್ತುಗಳು. ಹಿರಿಯರುತಮ್ಮಜೀವನದ ಅನುಭವಗಳನ್ನು ಗಾದೆಗಳ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ ವ್ಯಕ್ತಿ ತಾಳ್ಮೆಯಿಂದ ಕಾದು ಕೊನೆಗೆ ಜಯಶೀಲರಾದ ಸಂದರ್ಭದಲ್ಲಿ ಈಗಾದೆ ಮಾತು ಹುಟ್ಟಿಕೊಂಡಿದೆ.

ಪ್ರತಿಯೊಂದು ಕೆಲಸದಲ್ಲೂ ತಾಳ್ಮೆ ನಿಧಾನಅತ್ಯಾಗತ್ಯದುಡುಕಿಕೆಡಕಿನ ಮೂಲ, ಪ್ರತ್ಯಕ್ಷಕಂಡರೂ ಪ್ರಮಾಣಿಸಿ ನೋಡಬೇಕುಉದಾಹರಣೆ ನಾರಿಯಕಥೆಯೆ ಸಾಕ್ಷಿ ನೀರಿನಿಂದಬಾಗಿಲಿಗೆ ಬಂದತಾಯಿಯು ಮನೆಯ ಒಳಗಿನಿಂದ ಬಾಗಿಲಿಗೆರಕ್ತವನ್ನು ಬಾಯಿಗೆ ಅಂಟಿಸಿಕೊಂಡು ಮುಂಗುಸಿಯನ್ನು ಕಂಡುತನ್ನ ಮಗುವನ್ನುತಿಂದು ಬರುತ್ತಿದೆಎಂದುಆತುರದಿಂದತನ್ನ ನೀರಿನಕೊಡುಎಸೆದು ಸಾಯಿಸುತ್ತಾಳೆ.ಆದರೆಒಳಗೆ ಬಂದು ನೋಡಿದಾಗ ಕಿಲಕಿಲ ನಗುತ್ತಿರುವ ಮಗುವನ್ನುಕಂಡು ಹರ್ಷಗೊಳ್ಳುತ್ತಾಳೆ ಮತ್ತುತನ್ನ ಮಗುವನ್ನು ಹಾವಿನಿಂದ ರಕ್ಷಿಸಿದ ಮುಂಗುಸಿಯನ್ನು ಸಾಯಿಸಿದಕ್ಕೆದುಃಖ ಪಡುತ್ತಾಳೆ. ಎಂಥಕಷ್ಟದಲ್ಲೂಕಂಗೆಡದೆ ಕೋಪಗೊಳ್ಳದೆ ತಾಳ್ಮೆಯಲ್ಲಿಕಾದು ನೋಡಿದರೆ ಎಂದಿಗೂ ಒಳ್ಳೆಯ ಫಲ ದೊರಕುತ್ತದೆ.

ಜೀವನದಲ್ಲಿ ಅನೇಕ ತೊಂದರೆಗಳು ಸಂಕಟಗಳು ಬರಬಹುದು ಈ ಸಮಯದಲ್ಲಿ ತಾಳ್ಮೆಯಿಂದ ವರ್ತಿಸಬೇಕು ಸಮಸ್ಯೆಗಳಿಗೆ ನಾವು ಯಾವರೀತಿ ಪ್ರತಿಕ್ರಿಯೆ ನೀಡುತ್ತೇವೆಎಂಬುದೆಇಲ್ಲಿ ಮುಖ್ಯ.ಏಕೆಂದರೆ ಸಮಸ್ಯೆಗಳು ಶಾಶ್ವತವಲ್ಲ ಪರಿಹಾರ ಸಿಗಲೇಬೇಕು ಸಿಗುತ್ತದೆ ಅಲ್ಲಿವರೆಗೂ ಶಾಂತಿ ಸಮಾಧಾನದಿಂದಇರುವುದುಅತಿಮುಖ್ಯಆದ್ದರಿಂದಲೇ ಹೇಳುವುದು ತಾಳಿದವನು ಬಾಳಿಯಾನು. ತಾಳ್ಮೆ ಕಳೆದುಕೊಂಡರೆ ಬಾಳಲಾಗದು ಬದುಕು ಭಾರವಾಗಬಹುದುಇದೆ ಈ ಗಾದೆಯಧ್ವನಿ ಎನ್ನಬಹುದು.

### 5. ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತರುಚಿಯಿಲ್ಲ

ಗಾದೆಗಳು ವೇದಗಳಿಗೆ ಸಮ ವೇದ ಸುಳ್ಳಾದರೂ ಗಾದೆಗಳು ಎಂದು ಸುಳ್ಳಾಗುವುದಿಲ್ಲ ಚಿಕ್ಕ–ಚಿಕ್ಕ ವಾಕ್ಯಗಳಲ್ಲಿ ಹಿರಿದಾದ ಅರ್ಥವನ್ನೊಳಗೊಂಡ ನುಡಿಮುತ್ತುಗಳು ಹಿರಿಯರುತಮ್ಮಜೀವನದ ಅನುಭವಗಳನ್ನು ಗಾದೆಗಳ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ ಕಷ್ಟಕಾಲದಲ್ಲಿಕಂದನ ಕೈ ಹಿಡಿದು ನಡೆಸುವತಾಯಿಯ ವಾತ್ಸಲ್ಯದ ಬಗ್ಗೆ ಹೇಳುವ ಸಂದರ್ಭದಲ್ಲಿ ಈ ಗಾದೆ ಹುಟ್ಟಿಕೊಂಡಿದೆ.

ತಾಯಿ ವಾತ್ಸಲ್ಯಎಂತಆಪತ್ತಿನಲೂಮಕ್ಕಳನ್ನು ಕಾಪಾಡಬಲ್ಲದುಉದಾಹರಣೆಗೆಜಾನಪದಕತೆಯೊಂದರಲ್ಲಿ ಮಗನೊಬ್ಬತನ್ನದುಷ್ಟ ಗೆಳೆಯನಿಂದ ಪ್ರೇರಿತನಾಗಿತಾಯಿಯನ್ನುಕೊಂದು ಆಸ್ತಿ ಪಡೆದುತಾಯಿಯ ಕರಳನ್ನು ಬಲವಾಗಿ ಆಯತಪ್ಪಿ ಬೀಳುತ್ತದೆ ಆಗ ತಾಯಿಕರುಳು ನೋವಾಯಿತೆ ಮಗು ಎಂದು ಕೇಳುತ್ತದಂತೆ.

ಎಂದಾಗತಾಯಿಯ ಸ್ಥಾನದ ಹಿರಿಮೆಅರಿವಾಗುತ್ತದೆಕಣ್ಣೀರನ್ನು ಒರೆಸಿ ನೋವನ್ನು ಮರೆಸಿ ನಗಿಸುವ ದೇವತೆಯು ತಾಯಿಯಾಗಿದ್ದಾಳೆ.

ತಾಯಿದ್ರೆತವರಿಗೆ ಹೆಚ್ಚು ತಂದಿದ್ರೆ ಬಳಗೆಗೆ ಹೆಚ್ಚು ಎನ್ನುವಜಾನಪದ ಮಾತುತಾಯಿಯ ಮಹತ್ವವನ್ನು ಸಾರುತ್ತದೆ.ಜನ್ಮ ನೀಡುವತಾಯಿತಾನು ಪುನರ್ಜನ್ಮವನ್ನುಪಡೆದುಮತ್ತೊಂದುಜೀವಕ್ಕೆಜನ್ಮ ನೀಡುತ್ತಾಳೆ.ಅಷ್ಟೇಅಲ್ಲತಾಯಿಯೇ ಮೊದಲ ಗುರು ಎಂಬ

DDPI Office Kolar Dist.

ಮಾತಿನಂತೆ ಮಕ್ಕಳಿಗೆ ಶಿಕ್ಷಣ ನೀಡುತ್ತಾಳೆ. ಪ್ರಪಂಚದಕೆಟ್ಟ ಮಗನಿರಬಹುದುಆದರೆಕೆಟ್ಟತಾಯಿ ಇರಲಾರಳು. ಪ್ರೀತಿ–ವಾತ್ಸಲ್ಯ ಮಮತೆ, ಮಮಕಾರಗಳನ್ನು ದಾರೆಎರೆದು ಮಕ್ಕಳನ್ನು ಬೆಳೆಸುತ್ತಾಳೆ.

ಉಪ್ಪು ಷಡ್ರಸಗಳಲ್ಲಿ ಪ್ರಧಾನವಾದುದ್ದು. ಉಳಿದ ಐದು ರಸಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾದರೂಗ್ರಾಹ್ಯ ವಾಗಿರುತ್ತದೆ ಭೋಜನ,ಆದರೆ ಈ ಉಪ್ಪು ಮಾತ್ರ ಕೊಂಚಏರುಪೇರಾದರೂ ನಾಲಿಗೆ ಸ್ವೀಕರಿಸುವುದು. ಊಟ ರುಚಿಸದುಆದುದರಿಂದಊಟಕ್ಕೆಉಪ್ಪೆ ಪ್ರಧಾನವಾದದ್ದು, ಬಂಧುಗಳಲ್ಲಿತಾಯಿಯೇ ಸರ್ವಸ್ವ ಎಂಬ ಮಾತನ್ನು ಈ ಗಾದೆಮಾತು ಸಮರ್ಥಿಸುತ್ತದೆ.

### 6. ಕೈ ಕೆಸರಾದರೆ ಬಾಯಿ ಮೊಸರು

ವೇದ ಸುಳ್ಳಾದರು ಗಾದೆ ಸುಳ್ಳಾಗದು ಇದು ಹಿರಿಯರಅನುಭವದ ಮಾತಾಗಿದೆ ಗಾದೆಗಳಲ್ಲಿ ವಿಶೇಷವಾದಅರ್ಥವಿದೆ ಗಾದೆಗಳು ವೇದಗಳ ಸಮಾನ.

ಕರ್ಮ ವಿದ್ದಅಷ್ಟು ಫಲ ಎಂಬುದೊಂದು ಮಾತಿನಂತೆಕಷ್ಟಪಟ್ಟುದುಡಿದರೆ ಮಾತ್ರ ಸುಖವಾಗಿ ಬಾಳು ಸಾಗಿಸಬಹುದು. ಮಂತ್ರದಿಂದ ಹಣ್ಣುಉದರಲು ಸಾಧ್ಯವಿಲ್ಲ, ಶಕ್ತಿ ಇಲ್ಲದೆ ನಡೆಯಲುಸಾಧ್ಯವಿಲ್ಲ, ಹಾಗೆಯೇಕೈ ಮುಟ್ಟಿದುಡಿಯದಿದ್ದರೆಹೊಟ್ಟೆತುಂಬುವುದಿಲ್ಲ.ಕಷ್ಟ ಪಟ್ಟುದುಡಿದರೆ ಹೊಟ್ಟೆತುಂಬುತ್ತದೆರೈತನೊಬ್ಬಜಮೀನಿನಲ್ಲಿಕಷ್ಟಪಟ್ಟುದುಡಿಯುತ್ತಾನೆ ಬಂದಾಗ ಹಾಯಾಗಿ ಕುಳಿತು ಊಟ ಮಾಡಬಹುದು.ಅವನು ದುಡಿಯದಿದ್ದರೆ ಹೊಟ್ಟೆಗೆತಣ್ಣೀರು ಬಟ್ಟೆಯೇಗತಿ ವಿದ್ಯಾರ್ಥಿಗಳು ಆಸಕ್ತಿಯಿಂದಕಷ್ಟ ಪಟ್ಟುಓದಿದರೆಉತ್ತಮ ಅಂಕಗಳನ್ನು ಗಳಿಸಬಹುದುಎಂದು ಹೇಳಬಹುದು.

ಒಟ್ಟಿನಲ್ಲಿಕಷ್ಟ ಪಟ್ಟವರಿಗೆ ಸುಖ ಬಾಳು ಎಂಬುದನ್ನು ಮರೆಯಬಾರದುಎಂಬುವುದು ಈ ಗಾದೆಯಅರ್ಥ.

### 7. ಕುಂಬಾರನಿಗೆ ವರುಷದೊಣ್ಣೆಗೆ ನಿಮಿಷ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಇದು ಹಿರಿಯರಅನುಭವದಮಾತಾಗಿದೆ ಗಾದೆಗಳಲ್ಲಿ ವಿಶೇಷವಾದಅರ್ಥಅಡಗಿದೆ ಗಾದೆಗಳು ವೇದಗಳಿಗೆ ಸಮಾನ.

ಯಾವುದೇ ಕೆಲಸವನ್ನು ಸರಿಯಾಗಿ ಮಾಡಬೇಕಾದರೆಕಷ್ಟಪಡಬೇಕು,ಆದರೆಹಾಳು ಮಾಡಲುಕಷ್ಟಪಡಬೇಕಾಗಿಯುಇಲ್ಲ,"ಕಟ್ಟುವುದುಕಠಿಣಕೆಡವುದು ಸುಲಭ" ಎಂಬ ಗಾದೆಯುಇದೆಅರ್ಥವನ್ನು ಹೋಲುತ್ತದೆ.ಒಬ್ಬಕುಂಬಾರ ಮಡಕೆಗಳನ್ನು ಮಾಡಲು ಮಣ್ಣುತಂದು ಹರಳನ್ನು ಬೇರ್ಪಡಿಸಿ ಮಣ್ಣನ್ನು ಹದಮಾಡಿಕಷ್ಟಪಟ್ಟು ಮಡಿಕೆಯನ್ನು ಮಾಡುತ್ತಾನೆ.ಆದರೆ ಆ ಮಡಿಕೆಯನ್ನು ಹೊಡೆಯಲುಒಂದುದೊಣ್ಣೆ ಪೆಟ್ಟು ಸಾಕು ಯಾವುದೇಒಂದುಉತ್ತಮ ಕೆಲಸ ಮಾಡುವುದುತುಂಬಾಕಠಿಣಆದರೆಅದೇ ಕೆಲಸವನ್ನು ಹಾಳು ಮಾಡುವುದು ಸುಲಭ ಪ್ರಾಚೀನ ಭಾರತೀಯರುಕಠಿಣ ಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು ಆದರೆ ವಿದೇಶಿಯರು ಒಂದೇಕ್ಷಣಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು ಹಾಗೆಯೇ ಮನುಷ್ಯನತನ್ನಉತ್ತಮವಾದಜೀವನದ ಭವಿಷ್ಯವನ್ನು ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಲು ಜೀವನವೆಲ್ಲಕಷ್ಟಪಡಬೇಕುಆದರೆ ವ್ಯಕ್ತಿತ್ವ ಹಾಳು ಮಾಡಿಕೊಳ್ಳುವುದಕ್ಕೆ ಒಂದು ಗಳಿಗೆ ಸಾಕು ಒಂದುಕೊಡ ಹಾಲು ಕೆಡಲುತೊಟ್ಟು ಹುಳಿ ಸಾಕಲ್ಲವೇ?.

ಆದ್ದರಿಂದ ಮಾನವತನ್ನಘನತೆಯನ್ನರಿತುಕಾರ್ಯನಿರ್ವಹಿಸಬೇಕು ಎಂಬುದನ್ನು ಪ್ರಸ್ತುತಗಾದೆಯು ತಿಳಿಸುತ್ತದೆ.

### 8. ಕಟ್ಟುವುದುಕಠಿಣಕೆಡಹುವುದು ಸುಲಭ

ವೇದ ಸುಳ್ಳಾದರು ಗಾದೆ ಸುಳ್ಳಾಗದು ಇದು ಹಿರಿಯರಅನುಭವದಮಾತಾಗಿದೆ ಗಾದೆಗಳಲ್ಲಿ ವಿಶೇಷವಾದಅರ್ಥಅಡಗಿದೆ, ಗಾದೆಗಳು ವೇದಗಳ ಸಮಾನ.

ಯಾವುದೇ ಕೆಲಸವನ್ನು ಸರಿಯಾಗಿ ಮಾಡಬೇಕಾದರೆಕಷ್ಟಪಡಬೇಕು,ಆದರೆ ಹಾಳುಮಾಡಲು ಕಷ್ಟಪಡಬೇಕಾಗಿಲ್ಲ"ಕುಂಬಾರನಿಗೆ ವರುಷದೊಣ್ಣೆಗೆ ನಿಮಿಷ" ಎಂಬ ಗಾದೆಅರ್ಥವನ್ನು ಹೋಲುತ್ತದೆ.

ಒಬ್ಬಕುಂಬಾರ ಮಡಕೆಗಳನ್ನು ಮಾಡಲು ಮಣ್ಣುತಂದು ಹದಮಾಡಿಕಷ್ಟಪಟ್ಟು ಮಡಿಕೆಯನ್ನು ಮಾಡುತ್ತಾನೆಆದರೆ ಆ ಮಡಿಕೆಯನ್ನುಒಡೆಯಲುಒಂದುದೊಣ್ಣೆ ಪೆಟ್ಟು ಸಾಕು ಯಾವುದೇಒಂದುಉತ್ತಮ ಕೆಲಸ ಮಾಡುವುದುತುಂಬಾಕಷ್ಟಆದರೆಅದೇ ಕೆಲಸವನ್ನು ಹಾಳುಮಾಡುವುದು ಸುಲಭ ಮನುಷ್ಯನತನ್ನಉತ್ತಮವಾದಜೀವನದ ಭವಿಷ್ಯವನ್ನು ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಲು ಜೀವನವೆಲ್ಲಕಷ್ಟಪಡಬೇಕುಆದರೆ ವ್ಯಕ್ತಿತ್ವ ಹಾಳು ಮಾಡಿಕೊಳ್ಳುವುದಕ್ಕೆ ಒಂದು ಗಳಿಗೆ ಸಾಕು.

ಆದ್ದರಿಂದ ಮಾನವತನ್ನಘನತೆಯನ್ನುಅರಿತುಕಾರ್ಯನಿರ್ವಹಿಸಬೇಕುಎಂಬುದನ್ನು ಪ್ರಸ್ತುತಗಾದೆಯು ತಿಳಿಸುತ್ತದೆ.

DDPI Office Kolar Dist.

## ಕೆಳಗಿನ ಹೇಳಿಕೆಗಳಿಗೆ ಸಂದರ್ಭಾನುಸಾರ ಸ್ವಾರಸ್ಯ ಬರೆಯಿರಿ

1) **" ಯಾರದು ಒಳಗೆ? ಬಾಗಿಲು ತೆರೆಯಿರಿ"**

**ಆಯ್ಕೆ** ಈ ಮೇಲಿನ ವಾಕ್ಯವನ್ನು 'ಸಾರಾ ಅಭೂಬಕ್ಕರ್ ಅವರು ಬರೆದಿರುವ ಚಪ್ಪಲಿಗಳು' ಕಥಾ ಸಂಕಲನದಿಂದ ಆರಿಸಿ 'ಯುದ್ದ' ಎಂಬ ಗದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಶತ್ರು ದೇಶದ ರಾಹಿಲನ್ನು ಮುದುಕಿಯ ಮನೆಯಲ್ಲಿ ಆಶ್ರಯ ಪಡೆದಿರುತ್ತಾರೆ. ಆಗ ಆತನನ್ನು ಹುಡುಕಿಕೊಂಡು ಬಂದ ಸೈನಿಕರು ಯಾರದು ಒಳಗೆ? ಬಾಗಿಲು ತೆರೆಯಿರಿ ಎಂದು ಮುದಿಕಿಗೆ ಪ್ರಶ್ನಿಸಿದಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ತಮ್ಮ ದೇಶಕ್ಕೆ ನುಸುಳಿರುವ ಶತ್ರುವನ್ನು ಹಿಡಿಯಲು ಸೈನಿಕರು ಮಾಡುವ ಪ್ರಯತ್ನ ಸ್ವಾರಸ್ಯಕರವಾಗಿದೆ.

2) **"ಯುದ್ದಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?"**

ಆಯ್ಕೆ ಈ ಮೇಲಿನ ವಾಕ್ಯವನ್ನು 'ಸಾರಾ ಅಬೂಬಕರ್' ಅವರು ಬರೆದಿರುವ ಚಪ್ಪಲಿಗಳು ಎಂಬ ಕಥಾ ಸಂಕಲನದಿಂದ ಆರಿಸಿ 'ಯುದ್ದ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಾಗಿದೆ.

**ಸಂದರ್ಭ:** ವೈಮಾನಿಕ ದಾಳಿಯಲ್ಲಿ ಪ್ರಾಣ ಉಳಿಸಿಕೊಂಡ ರಾಹಿಲ ಶತ್ರು ದೇಶದ ಮುದುಕಿಯ ಮನೆಯಲ್ಲಿಯೇ ರಕ್ಷಣೆ ಪಡೆದುಕೊಳ್ಳುತ್ತಾನೆ. ಅವನನ್ನು ಹುಡುಕುತ್ತಾ ಬಂದ ಸೈನಿಕರಿಗೆ ಬಾಗಿಲು ತೆಗೆಯಲು ಹೋದ ಮುದುಕಿಯು ರಾಹಿಲನನ್ನು ಒಮ್ಮೆ ನೊಡುತ್ತಾಳೆ ಮತ್ತು ಆತನ ಅಸಹಾಯಕತೆಯ ನೋಟವನ್ನು ನೋಡಿ ಮನದಲ್ಲಿ ಹೀಗೆಂದುಕೊಳ್ಳುತ್ತಾಳೆ.

**ಸ್ವಾರಸ್ಯ:** ಮುದುಕಿಗೂ ಮತ್ತು ರಾಹಿಲನಿಗೂ ಇದ್ದಂತಹ ಅವಶ್ಯಕತೆ ಮತ್ತು ಅಸಹಾಯಕತೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿ ಬಂದಿದೆ.

3) **"ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಪು.ತ. ನರಸಿಂಹಾಚಾರರು ಬರೆದಿರುವ 'ಶಬರಿ' ಎಂಬ ಗದ್ಯಭಾಗದಿಂದ ಆಯ್ಕೆಗೊಳ್ಳಲಾಗಿದೆ.

**ಸಂದರ್ಭ:** ರಾಮನ ಗುಣಗಾನ ಮಾಡುತ್ತಾ ಆತನ ಆಗಮನಕ್ಕಾಗಿ ಸಿದ್ದತೆ ಮಾಡಿಕೊಂಡು ತಾನು ಕಟ್ಟಿದ ಮಾಲೆಗೆ ಮುತ್ತಿಕ್ಕುತ್ತದ್ದ ಸಂದರ್ಭದಲ್ಲಿ ಅಲ್ಲಿಗೆ ಬಂದ ರಾಮನು ಶಬರಿಯನ್ನು ಕಂಡು ತಾಯಿ ದಾರಿಗರಿಗೆ ಬೀಡಿಲ್ಲ ದೊರೆಯುವುದೇ ಎನುತ್ತಾನೆ.

**ಸ್ವಾರಸ್ಯ:** ರಾಮನ ವಿನಯ ಪೂರ್ವಕ ಮಾತುಗಳು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

4) **"ರೂಪಿನಂತೆ ಮಾತು ಗೂಡ ಎನುತದಾರವಾಗಿದೆ"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಪು.ತ. ನರಸಿಂಹಾಚಾರರು ಬರೆದಿರುವ 'ಶಬರಿ' ಎಂ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಶಬರಿಯಿಂದ ಆತಿಥ್ಯ ಸ್ವೀಕರಿಸಿದ ನಂತರ ರಾಮನು ನಿನ್ನ ಪ್ರೀತಿಗೆ ನಾವಬು ಋಣಿಯಾಗಿದ್ದೇವೆ. ಅರಮನೆಯಲ್ಲಿ ಸಿಗುವ ಅದಕ್ಕಿಂತ ಮಿಗಿಲಾದ ಆದರ ಇಲ್ಲಿ ಸಿಕ್ಕಿತು ಎಂದಾಗ ಶಬರಿಯು ರಾಮನ ವ್ಯಕ್ತಿತ್ವವನ್ನು ಹೀಗೆ ಕೊಂಡಾಡುತ್ತಾಳೆ.

**ಸ್ವಾರಸ್ಯ:** ರಾಮನ ಭವ್ಯ ವ್ಯಕ್ತಿತ್ವ ಶಬರಿಯ ಮಾತುಗಳಲ್ಲಿ ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

DDPI Office Kolar Dist.

**5) "ತಾವು ಕಡಿಮೆ ಮಾತನಾಡಿದ್ದೀರಿ: ಹೆಚ್ಚು ಕೆಲಸ ಮಾಡಿದ್ದೀರಿ"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು 'ಡಿ.ಎಸ್. ಜಯಪ್ಪಗೌಡ' ಬರೆದಿರುವ 'ಭಾಗ್ಯಶಿಲ್ಪಿಗಳು' ಎನ್ನುವ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ:** ವಿಶ್ವೇಶ್ವರಯ್ಯ ಅವರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ಪಂಡಿತ್ ಜವಹರ್‌ಲಾಲ್ ನೆಹರು ಅವರು ವಿಶ್ವೇಶ್ವರಯ್ಯ ಅವರನ್ನು ಕುರಿತು ಹೀಗೆ ನುಡಿಯುತ್ತಾರೆ.

**ಸ್ವಾರಸ್ಯ:** ವಿಶ್ವೇಶ್ವರಯ್ಯ ಅವರಿಗೆ ಈ ಮಾತು ನೂರಕ್ಕೆ ನೂರರಷ್ಟು ಒಪ್ಪುವುದರಿಂದ ಸ್ವಾರಸ್ಯ ಪೂರ್ಣವಾಗಿದೆ.

**6) "ಯಾವ ಜೀವಿಯೂ ತನ್ನಷ್ಟು ತಾನಿಲ್ಲ"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು 'ದೇವನೂರು ಮಹಾದೇವ' ರವರ ಬರೆದಿರುವ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ:** ಡಾ॥ ಅಶೋಕಪೈ ಎನ್ನುವ ಮನೋವೈದ್ಯರು ಮನಸ್ಸಿನ ಬಗ್ಗೆ ನಡೆದಿರುವ ಒಂದು ಸಂಶೋಧನಾ ಸತ್ಯವನ್ನು ಹೇಳುತ್ತಾರೆ. ಅದನ್ನು ವಿವರಿಸುತ್ತಾ ಲೇಖಕರು ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತಾ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೆ ಎಂದು ಈ ಮೇಲಿನಂತೆ ನುಡಿಯುತ್ತಾರೆ.

**7) " ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ದೇವನೋರು ಮಹಾದೇವ ಅವರು ಬರೆದಿರುವ ಎದೆಗೆ ಬಿದ್ದ ಅಕ್ಷರ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರೆಂದುಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೆ ಅವರವರದೇ ಇಷ್ಟದೈವ ಅಂದರೆ ಅವರಿಗೆ ಅವರವರ ಪ್ರಜ್ಞೆಯೆ ದೇವರಾಗಿತ್ತು ಎಂದು ಲೇಖಕರು ಹೇಳುತ್ತಾರೆ.

**ಸ್ವಾರಸ್ಯ:** ವಸನಕಾರರು ತಮ್ಮ ಪ್ರಜ್ಞೆಯ ಮುಂದೆ ಸುಳ್ಳು ಹೇಳಲು ಆಗುತ್ತಿರಲಿಲ್ಲವೆಂಬುದು ಸ್ವಾರಸ್ಯಪೂರ್ಣವಾಗಿದೆ.

**8) "ಸ್ವದರ್ಮೇ ನಿಧನಂ ಶ್ರೇಯ"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಎ ಎನ್ ಮೂರ್ತಿರಾವ್ ಬರೆದಿರುವ 'ವ್ಯಾಘ್ರ ಗೀತೆ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ

**ಸಂದರ್ಭ:** ಶಾನುಬೋಗರನ್ನು ಕೊಲ್ಲುವ ವಿಚಾರದಲ್ಲಿ ಗೊಂದಲವಾದಾಗ ಹುಲಿಗೆ ತನ್ನ ವಂಶದ ಹಿರಿಯ ಹುಲಿಯ ನೆನಪಾಗುತ್ತದೆ. ಪುಣ್ಯಕೋಟಿಯ ಸತ್ಯತೆಯನ್ನು ಮೆಚ್ಚಿದ ಹುಲಿಯು ತಾನು ಅದರ್ಮಕ್ಕೆ ಕೈ ಹಾಕುವುದೇ? ಎಂದು ಯೋಚಿಸುತ್ತಾ ಭಗವದ್ಗೀತೆಯ ಸಾಲುಗಳನ್ನು ನೆನಪಿಸಿಕೊಳ್ಳುತ್ತದೆ. ಎಂದು ಲೇಖಕರು ಹೇಳುತ್ತಾರೆ.

**ಸ್ವಾರಸ್ಯ:** ಪ್ರಯೊಬ್ಬರು ತಮ್ಮ ತಮ್ಮ ಧರ್ಮವನ್ನು ಪಾಲಿಸಿದರೆ ಯಶಸ್ಸು ದೊರೆಯುವುದು ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**9) " ಮಡಿಯ ಬೇಕಾದರೆ ಮಾಡಿಯೇ ಮಡಿಯುತ್ತೇನೆ"**

DDPI Office Kolar Dist.

**ಆಯ್ಕೆ:** ಈ ಮೇಳಿನ ವಾಕ್ಯವನ್ನು ಎ ಎನ್ ಮೂರ್ತಿರಾವ್ ಬರೆದಿರುವ 'ವ್ಯಾಘ್ರ ಗೀತೆ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ

**ಸಂದರ್ಭ:** ಹುಲಿಯ ವೇಗಕ್ಕೆ ಸರಿಯಾಗಿ ಚಾಚು ತಪ್ಪದಂತೆ ತಮ್ಮ ವೇಗವನ್ನು ಹೊಂದಿಸಿಕೊಂಡು ಕುಲಾಲ ಚಕ್ರದಂತೆ ತಿರುಗುತ್ತಿದ್ದ ಶಾನುಭೋಗರಿಗೆ ತಲೆ ಸುತ್ತಲಾರಂಭಿಸಿತು. ಆಗ ಮೇಲಿನ ವಾಕ್ಯವನ್ನು ಮನದಲ್ಲೇ ನಿಶ್ಚಯಿಸಿಕೊಂಡರು.

**ಸ್ವಾರಸ್ಯ:** ಜೀವ ಉಳಿಸಿಕೊಳ್ಳಲು ಕೊನೆಯ ಪ್ರಯತ್ನ ಇಲ್ಲಿ ಸವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

**10) " ಈತನ ಮಾತು ಅಶ್ರುತ ಪೂರ್ವಮ್"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ದುರ್ಗಸಿಂಹ ಬರೆದಿರುವ ವೃಕ್ಷ ಸಾಕ್ಷಿ ಎಂಬ ಗದ್ಯ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:** ತಮ್ಮ ವ್ಯಾಜ್ಯವನ್ನು ಬಗೆಹರಿಸಿಕೊಳ್ಳು ಧರ್ಮಾಧಿಕರಣರ ಬಳಿಗೆ ಬಂದ ದುಷ್ಟಬುದ್ಧ ಮತ್ತು ಧರ್ಮಬುದ್ದಿ ತಮ್ಮ ಕಥೆಯನ್ನು ಹೇಳುತ್ತಾರೆ. ನಡೆದುದೆಲ್ಲವನ್ನು ಧರ್ಮಾಧಿಕರಣರಿಗೆ ವಿವರಿಸಿದ ದುಷ್ಟಬುದ್ದಿಹೊನ್ನೆಲ್ಲವನ್ನು ಧರ್ಮಬುದ್ದಿಯೇ ತೆಗೆದುಕೊಂಡನು ಅದಕ್ಕೆ ಅಲ್ಲಿದ್ದ ಆಲದ ಮರವೇ ಸಾಕ್ಷಿ ಎಂದಾಗ ಧರ್ಮಾಧಿಕರಣರು ಈ ಮೇಲಿನಂತೆ ಯೋಚಿಸುವರು.

**ಸ್ವಾರಸ್ಯ:** ವೃಕ್ಷವೇ ಸಾಕ್ಷಿ ಹೇಳುತ್ತದೆ ಎಂಬುದು ಇಲ್ಲಿ ಸ್ವಾರಸ್ಯಕರವಾಗಿದೆ.

**11) " ಮುಂಗಾರಿನ ಮಳೆಯಾಗೋಣ"**

**ಆಯ್ಕೆ:** ಈ ಮೇಳಿನ ವಾಕ್ಯವನ್ನು ಡಾ॥ ಜಿ.ಎಸ್. ಶಿವರುದ್ರಪ್ಪನವರು ಬರೆದಿರುವ ಸಂಕಲ್ಪಗೀತೆ ಎನ್ನುವ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಸಮಾಜದಲ್ಲಿ ತುಂಬಿರುವ ಬೇಧ, ಭಾವ, ಅಸಹನೆ, ದ್ವೇಷ, ಅಸೂಯೆ, ಹಿಂಸೆ, ಭಯ, ಸಂಶಯ ಮೊದಲಾದವುಗಳನ್ನು ವಿಶ್ವಾಸ, ಬರವಸೆ ಎನ್ನುವ ಮುಂಗಾರಿನ ಮಳೆ ಸುರಿಸುವ ಮೂಲಕ ತೊಡೆದುಹಾಕಲು ಎಂದು ಕವಿ ಹೇಳುತ್ತಾನೆ.

**ಸ್ವಾರಸ್ಯ:** ಅಸಹನೆ, ದ್ವೇಶದಿಂದ ತುಂಬಿರುವ ಮನುಷ್ಯನ ಮನಸ್ಸಿನ ಕೊಳೆತೊಳಿಯುವ ಪ್ರಯತ್ನವನ್ನು ಈ ವಾಕ್ಯ ಸೂಚಿಸುತ್ತದೆ.

**12) " ಹೊಸಗಾಲದ ಹಸುಮಕ್ಕಳ ಹರಸಿ"**

**ಆಯ್ಕೆ:** ಈ ಮೇಲಿನ ವಆಕ್ಯವನ್ನು ದಾ.ರಾ ಬೇಂದ್ರ ರವರು ಬರೆದಿರುವ ಹಕ್ಕಿ ಹಾರುತ್ತಿದೆ ನೋಡಿದಿರಾ ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಕಾಲದ ಸಂಕೇತವಾದ ಪಕಿಯು ಹೊಸಯುಗಕ್ಕೆ ನಾಂದಿಯನ್ನು ಹಾಡುತ್ತಿದೆ. ಹೊಸಗಾಲದ ಮಕ್ಕಳನ್ನು ಹರಸುತ್ತಿದೆ. ಕವಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ಹೊಸಯುಗಕ್ಕೆ ಚೈತನ್ಯ ತುಂಬಿಸುವ ಸಂದೇಶವು ಈ ವಾಕ್ಯದಲ್ಲಿ ಮೂಡಿಬಂದಿದೆ.

**13) " ಮಂಗಳ ಲೋಕದ ಅಂಗಳಕೇರಿ"**

**ಆಯ್ಕೆ:** ಈ ಮೇಲಿನ ವವಾಕ್ಯವನ್ನು ದಾ.ರಾ ಬೇಂದ್ರ ರವರು ಬರೆದಿರುವ ಹಕ್ಕಿ ಹಾರುತ್ತಿದೆ ನೋಡಿದಿರಾ ಎಂಬ ಪದ್ಯದಿಂದ ಆರಿಸಲಾಗಿದೆ.

DDPI Office Kolar Dist.

**ಸಂದರ್ಭ:** ಶುಕ್ರ, ಚಂದ್ರ ಮಂಗಳ ಲೋಕಕ್ಕೆ ಪ್ರಯಾಣ ಮಾಡಿ ಅಲ್ಲಿ ಸಂಶೋಧನೆ ನಡೆಸುತ್ತಿರುವ ಮಾನವರ ವೈಜ್ಞಾನಿ ದೃಷ್ಟಿಕೋನ ಇಲ್ಲಿ ಕವಿ ವ್ಯಕ್ತಪಡಿಸುತ್ತಾನೆ.

**ಸ್ವಾರಸ್ಯ:** ಮನುಷ್ಯನ ವೈಜ್ಞಾನಿಕ ಬೆಳವಣಿಗೆ ಇಲ್ಲಿ ಸ್ವಾರಸ್ಯಪೂರ್ಣವಾಗಿದೆ.

**14) " ಜೀವ ಸತ್ತುಹೋಗುವುದು ಗೊತ್ತಾ"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಗದ್ದಗಿಮಠ ರವರು ಸಂಪಾದಿಸಿರುವ ಹಲಗಲಿ ಬೇಡರು ಎಂಬ ಲಾವಣಿಯಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:** ನಮ್ಮ ಆಯುಧಗಳನ್ನು ಬ್ರಿಟೀಷ್ ಸರ್ಕಾರಕ್ಕೆ ಒಪ್ಪಿಸಿದ್ದೇ ಆದರೆ ನಾವು ಸ್ವತಂತ್ರವಾಗಿ ಬದುಕಲಾರೆವು ಎಂದು ನಾಲ್ಕು ಜನ ವೀರರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:** ಬೇಡರಿಗೆ ಆಯುಧಗಳೇ ಜೀವಾಳ ಅವುಗಳನ್ನು ನೀಡುವುದು ಕಷ್ಟ ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**15) " ಹೊಡೆದರೊ ಗುಂಡ ಕರುಣೆ ಇಲ್ಲದಂಗ"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಗದ್ದಗಿಮಠ ರವರು ಸಂಪಾದಿಸಿರುವ ಹಲಗಲಿ ಬೇಡರು ಎಂಬ ಲಾವಣಿಯಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:** ಆಯುಧಗಳನ್ನು ನೀಡದೆ ದಂಗೆ ಎದ್ದ ಬೇಡರ ಮೇಲೆ ಬ್ರಿಟೀಷ್ ಸಿಪಾಯಿಗಳು ಗುಂಡಿನ ಕಾಳಗವನ್ನೇ ನಡೆಸಿದರು. ಜನರ ಮೇಲೆ ಕರುಣೆಯಿಲ್ಲದೇ ದಾಳಿ ನಡೆಸಿದರು ಎಂದು ಲಾವಣಿಕಾರರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:** ಬ್ರಿಟಿಷರ ದಬ್ಬಾಳಿಕೆ, ದೌರ್ಜನ್ಯ, ಅಮಾನವೀಯ ಕೃತ್ಯ ಇಲ್ಲಿ ವ್ಯಕ್ತವಾಗಿದೆ.

**16) " ಬಾಯ್ದಂಬುಲಕೆ ಕೈಯಾನುವರೆ"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಕುಮಾರ ವ್ಯಾಸನು ಬರೆದಿರುವ ಕೌರವೇಂದ್ರನ ಕೊಂದೆ ನೀನು ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಶ್ರೀ ಕೃಷ್ಣನು ಕರ್ಣನನ್ನು ಕುರಿತು ನಿನಗೆ ಹಸ್ತಿನಾಪುರದ ರಾಜರ ಹಿರಿಮೆ ಕೊಡಿಸುವೆನು ಪಾಂಡವ ಕೌರವರು ನಿನ್ನನ್ನು ಒಲೈಸುವರು ಅದನ್ನು ತಿರಸ್ಕರಿಸಿ ದುರ್ಯೋಧನನ ಬಾಯ್ದಂಬುಲಕೆ ಕೈಯಾನುವರೆ ಕರ್ಣ ಎಂದು ಪ್ರಶ್ನಿಸುತ್ತಾನೆ.

**ಸ್ವಾರಸ್ಯ:** ಕರ್ಣನ ಆತ್ಮಾಭಿಮಾನವನ್ನು ಕೆಣಕುವ ಶ್ರೀ ಕೃಷ್ಣನ ಮಾತುಗಳು ಇಲ್ಲಿ ಸವಾರಸ್ಯಪೂರ್ಣವಾಗಿದೆ.

**17) " ಕೌರವೇಂದ್ರನ ಕೊಂದೆ ನೀನು"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಕುಮಾರ ವ್ಯಾಸನು ಬರೆದಿರುವ ಕೌರವೇಂದ್ರನ ಕೊಂದೆ ನೀನು ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:** ಶ್ರೀ ಕೃಷ್ಣನ ಆಮಿಷಗಳಿಗೆ ಮನಸೋಲದ ಕರ್ಣನು ನನ್ನನ್ನು ಕಾಪಾಡಿದ ಒಡೆಯನಿಗೆ ಶತ್ರುಗಳ ಶಿರವನ್ನು ಕತ್ತರಿಸಿ ಒಪ್ಪಿಸುತ್ತೇನೆ ಎಂಬ ಭರದಲ್ಲಿ ಇದ್ದೆನು ಆದರೆ ಕೌರವೇಂದ್ರನನ್ನು ಕೊಂದೆ ನೀನು ಎಂದು ಶ್ರೀಕೃಷ್ಣನಿಗೆ ಹೇಳುತ್ತಾನೆ.

DDPI Office Kolar Dist

**ಸ್ವಾರಸ್ಯ:**ದುರ್ಯೋಧನನ ಬಗ್ಗೆ ಕರ್ಣನಿಗೆ ಇರುವ ಸ್ವಾಮಿನಿಷ್ಠೆ ಗೌರವಗಳ ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**18)"ಬೇರೆ ಬಣ್ಣವನೆ ಕಾಣೆ"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಕುವೆಂಪು ರವರು ಬರೆದಿರುವ ಹಸುರು ಎಂಬ ಪಧ್ಯದಿಂದ ಆರಿಸಿಕೊಳ್ಳಾಗಿದೆ.

**ಸಂದರ್ಭ:** ಆಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನ ಭರ್ತಿ ತುಂಬಿದ ಹಸುರು ಎಲ್ಲಡೆಯೂ ಹಸುರು ವಾತಾವರಣವನ್ನು ಸೃಷ್ಟಿ ಮಾಡದೇ ಭೂಮಿಯು ಹಸುರಿನಿಂದ ಮೈಯನ್ನು ಮುಚ್ಚಿ ಬೇರೆ ಯಾವುದೇ ಬಣ್ಣವನ್ನು ಕಾಣಲು ಆಗದ ಎಂದು ಕವಿಯು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:** ಕುವೆಂಪುರವರ ಪ್ರಕೃತಿ ತನ್ಮಯತೆಯನ್ನು ಪ್ರಕೃತಿಯೊಂದಿಗಿನ ಅವರ ಸಂಬಂಧವನ್ನು ಈ ವಾಕ್ಯವು ಸೂಚಿಸುತ್ತದೆ.

**19)" ಹಸುರತ್ತಲ್ ಹಸುರತ್ತಲ್ ಹಸುರೆತ್ತಲ್"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಕುವೆಂಪು ರವರು ಬರೆದಿರುವ ಹಸುರು ಎಂಬ ಪಧ್ಯದಿಂದ ಆರಿಸಿಕೊಳ್ಳಾಗಿದೆ.

**ಸಂದರ್ಭ:** ಎತ್ತೆತ್ತಲೂ ನೋಡಿದರೂ ಹಸುರು, ಕಡಲೂ, ಹಸುರು ಕವಿಯ ಆತ್ಮವೂ ಹಸುರು, ಒಡಲೊಳಗಿನ ರಕ್ತವೂ ಹಸುರು ಎಂದು ಕವಿಯು ಹಸುರಿನ ಪ್ರಕೃತಿಯನ್ನು ಜಪಿಸುತ್ತಾ ಹೀಗೆ ಹೇಳುತ್ತಾರೆ.

**ಸ್ವಾರಸ್ಯ:** ಪ್ರಕೃತಿಯ ಜೊತೆಗಿನ ತಮ್ಮ ಆತ್ಮವನ್ನು ಹಸುರಾಗಿಸಿಕೊಂಡು ರಸಪಾಕದಲ್ಲಿ ಮೀಯುವ ಸ್ಥಿತಿ ಸ್ವಾರಸ್ಯಪೂರ್ಣವಾಗಿದೆ.

**20)ನೆಲಕೀರಿವೆನೆಂದು ಬಗೆದಿರೆ ಛಲಕಿರಿವೆಂ"**

ಆಯ್ಕೆ: ಈ ಮೇಲಿನ ವಾಕ್ಯವನ್ನು ರನ್ನ ಮಹಾಕವಿಯು ಬರೆದಿರುವ ಛಲಮನಡ ಮೇರೆವೆಂ ಎಂಬ ಪಧ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ದುರ್ಯೋಧನ ತನ್ನ ತಂದೆ ತಾಯಿಯರ ಸಲಹೆಯಂತೆ ಶರಶಯ್ಯೆಯಲ್ಲಿ ಮಲಗಿದ ಬೀಷ್ಮರ ಬಳಿ ಬಂದಾಗ ಅವರು ಪಾಂಡವರೊಡನೆ ಸಂಧಿ ಮಾಡಿಕೊಳ್ಳಲು ಸೂಚಿಸುತ್ತಾರೆ. ಆಗ ದುರ್ಯೋಧನನು ನಾನು ನೆಲಕ್ಕಾಗಿ ಯುದ್ದ ಮಾಡುವವನಲ್ಲ ಛಲಕ್ಕಾಗಿ ಎಂದು ಹೇಳಿದಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ದುರ್ಯೋಧನನ ಛಲ, ಅಭಿಮಾನದ ಗುಣ ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿ ಬಂದಿದೆ.

**21)" ಪಾಂಡವರೊಳಿರಿದು ಛಲಮನೆ ಮೇರೆವೆಂ"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ರನ್ನ ಮಹಾಕವಿಯು ಬರೆದಿರುವ ಛಲಮನಡ ಮೇರೆವೆಂ ಎಂಬ ಪಧ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ದುರ್ಯೋಧನನು ಬೀಷ್ಮನಿಗೆ ಹೇಳುತ್ತಾನೆ. ಹುಟ್ಟಿದ ಎನ್ನ ನೂರು ಮಕ್ಕಳು ಎನ್ನೊಡಹುಟ್ಟಿದ ನೂರು ಸಹೋದರರು ಹೋರಾಡಿ ಸತ್ತರು. ಆದ್ದರಿಂದ ಕೋಪ ಅಧಿಕವಾಯಿತು.

DDPI Office Kolar Dist.

ಸತ್ತರೇನು ಮರಳಿ ಹುಟ್ಟುವುದಿಲ್ಲವೆ. ಪಾಂಡವರೊಡನೆ ಕಾದಾಡಿ ಛಲವನ್ನೆ ಸಾದಿಸುತ್ತೇನೆ ಎಂದು ಹೇಳುತ್ತಾನೆ.

**ಸ್ವಾರಸ್ಯ:** ದುರ್ಯೋಧನನ ಛಲದ ಗುಣ ಇಲ್ಲಿ ವ್ಯಕ್ತವಾಗಿದೆ.

**22)"ಅರಸುಗಳ ವಾಜಿಯಂ ಬಿಡು"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶ ಕವಿ ಬರೆದಿರುವ "ವೀರಲವ" ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:** ಕುದುರೆಯನ್ನು ಕಟ್ಟಿದ ಲವನನ್ನು ಕುರಿತು ಅಲ್ಲಿದ್ದ ಮುನಿಸುತರು ಬೇಡ ಬೇಡ ಅರಸರ ಕುದುರೆಯನ್ನು ಬಿಟ್ಟು ಬಿಡು ನಮಗೆ ತೊಂದರೆಯಾಗುವುದು ಎಂದು ಲವನನ್ನು ತಡೆಯುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ರಾಜರ ಕಡೆಯಿಂದ ತಮಗೆ ಆಗುವ ತೊಂದರೆಯನ್ನು ಭಯವನ್ನು ಮುನಿಸುತರ ಮಾತಿನಲ್ಲಿ ಇಲ್ಲಿ ವಿವರಸಲಾಗಿದೆ.

**23)" ಜಾನಕಿಯ ಮಗನಿದಕೆ ಬೆದರುವನೆ"**

**ಆಯ್ಕೆ:** ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶ ಕವಿ ಬರೆದಿರುವ "ವೀರಲವ" ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:** ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರು ಕುದುರೆಯನ್ನು ಬಿಟ್ಟು ಬಿಡು ಎಂದು ಹೇಳುತ್ತಾರೆ. ಆಗ ಲವನು ಬ್ರಾಹ್ಮಣರ ಮಕ್ಕಳು ಹೆದರುವರೆಂದರೆ ಜಾನಕಿಯ ಮಗನು ಇದಕ್ಕೆ ಹೆದರುವನೆ ಎಂದು ಪ್ರಶ್ನಿಸುವಾಗ ಈ ಮಾತು ಬಂದಿದೆ.

**ಸ್ವಾರಸ್ಯ:** ಲವನಿಗೆ ತನ್ನ ದೈರ್ಯದ ಬಗ್ಗೆ ಇರುವ ಅಭಿಮಾನ ಇಲ್ಲಿ ಸ್ವಾಸ್ಯಪೂರ್ಣವಾಗಿ ಮೂಡಿದೆ.

DDPI Office Kolar Dist.

## ಕಂಠಪಾಠ ಪದ್ಯಗಳು

1. ಕಲುಷಿತವಾದೀ ನದೀಜಲಗಳಿಗೆ
   ಮುಂಗಾರಿನ ಮಳೆಯಾಗೋಣ
   ಬರಡಾಗಿರುವೀ ಕಾಡುಮೇಡುಗಳ
   ವಸಂತವಾಗುತ ಮುಟ್ಟೋಣ.

2. ನೀಲಮೇಘಮಂಡಲ – ಸಮಬಣ್ಣ
   ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
   ಚಿಕ್ಕೆಯಮಾಲೆಯ ಸೆಕ್ಕಸಿಕೊಂಡು
   ಸೂರ್ಯ–ಚಂದ್ರರನು ಮಾಡದೆ ಕಣ್ಣಾ
   ಹಕ್ಕಿ ಹಾರುತಿದೆ ನೋಡಿದಿರಾ ?

3. ಕೊಡಲಿ ಕೋರೆ ಕಂಡ ಕಬ್ಬಿಣ ಮೊಸರು ಬೆಣ್ಣೆ ಪಾಲಾ
   ಉಪ್ಪು ಎಣ್ಣೆ ಅರಿಶಿಣ ಜೀರಿಗೆ ಅಕ್ಕಿ ಸಕ್ಕಾರಿ ಬೆಲ್ಲಾ
   ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
   ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟು

4. ಕೊರಳ ಸೆರೆ ಹಿಗ್ಗಿದವು ದೃಗುಜಲ
   ಉರವಣಿಸಿ ಕಡು ನೊಂದನಕಟಾ
   ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
   ಹರಿಯ ಹಗೆ ಹೊಗೆದೋರದುರುಹದೆ
   ಬರಿದೆ ಹೋಹುದೆ ತನ್ನ ವಂಶವ
   ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದೆ.

5. ಹಸುರಾಗಸ ; ಹಸುರು ಮುಗಿಲು ;
   ಹಸುರು ಗದ್ದೆಯೂ ಬಯಲು ;
   ಹಸುರಿನ ಮಲೆ ; ಹಸುರು ಕಣಿವೆ ;
   ಹಸುರು ಸಂಜೆಯೀ ಬಿಸಿಲೂ !

6. ನೆಲಕಿಪೆವೆಂದು ಒಗಿದರ !
   ಚಲಕಿಪೆವೆಂ ಪಾಂಡುಸುತರೂಳೀನೆಲನಿದು ಪಾ ॥
   ಪಾಲನೆನಗೆ ದಿನಪಸುತನಂ !
   ಕೊಲಿಸಿದ ನೆಲನೊಡನೆ ಮತ್ತೆ ಮದುವಾಪ್ಪಿಪೆನೇ ॥

7. ಉರ್ವಿಯೋಳ್ ಕೌಸಲ್ಯೆ ಪಡೆದ ಕುವರಂ ರಾಮ
   ನೊರ್ವನೇ ವೀರನಾತನ ಯಜ್ಞತುರಗಮಿದು
   ನಿರ್ವಹಿಸಲಾರ್ಪರಾರಾದೊಡಂ ತಲೆಯಲೆಂದಿರ್ದ ಲೇಖನವೋದಿ ॥
   ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ
   ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ॥

DDPI Office Kolar Dist.

**ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು.**

**1. ಸಂಕಲ್ಪಗೀತೆ**

ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ.
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡುವುತ ಸೇತುವೆಯಾಗೋಣ

ಜನರಲ್ಲಿ ಇಂದು ನಾನಾ ಕಾರಣಗಳಿಗಾಗಿ ನಂಬಿಕೆ ವಿಶ್ವಾಸ, ಹೊಂದಿ ಬಾಳುವ ಗುಣ ಮುಂತಾದ ಸುಖಭಾವದ ಆಧಾರ ಸ್ತಂಭಗಳೇ ಬಿದ್ದು ಹೋಗಿವೆ. ಹೀಗಾಗಿ ಚೆನ್ನಾಗಿ ಬದುಕುತ್ತೇವೆ ಎಂಬ ಭರವಸೆಯೇ ಹೊರಟು ಹೋಗುತ್ತಿದೆ. ಆದ್ದರಿಂದ ಮನುಷ್ಯರಲ್ಲಿ ನಂಬಿಕೆ, ವಿಶ್ವಾಸ, ಪ್ರೀತಿ, ಸ್ನೇಹ, ಸಹಕಾರಗಳೆಂಬ ಆಧಾರ ಸ್ತಂಭಗಳನ್ನು ಮತ್ತೆ ಮೇಲೆಬ್ಬಿಸಿ ಅವು ಮನದಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡುವ ಹೊಸ ಭರವಸೆಗಳನ್ನು ಕಟ್ಟೋಣ. ಭಾಷೆ, ಜಾತಿ, ಮತ, ಧರ್ಮಗಳಲ್ಲಿನ ಭೇದ-ಭಾವಗಳಿಂದ ಜನರಲ್ಲಿ ಅಸಮಾನತೆ ಅಪನಂಬಿಕೆ ಅಸ್ಪೃಶ್ಯತೆ ಮೊದಲಾದ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಅವನ್ನು ಸಮಾನತೆ ಸ್ನೇಹ, ಪ್ರೀತಿ, ಒಳ್ಳೆಯ ಚಿಂತನೆಗಳ ಮೂಲಕ ಮನುಜರ ನಡುವಿನ ಅಡ್ಡಗೋಡೆಗಳನ್ನು ಕೆಡವಿ ಪರಸ್ಪರರಲ್ಲಿ ನಂಬಿಕೆ ಮೂಡಿಸುವ ಸಹಬಾಳ್ವೆಗೆ ಸೇತುವೆಯಾಗುವ ಸಂಕಲ್ಪ ತೊಡಬೇಕೆಂದು ಕವಿ ಜೆ.ಎಸ್. ಶಿವರುದ್ರಪ್ಪ ನವರು ಆಶಿಸುತ್ತಾರೆ.

ಸಮಾನತೆಯ ಅಂಶವನ್ನು ಸಾರುತ್ತ ಎಲ್ಲರೂ ಪ್ರೀತಿ ವಿಶ್ವಾಸಗಳಿಂದ ಬದುಕಬೇಕೆಂಬ ಮೌಲ್ಯವನ್ನು ಈ ಪದ್ಯದಲ್ಲಿ ಅಭಿವ್ಯಕ್ತಿಸಲಾಗಿದೆ.

**2. ಹಕ್ಕಿ ಹಾರುತಿದೆ ನೋಡಿದಿರಾ.**

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ ಗಿಂಡಲಗಳ ದಡಮುಕ್ಕಿ
ತೇಲಿಸಿ ಮುಳುಗಿಸಿ ಖಂಡ ಖಂಡಗಳ
ಸಾರ್ವಭೌಮರ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ.

ದ. ರಾ. ಬೇಂದ್ರೆಯವರು ಈ ಪದ್ಯದಲ್ಲಿ ಕಾಲದ ಸಾರ್ವಭೌಮತ್ವವನ್ನು ವಿವರಿಸಿದ್ದಾರೆ. ರಾಜ್ಯ, ಸಾಮ್ರಾಜ್ಯಗಳನ್ನು ವೈಭವದಿಂದ ಮೆರೆಯುವಂತೆ ಮಾಡಿದ್ದು, ಇದೇ ಕಾಲ ಹಾಗೆಯೇ ಅವುಗಳ ನಡುವೆ ತೆನೆಯಲ್ಲಿನ ಕಾಳುಗಳನ್ನು ಬೇರ್ಪಡಿಸುವಂತೆ ಬೇರೆ-ಬೇರೆ ಮಾಡಿದ್ದು, ಇದೇ ಕಾಲ. ರಾಜ-ಮಹಾರಾಜರ ಸಣ್ಣ-ದೊಡ್ಡ ಕೋಟೆ ಕೊತ್ತಲಗಳನ್ನು ಗಬಕ್ಕನೆ ನಾಶ ಮಾಡಿದ್ದು, ಇದೇ ಕಾಲವೇ, ವಿಶ್ವದ ಎಲ್ಲಾ ಭಾಗಗಳನ್ನು ಒಂದು ಸಲ ವೈಭವದಿಂದ ಮೆರೆಯುವಂತೆ ಮಾಡಿ ಮತ್ತೊಂದು ಸಲ ಮುಳುಗುವಂತೆ ಮಾಡಿದೆ.

ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಕಾಲಪಕ್ಷಿ ಮೆಟ್ಟಿ ನಿಂತಿದೆ ಎಂಬ ಮೌಲ್ಯಯುತ ಅಂಶಗಳು ಈ ಪದ್ಯದಲ್ಲಿ ಅಡಕಗೊಂಡಿವೆ.

**3. ಮರಳು ಮಾಧವ ಮಹಿಯ ರಾಜ್ಯದ**

ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ.

ಹೇ ಮರಳು ಮಾಧವ ಈ ರಾಜ್ಯದ ಭೂಮಿಯ ಸಿರಿಗೆ ಸೋಲುವವನಲ್ಲ ಕುಂತಿಯ ಪುತ್ರರು ದುರ್ಯೋಧನರಿಂದ ನನಗೆ ಸೇವೆ ಮಾಡಿಸಿಕೊಳ್ಳುವುದರಲ್ಲಿ ಮನಸ್ಸಿಲ್ಲ ಕಾಪಾಡಿದ ಒಡೆಯನಿಗೆ ಶತ್ರುಗಳ ಶಿರವನ್ನು ಕತ್ತರಿಸಿ ಒಪ್ಪಿಸುವೆನು ಎಂಬ ಭರದಲ್ಲಿ ಇದ್ದೆನು ಆದರೆ ಕೌರವೇಂದ್ರನನ್ನು ಕೊಂದೆ ನೀನು ಎಂದು ಹೇಳಿದನು.

DDPI Office, Kolar Dist.

ಕರ್ಣನ ಜನ್ಮ ರಹಸ್ಯ ಶ್ರೀ ಕೃಷ್ಣನಿಂದ ಗೊತ್ತಾದ ನಂತರ ವಿಧಿಯಿಲ್ಲದೆ ಕರ್ಣನ ಮನದಾಳದಲ್ಲಿದ್ದ ಮಾತುಗಳು ಹೊರಬಂದು ತನ್ನ ಒಡೆಯ ದುರ್ಯೋಧನನಿಗೆ ಶತ್ರುಗಳ ತಲೆಗಳನ್ನು ಒಪ್ಪಿಸುತ್ತದೆ. ಆದರೆ ನೀನು ನನ್ನ ಮಹದಾಸೆಗೆ ಕಂಟಕವಾದೆ ಎಂಬ ಅಂಶಗಳು ಕರ್ಣನ ಸ್ವಾಮಿನಿಷ್ಠೆಯ ಮೌಲ್ಯಗಳು ಈ ಪದ್ಯದಲ್ಲಿ ಅಡಕಗೊಂಡಿವೆ.

**4. ಛಲಮನೆ ಮೆರೆವೆಂ**

ನೆಲಕಿ ವೆನೆಂದು ಬಗೆದಿರೆ
ಚಲಕಿರೆವೆಂ ಪಾಂಡುಸುತರೊಳೀ ನೆಲನಿದು ಪಾ
ರೇಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳಪೆನೇ

ದುರ್ಯೋಧನನು ಭೀಷ್ಮನನ್ನು ಕುರಿತು ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧ ಮಾಡುವೆನು ಎಂದು ತಿಳಿದಿರುವಿರೇ ಚಲಕ್ಕಾಗಿ ಯುದ್ಧ ಮಾಡುವೆನು ನನ್ನ ಪಾಲಿಗೆ ಇದು ಪಾಳುಭೂಮಿ ಮಿತ್ರನಾದ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ಹೊಸಬಾಳು ಬಾಳುವೆನೇ ? ಎಂದು ಆತ್ಮಾಭಿಮಾನದಿಂದ ಹೇಳುತ್ತಾನೆ.

ದುರ್ಯೋಧನನ ಸ್ವಾಭಿಮಾನ, ಕರ್ಣನ ಮೇಲೆ ಆತನಿಗಿದ್ದ ಅಪಾರವಾದ ಮಮತೆ ಸ್ನೇಹಗುಣಗಳು ಈ ಪದ್ಯದಲ್ಲಿ ಬಹು ಸ್ವಾರಸ್ಯಕರವಾಗಿ ಅಭಿವ್ಯಕ್ತಗೊಂಡಿದೆ.

**5. ವೀರಲವ**

ಊರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ
ಸರ್ವಜನ ಮುಂ ಬಂಜೆಯನ್ನ ದಿರ್ದಪುದೆ ತನ
ಗುರ್ವ ತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು.

ಭೂಮಂಡಲದಲ್ಲಿ ಕೌಸಲ್ಯೆಯು ಪಡೆದ ಕುಮಾರರು ರಾಮನು ಒಬ್ಬನೇ ವೀರನು, ಅವನ ಯಜ್ಞ ಕುದುರೆಯು ಇದು ನಿಭಾಯಿಸಲು ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ ಎಂದು ಇದ್ದ ಬರೆಹವನ್ನು ಓದಿ ಆತನ ಅಹಂಕಾರವನ್ನು ಬಿಡಿಸದಿದ್ದರೆ ತನ್ನ ತಾಯಿಯನ್ನು ಎಲ್ಲಾ ಜನರೂ ಬಂಜೆ ಎನ್ನದಿರುವರೇ ತನಗೆ ಇರುವ ತೋಳಗಳು ಇವು ಏತಕೆ ? ಎಂದು ನಿಜ ಪ್ರತಿಜ್ಞೆಯನ್ನು ಕೈಗೊಂಡು ಲವನು ಆಕ್ರೋಶಗೊಂಡನು.

ಲವನ ಕ್ಷಾತ್ರಗುಣ ವೀರತೆ ಪರಾಕ್ರಮ, ಆವೇಶ ಅತ್ಯುತ್ಸಾಹದ ಗುಣಗಳು ಈ ಪದ್ಯದಲ್ಲಿ ಅಡಕಗೊಂಡಿದೆ.

6. ಹಸುರತ್ತಲ್! ಹಸುರಿತ್ತಲ್
ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟಿತೊ ಕವಿಯಾತ್ಮಂ
ಹಸುರ್ ನೆತ್ತರ್ ಒಡಲಿನಲಿ

ಕವಿ ಕುವೆಂಪು ರವರು ಹೇಳುವಂತೆ ಆ ಕಡೆ ನೋಡಿದರೂ ಹಸಿರು ಈ ಕಡೆ ನೋಡಿದರೂ ಹಸುರು ಕವಿಯ ಮನದಲ್ಲಿ ಹಸಿರಿಗೆ ಪ್ರಾಧಾನ್ಯತೆ ಸದಾ ನೀಲಿಯಾಗಿ ಎಲ್ಲರಿಗೂ ಕಡಲು ಕಾಣಿಸಿದರೆ ಕುವೆಂಪು ರವರಿಗೆ ಅದೇ ನೀಲಿ ಕಡಲು ಹಸುರಿನಂತೆ ಕಾಣುತ್ತದೆ. ಏಕೆಂದರೆ ಕವಿಯ ಆತ್ಮವು ಹಸುರುಗಟ್ಟಿದೆ. ಅವರ ಒಡಲಿನಲಿ ಹರಿಯುವ ನೆತ್ತರು ಕೂಡ ಹಸುರಾಗಿದೆ ಎಂದು ಹೇಳುವಲ್ಲಿ ಕವಿಯು ಹಸುರು ಬಣ್ಣ (ಪ್ರಕೃತಿಗೆ) ನೀಡಿರುವ ಪ್ರಾಮುಖ್ಯತೆಯನ್ನು ಕಾಣಬಹುದಾಗಿದೆ.

ಕವಿ ಕುವೆಂಪು ರವರು ಎಲ್ಲೆಲ್ಲೂ ಹಸುರನ್ನು ಕಾಣುವ, ಹಸುರನ್ನು ಆರಾಧಿಸುವ ಹಸುರಿಗೆ ಅವರ ಮನ ಸೋತು ಹೋಗಿರುವ ಮೌಲ್ಯಗಳನ್ನು ಈ ಪದ್ಯದಲ್ಲಿ ಕಾಣಬಹುದು.

DDPI Office, Kolar Dist.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ:**

1. ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

   ಉ : – ಸೈನ್ಯದಲ್ಲಿ ವೈದ್ಯನಾಗಿದ್ದ ರಾಹಿಲನು ಯುದ್ಧದಲ್ಲಿ ಗಾಯಗೊಂಡು ಶತ್ರು ಸೈನಿಕರಿಂದ ತಪ್ಪಿಸಿಕೊಂಡು ಮುದುಕಿಯ ಮನೆಗೆ ಬಂದಾಗ ಅವಳ ಸೊಸೆ ಹೆರಿಗೆ ನೋವಿನಿಂದ ಬಳಲುತ್ತಿರುತ್ತಾಳೆ. ವೈದ್ಯನಾಗಿದ್ದ ರಾಹಿಲನು ತನ್ನ ಕಾಲಿನ ನೋವನ್ನೂ ಮರೆತು ಮಗುವನ್ನು ರಕ್ಷಿಸಲು ಸಾಧ್ಯವಾಗದಿದ್ದರೂ ತಾಯಿಯನ್ನು ರಕ್ಷಿಸುವಲ್ಲಿ ಯಶಸ್ವಿಯಾಗುತ್ತಾನೆ. ಹೀಗೆ ರಾಹಿಲನು ಮುದುಕಿಯ ಕುಟುಂಬಕ್ಕೆ ನೆರವಾಗುತ್ತಾನೆ.

   ಅದೇ ವೇಳೆಯಲ್ಲಿ ಅವನನ್ನು ಹುಡುಕಿಕೊಂಡು ಶತ್ರು ಸೈನಿಕರು ಮುದುಕಿಯ ಮನೆಗೆ ಬರುತ್ತಾರೆ. ಬಾಗಿಲು ತೆಗೆಯಬೇಡಿ ಎಂದು ರಾಹಿಲನು ದಯನೀಯ ನೋಟದಿಂದ ಕೈ ಸನ್ನೆ ಮಾಡಿದಾಗ, ಮುದುಕಿಯು ಆ ನೋಟದಲ್ಲಿ ತನ್ನ ಮಗನನ್ನು ಕಾಣುತ್ತಾಳೆ. ಅವನು ಸಂಕಷ್ಟದಲ್ಲಿ ತನ್ನ ಸೊಸೆಯ ಪ್ರಾಣ ಉಳಿಸಿದ್ದರಿಂದ ಮುದುಕಿಯು ಅವನನ್ನು ಸೊಸೆ ಮಲಗಿದ್ದ ಕೋಣೆಯಲ್ಲಿ ಮಂಚದಡಿಯಲ್ಲಿ ಬಚ್ಚಿಟ್ಟು ಅಲ್ಲಿಗೆ ಬಂದಿದ್ದ ಸೈನಿಕರಿಗೆ " ಈ ಕಡೆ ಯಾರೂ ಬಂದಿಲ್ಲ " ಎಂದು ಸುಳ್ಳು ಹೇಳಿ ರಾಹಿಲನನ್ನು ರಕ್ಷಿಸಿದಳು.

2. ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ?

   ಶಬರಿ ಮತಂಗ ಋಷಿಯ ಆಶ್ರಮದಲ್ಲಿ ಇರುತ್ತಾಳೆ. ಸಿದ್ಧರಾದ ಮತಂಗ ಋಷಿಗಳು ಶಬರಿಯ ಮನದಾಸೆಯನ್ನು ತಿಳಿದವರಾಗಿದ್ದು, " ರಾಮ ಲಕ್ಷ್ಮಣರು ಆಶ್ರಮಕ್ಕೆ ಬಂದೇ ಬರುತ್ತಾರೆ. ನಿನ್ನಿಷ್ಟಾರ್ಥ ನೆರವೇರುತ್ತದೆ " ಎಂದಿದ್ದರು. ಅವರ ಮಾತಿನಂತೆ ಮತಂಗಾಶ್ರಮಕ್ಕೆ ರಾಮ ಲಕ್ಷ್ಮಣರು ಬರುತ್ತಾರೆ. ಶಬರಿಯು ಇವರ ದರ್ಶನದಿಂದ ಪುಳುಕಿತಳಾದಳು. ಕಣ್ತುಂಬ ರಾಮನ ದರ್ಶನ ಮಾಡಿ, ಮುಟ್ಟಿ, ನಮಸ್ಕರಿಸಿ ಸಂಭ್ರಮಿಸಿದಳು. ಪರಿಮಳದ ವನಮಾಲೆಯನ್ನು ರಾಮನ ಕೊರಳಿಗೆ ಹಾಕಿ, ರುಚಿಕರ ಹಣ್ಣುಗಳನ್ನು ನೀಡಿ ಉಪಚರಿಸಿದಳು. ಧನ್ಯಳಾದೆನೆಂದು ಸಂತಸ ವ್ಯಕ್ತ ಪಡಿಸಿದಳು.

   ಹಲವಾರು ವರ್ಷಗಳಿಂದ ರಾಮನ ದರ್ಶನಕ್ಕಾಗಿ ಕಾದು, ಮುನಿಗಳ ಮಾತನ್ನು ನಂಬಿ, ರಾಮನು ಬರುವ ಸುದಿನವನ್ನು ಎದುರು ನೋಡುತ್ತಿದ್ದ ಶಬರಿಗೆ ರಾಮನ ದರ್ಶನವಾಯಿತು. ಈಕೆಗೆ ಆಸೆ ಈಡೇರಿತು. ಹಾಗಾಗಿ "ನಂಬಿಕೆಟ್ಟವರಿಲ್ಲ" ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು.

3. ವಿಶ್ವೇಶ್ವರಯ್ಯನವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

   ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾಗಿ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿದರು. ಕಛೇರಿಯ ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಸುಧಾರಣೆ ಮಾಡಿದರು. ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ರಾಜ್ಯ ಪ್ರವಾಸ ಮಾಡಿಅಜಮಾಯಿಸಿ ಮಾಡಿ ಕಾರ್ಯ ನಡೆಸಿದರು. ಸಮರ್ಥ ಕಾರ್ಯನಿರ್ವಹಣೆಗಾಗಿ ಸಮಿತಿಗಳನ್ನು ರಚಿಸಿದರು. ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿದರು. ತಾಂತ್ರಿಕ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಭಾಷೆ, ಸಾಹಿತ್ಯ ಮತ್ತು ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಿದರು. ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗೆ ಅಗ್ರಪ್ರಾಶಸ್ತ್ಯ ನೀಡಿದರು. ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದರು.

DDPI Office, Kolar Dist.

4. ಕವಿ ಸಿದ್ಧಲಿಂಗಯ್ಯ ಹೇಳಿದ ಮನೆ ಮಂಚಮ್ಮ ಕತೆಯನ್ನು ಬರೆಯಿರಿ.

ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯಲ್ಲಿ ಒಂದು ಸಲ ಒಂದು ಗ್ರಾಮದ ಜನರೆಲ್ಲ ಸೇರಿ ತಮ್ಮ ದೇವತೆಗೆ ಗುಡಿ ಕಟ್ಟಲು ಆರಂಭಿಸುತ್ತಾರೆ. ಚಾವಣಿ ಮಟ್ಟಕ್ಕೆ ಆ ಗುಡಿ ಬಂದಾಗ ಒಬ್ಬನ ಮೈ ಮೇಲೆ ದೇವತೆ ಮಂಚಮ್ಮ ಆವಾಹಿಸಿಕೊಂಡು " ನಿಲ್ಸಿ ನನ್ನ ಮಕ್ಕಳಾ " ಎಂದು ಅಬ್ಬರಿಸಿದಾಗ ಕೆಲಸ ನಿಲ್ಲಿಸಿದ ಜನ ಕಕ್ಕಾಬಿಕ್ಕಿಯಾಗಿ ನೋಡುತ್ತಿರಲು ಆ ದೇವತೆ ಮತ್ತು ಜನರ ನಡುವೆ ಮಾತುಕತೆ ನಡೆಯುತ್ತದೆ. ಏನು ಮಾಡುತ್ತಿದ್ದೀರಿ ಎಂಬ ದೇವತೆಯ ಪ್ರಶ್ನೆಗೆ ಜನರೆಲ್ಲ ನಿನಗೊಂದು ಗುಡಿ ಕಟ್ಟುತ್ತಿದ್ದೀವಿ ಎಂದು ಉತ್ತರಿಸುತ್ತಾರೆ. ಆಗ ದೇವತೆಯು ನನಗೆ ನೀವು ಮನೆ ಕಟ್ಟುತ್ತಿರುವಿರಾದರೆ ನನ್ನ ಮಕ್ಕಳಾದ ನಿಮಗೆಲ್ಲ ಮನೆ ಇದೆಯೊ ಎಂದು ಪ್ರಶ್ನಿಸುತ್ತಾಳೆ. ಆ ಜನರಲ್ಲಿ ಒಬ್ಬ ನನಗಿಲ್ಲ ಎಂದು ಉತ್ತರಿಸಿದಾಗ ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ ಎಂದು

ಆದೇಶಿಸಿದ ಮಂಚಮ್ಮ ಮನೆ ಮಂಚಮ್ಮ ನಾಗುತ್ತಾಳೆ. ಹೀಗೆ ಚಾವಣಿ ಇಲ್ಲದ ಗಡಿಯಲ್ಲಿ ತಾಯಿ ಮನೆ ಮಂಚಮ್ಮ ಇಂದಿಗೂ ಪೂಜಿತಳಾಗುತ್ತಿದ್ದಾಳೆ.

5. ಶಾನು ಭೋಗರನ್ನು ರಕ್ಷಿಸಿದು ಖಿರ್ದಿ ಪುಸ್ತಕವೇ ? ಹುಲಿಯ ಧರ್ಮವೇ ? ಸಮರ್ಥನೆಯೊಂದಿಗೆ ವಿವರಿಸಿ.

ಹುಲಿಗಳು ಹಿಂದಿನಿಂದ ಮೇಲೆ ಬೀಳುವುದಿಲ್ಲವೆಂದು ಅರಿತಿದ್ದ ಶಾನಭೋಗರು ಉಪಾಯವಾಗಿ ಹಲಿಗೆ ಬೆನ್ನು ತಿರುಗಿಸಿ ನಡೆದು ನಡೆದು ದಣಿದರು. ಆ ವಿಪತತಿನ ಸನ್ನಿವೇಶದಲ್ಲಿ ಅವರಿಗೆ ನೆನಪಾಗಿದ್ದು ಅವರ ಬಳಿಯಿದ್ದ ಖಿರ್ದಿ ಪುಸ್ತಕ. ಅದು ಸದ್ಯಕ್ಕೆ ಅವರ ಬಳಿಯಿದ್ದ ಬ್ರಹ್ಮಾಸ್ತ್ರ. ಆದ್ದರಿಂದ ಹುಲಿಯ ಮುಖಕ್ಕೆ ಬಡಿದಾಗ ಏನಾಯಿತೆಂದು ಅರಿಯಲು ಅರೆ ನಿಮಿಷ ಹಿಡಿಯಿತು. ಅದನ್ನೇ ಉಪಯೋಗಿಸಿಕೊಂಡು ಓಡಿದ ಅವರು ಕಲ್ಲು ಎಡವಿ ಬಿದ್ದು ಮೂರ್ಛೆ ಹೋದಾಗ ಅಷ್ಟರಲ್ಲಿ ಅಲ್ಲಿಗೆ ಬರುತ್ತಿದ್ದ ರೈತರ ಶಬ್ಧ ಕೇಳಿ ಹುಲಿ ಪಲಾಯನ ಮಾಡಿತು. ಅವರಿಗೆ ಆ ಅರೆ ನಿಮಿಷದ ಅವಕಾಶವನ್ನು ಒದಗಿಸಿ ಕೊಟ್ಟು ಪ್ರಾಣವನ್ನು ಕಾಡಿದ ಖಿರ್ದಿ ಪುಸ್ತಕದ ಮೇಲೆ ಅವರಿಗೆ ಕೃತಜ್ಞತಾ ಭಾವವಿದೆ. ಖಿರ್ದಿ ಪುಸ್ತಕವೇ ತಮ್ಮ ಜೀವ ಉಳಿಸಿತು ಎಂಬುದು ಅವರ ನಂಬಿಕೆ. ಆದರೆ ನಿಜವಾಗಿ ನೋಡಿದರೆ ಶಾನುಭೋಗರು ಉಳಿದದ್ದು ಖಿರ್ದಿ ಪುಸ್ತಕದಿಂದಲ್ಲ. ಹುಲಿಯ ಧರ್ಮ ಶ್ರದ್ಧೆಯಿಂದ. ಏಕೆಂದರೆ ಭರತ ಖಂಡದ ಹುಲಿಗಳು ಹಿಂದಿನಿಂದ ದಾಳಿ ಮಾಡಿ ಕೊಲ್ಲದಿರುವ ಧರ್ಮ ಶ್ರದ್ಧೆಯ ಗುಣ. ಮನಸ್ಸು ಮಾಡಿದ್ದರೆ ಹುಲಿ ಯಾವಾಗಲೋ ಶಾನುಭೋಗರನ್ನು ಕೊಲ್ಲಬಹುದಿತ್ತು. ಆದರೆ ಹುಲಿಯ ಶದ್ಧೆಯೇ ಶಾನುಭೋಗರು ಹುಲಿಯಿಂದ ಪಾರಾಗಲು ಕಾರಣವಾಯಿತು ಎಂದು ಹೇಳಬಹುದು.

6. ದುಷ್ಟ ಬುದ್ಧಿಯ ತಂತ್ರ ಅವನಿಗೆ ತಿರುಗು ಬಾಣವಾದ ಬಗೆಯನ್ನು ತಿಳಿಸಿ.

ದುಷ್ಟ ಬುದ್ಧಿಯ ಧರ್ಮಬದ್ಧಿಯೊಡನೆ ಸೇರಿ ವ್ಯಾಪಾರ ಮಾಡಿ, ಲಾಭಗಳಿಸಿದ್ದ ಹೊನ್ನನ್ನು ತಾನೇ ದೋಚಿ, ಕಳ್ಳತನವನ್ನು ಧರ್ಮಬದ್ಧಿಯ ಮೇಲೆ ಹೊರಿಸಿ, ಇದಕ್ಕೆ ವಟವೃಕ್ಷವೇ ಸಾಕ್ಷಿ ಎಂದು ಧರ್ಮಾಧಿಕಾರಿಗಳ ಮುಂದೆ ಹೇಳುತ್ತಾನೆ. ಇದರಿಂದ ಧರ್ಮಬದ್ಧಿ ಮತ್ತು ಧರ್ಮಾಧಿಕಾರಿಗಳಿಗೆ ಆಶ್ಚರ್ಯವಾಗುತ್ತದೆ. ದುಷ್ಟ ಬದ್ಧಿಯು ತಂದೆಯ ಬುದ್ಧಿ ಮಾತನ್ನು ಆಲಿಸದೇ, ಮರದಿಂದ ಸಾಕ್ಷಿ ಹೇಳಿಸಲು ತನ್ನ ತಂದೆಯನ್ನೇ ಪೊಟರೆಯಲ್ಲಿ ಕೂರಿಸಿ, ಅವನಿಂದ ಧರ್ಮಬುದ್ಧಿಯೇ ಚಿನ್ನಕದ್ದನೆಂದು ಸುಳ್ಳು ಹೇಳಿಸುತ್ತಾನೆ. ಧರ್ಮಬದ್ಧಿಯು ದೈವಭಕ್ತನಾಗಿದ್ದು ಸತ್ಯ ಹೊರಬರುತ್ತದೆ ಎಂದು ನಂಬಿದ್ದನು. ಅವನ ನಂಬಿಕೆಯು ಸುಳ್ಳಾದಾಗ ಮರದ ಬಳಿ ಪರಿಕ್ಷಿಸಿ ಪೊಟರೆಯೊಳಗೆ ಮನುಷ್ಯ ಸಂಚಾರವಾಗಿರುವುದನ್ನು ಕಂಡುಕೊಳ್ಳುತ್ತಾನೆ. ಧರ್ಮಾಧಿಕಾರಿಗಳಿಗೆ ತಾನು ವ್ಯಾಪಾರಿಯ ಮನೋಭಾವದಂತೆ ಸುಳ್ಳು ಹೇಳಿದ್ದಾಗಿ, ಚಿನ್ನವನ್ನು ತಾನೇ ತೆಗೆದುಕೊಂಡಿದ್ದಾಗಿ ತಿಳಿಸಿ, ಈಗ ಆ ಚಿನ್ನಕ್ಕೆ ಹಾವು ಸುತ್ತಿಕೊಂಡಿದೆ ಎಂದು ಹೇಳಿ, ಚಿನ್ನವನ್ನು ತೆಗೆಯಲು ಮರದ

DDPI Office, Kolar Dist.

ಪೊಟರೆಗೆ ಹುಲ್ಲು ಕಡ್ಡಿಯಿಟ್ಟು ಬೆಂಕಿ ಇಡುತ್ತಾನೆ. ಪೊಟರೆಗೆ ಹೊಗೆ ತುಂಬಿ ದುಷ್ಟಬದ್ಧಿಯ ತಂದೆ ಪ್ರೇಮಮತಿ ಉಸಿರು ಕಟ್ಟಿ ಕೂಗಾಡುತ್ತ ಪೊಟರೆಯಿಂದ ಉರುಳಿ ಪ್ರಾಣ ಬಿಡುತ್ತಾನೆ. ದುಷ್ಟಬದ್ಧಿಯ ಕುಟಿಲತೆ ಧರ್ಮಾಧಿಕಾರಿಗಳಿಗೆ ತಿಳಿಯುತ್ತದೆ. ಹೀಗೆ ದುಷ್ಟಬುದ್ದಿಯ ತಂತ್ರ ಅವನಿಗೆ ತಿರುಗು ಬಾಣವಾಯಿತು.

7. ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

ನಾವು ಜೀವನದಲ್ಲಿ ಪ್ರೀತಿಯ ದ್ವೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷ ರಹಿತ ಸಮಾಜ ನಿರ್ಮಾಣ ಮಾಡಬಹುದು. ನಾವು ಬದುಕಿನಲ್ಲಿ ಎಚ್ಚರಿಕೆಯಿಂದ ಮುನ್ನಡೆಯು ಸಂಕಲ್ಪ ಕೈಗೊಳ್ಳುವುದರಿಂದ ಎಂತಹ ಸವಾಲುಗಳನ್ನು ಧೈರ್ಯವಾಗಿ ಎದುರಿಸಬಹುದು. ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಕೈಗೊಳ್ಳುವುದರಿಂದ ನದೀ ಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು. ನಾವು ವನಸಂರಕ್ಷಣೆಯ ಸಂಕಲ್ಪ ಕೈಗೊಳ್ಳುವುದರಿಂದ ಕಾಡುಗಳು ಹಚ್ಚಹಸುರಿನಿಂದ ಸಂವೃದ್ಧವಾಗುವಂತೆ ಮಾಡಬಹುದು. ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು. ನಾವು ಸಮಾನತೆ ಮನೋಭವನೆಯುಳ್ಳವರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಮನುಜ ಮನುಜರ ನಡುವಿನ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡಹಬಹುದು. ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು. ಭಯ ಹಾಗೂ ಸಂಶಯಗಳಿಂದ ಮುಕ್ತರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಭವಿಷ್ಯದ ಹೊಂಗನಸನ್ನು ಕಾಣಬಹುದು. ಹೀಗೆ ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪನವರು ಸಂಕಲ್ಪ ಮತ್ತು ಅನುಷ್ಠಾನವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

8. ಹಕ್ಕಿಯನ್ನು ಕಾಲ ಗತಿಗೆ ಹೋಲಿಸುತ್ತಾ ಕವಿ ದ ರಾ ಬೇಂದ್ರೆ ಹೇಳಿರುವ ಮಾತುಗಳಾವುವು ?

ದ . ರಾ.ಬೇಂದ್ರೆಯವರು "ಹಕ್ಕಿ ಹಾರುತಿದೆ ನೋಡಿದಿರಾ" ಕವನದಲ್ಲಿ ಚಲನ ಶೀಲವಾದ ಕಾಲವನ್ನು ಹಾರತ್ತಿರುವ ಹಕ್ಕಿಗೆ ಹೋಲಿಸಿ ವರ್ಣಿಸಿದ್ದಾರೆ. ವಿಶ್ವ ವ್ಯಾಪಿ ಕಾಲವು ಕೇವಲ ಗತಿ ಶೀಲವಲ್ಲ, ಪ್ರಗತಿ ಶೀಲ ಕೇವಲ ಕಣ್ಣು ಮಿಟುಕಿಸುವ ಸಮಯದಲ್ಲಿ ಈ ಕಾಲ ಪಕ್ಷಿ ಸದೂರ ಗಮಿಸಬಲ್ಲದು, ಭೂತಕಾಲ, ವರ್ತಮಾನಕಾಲ, ಭವಿಷ್ಯತ್ಕಾಲಗಳು ಕಾಲಪಕ್ಷಿಯ ಚಲನೆಯ ಅಂಶಗಳು. ಎಲ್ಲ ಜನಾಂಗಗಳನ್ನು ಈ ಕಾಲಪಕ್ಷಿ ಹೊತ್ತು ಮುನ್ನಡೆದಿದೆ. ಆಕಾಶ ಅನಂತವಾದದ್ದು. ಹಾಗೆಯೇ ಕಾಲ ಪಕ್ಷಿಯು ಅನಂತವಾದದ್ದು. ಕಾಲ ಪಕ್ಷಿಯು ಚಿಕ್ಕೆಗಳ ಮಾಲೆಯನ್ನು ಅಂದರೆ ಆಕಾಶಗಂಗೆಯೇ ಮೊದಲಾದ ವಿಶ್ವಗಳನ್ನು ಸೆಕ್ಕಿಸಿಕೊಂಡಿದೆ. ಸೂರ್ಯಚಂದ್ರರು ಕಾಲ ಪಕ್ಷಿಯ ಕಣ್ಣುಗಳು. ಸಣ್ಣ ಪುಟ್ಟರಾಜ್ಯಗಳನ್ನು ಹುಟ್ಟಿಸಿ ಬೆಳೆಯಿಸುವ ಕಾಲ ಪಕ್ಷಿಯು ಅವುಗಳನ್ನು ನಾಶಮಾಡುವ ಕಾರ್ಯವನ್ನು ಮಾಡುವುದು. ಕಾಲ ಪಕ್ಷಿಯ ಮುಂದೆ ಯಾವ ಸಾರ್ವಭೌಮರ ಆಟವೂ ನಡೆಯಲಾರದು. ಎಲ್ಲರೂ ಕಾಲಪಕ್ಷಿಗೆ ತಲೆಬಾಗಲೇಬೇಕು. ಕಾಲಪಕ್ಷಿಯು ಹೊಸ ಯುಗಕ್ಕೊಮ್ಮೆ ಅದರ ಹಣೆಬರಹವನ್ನು ಬರೆಯುವ ಮತ್ತು ಹಳೆ ಯಯುಗದ ಹಣೆಬರಹ ಹೊರೆಸುವ ಕಾರ್ಯವನ್ನು ಮಾಡುವುದು. ಯುಗ ಯುಗಗಳನ್ನು ಮನ್ವಂತರಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿದೆ. ಹೊಸ ಕಾಲದ ಎಳೆಯ ಮಕ್ಕಳಿಗೆ ಹಾರೈಸಿ ಬೆಳೆಸುವುದು ಈ ಕಾಲಪಕ್ಷಿ ಎಂದು ಬೇಂದ್ರೆಯವರು ಕಾಲಪಕ್ಷಿಯನ್ನು ವರ್ಣಿಸಿದ್ದಾರೆ.

9. ಹಲಗಲಿ ದಂಗೆಗೆ ಕಾರಣವೇನು ? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು ?

DDPI Office, Kolar Dist.

1857ರ ಸಿಪಾಯಿ ದಂಗೆ ಅಥವಾ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು. ಅದರ ಪ್ರಕಾರ ಭಾರತೀಯರು ಬ್ರಿಟಿಷರ ಅನುಮತಿಯಿಲ್ಲದೆ ಆಯುಧಗಳನ್ನು ಹೊಂದುವ ಹಾಗಿರಲಿಲ್ಲ ಮತ್ತು ಈಗಾಗಲೆ ಹೊಂದಿರುವ ಆಯುಧಗಳನ್ನು ಮರಳಿಸಬೇಕಿತ್ತು. ಹಲಗಲಿ ಬೇಡರಿಗೆ ಆಯುಧಗಳೇ ಜೀವವಾಗಿತ್ತು. ಆಯುಧಗಳನ್ನು ಮರಳಿಸಲು ಒಪ್ಪದ ಹಲಗಲಿ ಬೇಡರು ಹನುಮ, ಬಾಲ, ಜಡಗ, ರಾಮರ ನೇತೃತ್ವದಲ್ಲಿ ಕಂಪನಿ ಸರಕಾರದ ವಿರುದ್ಧ ದಂಗೆಯೆದ್ದರು. ಸಿಪಾಯಿಗಳ ಕೆನ್ನೆಗೆ ಬಾರಿಸಿದರು. ಮನ ವೊಲಿಸಲು ಬಂದ ಹೆಬಲಕ್ ಎಂಬ ಅಧಿಕಾರಿಯನ್ನು ಕೊಂದರು. ಕೋಪಗೊಂಡ ಕಂಪನಿಯ ಸರಕಾರ ಬೇಡರನ್ನು ಕಂಡಕಂಡಲ್ಲಿ ಸಾಯಿಸಿತು. ಬೇಡರ ಮುಖಂಡರನ್ನು ನಿರ್ದಾಕ್ಷಿಣ್ಯವಾಗಿ ಹತ್ಯೆಗೆಯ್ಯಲಾಯಿತು. ಹಲಗಲಿ ಊರನ್ನು ಲೂಟಿ ಮಾಡಿ ಬೆಂಕಿ ಹಚ್ಚಲಾಯಿತು. ಹೀಗೆ ಹಲಗಲಿ ದಂಗೆಯನ್ನು ಸರಕಾರ ನಿಯಂತ್ರಿಸಿತು.

10. ಕರ್ಣನಿಗೆ ಕೃಷ್ಣನು ಒಡ್ಡಿದ ಆಮಿಷಗಳೇನು ?

"ಕರ್ಣ ನಿಮಗೂ ಯಾದವರು ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ, ನೀನು ನಿಜವಾಗಿ ಈ ಭೂಮಿಯ ಒಡೆಯ. ಆದರೆ ನಿನಗೆ ಆ ಕುರಿತು ತಿಳಿದಿಲ್ಲ" ಎಂದು ಕೃಷ್ಣ ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು. ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು. ಬಳಿಕ ಧರ್ಮರಾಯ, ಭೀಮಾರ್ಜುನ ರುಜನಿಸಿದರು. ಹಾಗೆ ಮಾದ್ರಿಯಲ್ಲಿ ಐದನೇ ಮಂತ್ರದಲ್ಲಿ ನಕುಲ ಸಹದೇವ ಹುಟ್ಟಿದರು. ನಿನ್ನನ್ನು ಹಸ್ತಿನಾಪುರದ ರಾಜ ಮಾಡುವೆ. ಕೌರವರ, ಪಾಂಡವರ ಸೈನ್ಯ ನಿನ್ನ ಸೇವೆ ಮಾಡುವರು. ನೀನು ದುರ್ಯೋಧನನ ಬಾಯಂಜಲಿಗೆ ಕೈಯೊಡ್ಡುವುದೇಕೆ ? ಎಡ ಭಾಗದಲ್ಲಿ ಕೌರವರ ಸಮೂಹ, ಬಲಭಾಗದಲ್ಲಿ ಪಾಂಡವರ ಸಮೂಹ, ಮುಂದುಗಡೆ ಮಾದ್ರ ಮಾಗದ ಯಾದವಾದಿಗಳು, ಮಧ್ಯದಲ್ಲಿ ನೀನು ರಾಜ ಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆಯುವುದು ಸರಿಯೇ? ದುರ್ಯೋಧನನು ನುಡಿಸಲು "ಒಡೆಯ ಅನುಗ್ರಹವಾಗಲಿ" ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ? ಎಂದು ಆಮಿಷ ಒಡ್ಡಿದನು.

11. "ಹಸುರು" ಕವನದ ರೀತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.

"ಹಸುರು" ಕವನವು ಅಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ. ಇದು ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ "ಕವಿಶೈಲ"ದಲ್ಲಿ ಅವರಿಗಂಟಾದ ಸೌಂದರ್ಯಾನುಭವ, ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ ಸಮೀಪ ಸಂಬಂಧವನ್ನು ತೋರಿಸುತ್ತದೆ.

ಕವಿಯಾತ್ಮವು ಹಸುರುಗಟ್ಟಲು ಅಶ್ವಯುಜಮಾಸದ ನವರಾತ್ರಿಯ ದಿನದಲ್ಲಿ ಹೊಸ ಚಿಗುರಿನಿಂದ ಕೂಡಿದ ಭೂಮಿಯಲ್ಲಿ ವಿಶಾಲವಾದ ಶಾಮಲ ಕಡಲು ಹಸುರಾಗಿರುದನ್ನು ನೋಡಿ ಕವಿಯ ಆತ್ಮವನ್ನು ರಸ ಪಾನದಲ್ಲಿ ಮಿಂದಿತು. ಆಗಸದಲ್ಲಿ; ಮಗಿಲಿನಲ್ಲಿ; ಗದ್ದೆಯ ಬಯಲಿನಲ್ಲಿ; ಬೆಟ್ಟ ಗುಡ್ಡಗಳಲ್ಲಿ; ಕಣಿವೆಯಲ್ಲಿ; ಸಂಜೆಯ ಬಿಸಿಲಿನಲ್ಲಿ ಹಸುರು ಹರಡಿತು. ಹಾಗೆಯೇ ಅಶ್ವೀಜ ಮಾಸದಲ್ಲಿ ಭತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ನೋಟ; ಅದರ ಪಕ್ಕದಲ್ಲೇ ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಹರಡಿದಂತೆ ಭೂಮಿಯು ಹಸುರಿನಿಂದ ಮೈ ಮುಚ್ಚಿರಲು ಕವಿಗೆ ಬೇರೆ ಬಣ್ಣಗಳೇ ಕಾಣದಾದವು. ಹೊಸ ಹೂವಿನ ಕಂಪು; ತಂಗಾಳಿಯ ತಂಪು; ಹಕ್ಕಿಯ ಇಂಪಾದಗಾನ; ಅತ್ತ-ಇತ್ತ-ಎತ್ತ ನೋಡಿದರೂ ಹಸುರು: ಹಸುರು: ಹಸುರು: ಇದನ್ನು ನೋಡಿದ ಕವಿಯಾತ್ಮವು

DDPI Office, Kolar Dist.

ಹಸುರುಗಟ್ಟಿತು. ಕವಿಯ ದೇಹದಲ್ಲು ಹಸುರು ರಕ್ತವೇ ಹರಿದಾಡಿತು. ಎಂದು ಹಸುರು ವ್ಯಾಪಿಸಿದ ಬಗೆಯನ್ನು ಕವಿ ವರ್ಣಿಸಿದ್ದಾರೆ.

12. ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

ದುರ್ಯೋಧನನು ಭೀಷ್ಮನಿಗೆ ಹೀಗೆ ಹೇಳುವನು. ನಾನು ನೆಲಕ್ಕಾಗಿ ಯುದ್ಧ ಮಾಡುವವನಲ್ಲ. ಛಲಕ್ಕಾಗಿ ಯುದ್ಧ ಮಾಡುವವನು. ನನ್ನ ಗೆಳೆಯ ಕರ್ಣ ಈ ಭೂಮಿ ನನಗೆ ಪಾಳು ಭೂಮಿಯಿದ್ದಂತೆ. ನನ್ನ ತಮ್ಮ ದುಶ್ಯಾಸನ ಹಾಗೂ ಮಿತ್ರಕರ್ಣನನ್ನು ಕೊಂದ ಭೀಮಾರ್ಜುನರನ್ನು ಸಾಯಿಸುವವರೆಗೆ ನನಗೆ ನೆಮ್ಮದಿಯಿಲ್ಲ. ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ ಪಾಂಡವರೊಡನೆ ಸಂಧಿಯನ್ನು ಮಾಡಿ ಕೊಳ್ಳುವುದಿಲ್ಲ. ನನ್ನ ಮನದ ದುಃಖ ತೀರಿದ ಬಳಿಕ ಸಂಧಿ ಮಾತು ಎಂದನು. ನನ್ನ ನೂರು ಜನ ತಮ್ಮಂದಿರು ಯುದ್ಧದಲ್ಲಿ ಸತ್ತರು. ಅವರು ಪುನಃ ಬರುವುದಿಲ್ಲ. ಆದ್ದರಿಂದ ಪಾಡವರೊಡನೆ ಯುದ್ಧ ಮಾಡುವೆನು. ಛಲವನ್ನು ಮೆರೆಯುವೆನು. ಇಂದಿನ ಯುದ್ಧದಲ್ಲಿ ಒಂದು ಪಾಂಡವರು ಭೂಮಿಗೆ ಒಡೆಯರಾಗುವರು ಅಥವಾ ನಾನು ಭುಮಿಗೆ ಒಡೆಯನಾಗುವೆನು. ಆದ್ದರಿಂದ ನಾನು ಯುದ್ಧವನ್ನು ಮಾಡುವೆನು" ಎಂದು ಹೇಳಿದನು.

13. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು ?

ರಾವಣನ ವಧೆಯಿಂದ ಬ್ರಹ್ಮ ಹತ್ಯಾ ದೋಷ ಬಂದಿರುವುದನ್ನು ಪರಿಹರಿಸಿಕೊಳ್ಳಲು ಶ್ರೀ ರಾಮನು ಮಹರ್ಷಿಗಳ ಸಲಹೆಯಂತೆ ಅಶ್ವಮೇಧ ಯಾಗವನ್ನು ಕೈಗೊಂಡು ಯಜ್ಞಾಶ್ವದ ಕುದುರೆಯ ಕಾವಲಿಗೆ ಶತ್ರುಘ್ನನನ್ನು ಕಳುಹಿಸಿದನು. ದೇಶ ದೇಶಗಳನ್ನು ಸುತ್ತಾಡಿದ ಅಶ್ವಮೇಧದ ಕುದುರೆಯು ಒಂದು ದಿನ ವಾಲ್ಮೀಕಿ ಮಹರ್ಷಿಗಳ ಆಶ್ರಮಕ್ಕೆ ಬರುತ್ತದೆ. ಅಲ್ಲಿ ಮಹರ್ಷಿಗಳ ಆಶ್ರಮದ ಉಪವನದ ಕಾವಲಿಗೆ ನಿಯೋಜಿತನಾಗಿದ್ದ ಲವನು ತನ್ನ ಜೊತೆಯವರ ಕೂಡಿ ಧನುರ್ಧಾರಿಯಾಗಿ ಬರುತ್ತಿದ್ದಾಗ ಅಲ್ಲಿದ್ದ ಕುದುರೆಯನ್ನು ನೋಡಿ ಎಲ್ಲಿಯ ತುರುಗವಿದು? ಹೀಗೆ ಹೂದೋಟವನ್ನು ಹಾಳುಮಾಡುತ್ತಿದೆಯಲ್ಲ, ವರುಣನಿರುವಲ್ಲಿಗೆ ಹೋಗುವಾಗ ವಾಲ್ಮೀಕಿ ಮಹರ್ಷಿಗಳು ಈ ವನವನ್ನು ನೀಡಿಕೊಳ್ಳಲು ಹೇಳಿ ಹೋಗಿದ್ದಾರೆ. ಅವರು ಮರಳಿ ಬಂದು ಇದನ್ನು ನೋಡಿದರೆ ನನ್ನ ಮೇಲೆ ಮುನಿಸಿಕೊಳ್ಳುವರು ಎಂದು ಯೋಚಿಸಿ ಕುದುರೆಯ ಬಳಿ ಬರಲು ಅದರ ಮೆಲಿದ್ದ ಹಣೆಪಟ್ಟಿಯನ್ನು ನೋಡಿದನು. ಅದರಲ್ಲಿ ಈ ಭೂಮಿಯಲ್ಲಿ ಕೌಸಲ್ಯೆ ಪಡೆದ ಅವಳ ಮಗ ಶ್ರೀ ರಾಮನೊಬ್ಬನೇ ವೀರನು, ಆತನ ಯಜ್ಞ ತುರಗವಿದು. ಅದನ್ನು ಕಟ್ಟುವ ವೀರರು ಯಾರಾದರೂ ಇದ್ದರೆ ಕಟ್ಟಬಹುದು ಎಂದಿದ್ದ ಲೇಖನವನ್ನೋದಿದ ವೀರ ಲವನು ಶ್ರೀರಾಮನ ಗರ್ವವನ್ನು ಬಿಡಿಸದಿದ್ದರೆ ನನ್ನ ತಾಯಿಯನ್ನು ಜನರು ಬಂಜೆ ಎಂದು ಕರೆಯದಿರುವರೇ! ತನ್ನಲ್ಲಿ ತೋಳ್ಬಲವಿದ್ದು ಏನು ಪ್ರಯೋಜನ? ಎಂದು ಆಲೋಚಿಸಿ ಶ್ರೀ ರಾಮನ ಯಜ್ಞದ ಕುದುರೆಯನ್ನು ಕಟ್ಟಿಹಾಕಿದನು.

DDPI Office, Kolar Dist.

**ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :–**

ಅಂದು ಮಹಾರಾಜ ಕಾಲೇಜು ಸಂಸ್ಕೃತಿ ಮತ್ತು ಜ್ಞಾನದ ದೇಗುಲದಂತಿತ್ತು. ಕಾಲೇಜಿನ ಶಿಕ್ಷಕ ವರ್ಗದವರು ಅಲ್ಪಸಂಬಳ ಬರುತ್ತಿದ್ದರೂ ತಮ್ಮ ವೃತ್ತಿ ಪವಿತ್ರವಾದುದೆಂಬ ತೃಪ್ತಿಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ಅವರಲ್ಲಿ ಜ್ಞಾನ ಸಂಪತ್ತಿನ ಜೊತೆಗೆ ನೈತಿಕ ಸಂಪತ್ತು ಇತ್ತು. ಮಹಾರಾಜ ಕಾಲೇಜಿನಲ್ಲಿಯೂ ಮಂಜಪ್ಪನವರಿಗೆ ವಿದ್ಯಾರ್ಥಿವೇತನ ಲಭ್ಯವಾಗಿತ್ತು. ವಿದ್ಯಾರ್ಥಿವೇತನದಿಂದಲೆ ಅವರು ಜೀವನ ನಿರ್ವಹಿಸುತ್ತಿದ್ದರು. ಕಡಿದಾಳ್ ಮಂಜಪ್ಪನವರು ಕಾಲೇಜಿನಲ್ಲಿ ಬಿಡುವಿದ್ದಾಗ ವಾಚನಾಲಯದಲ್ಲಿದ್ದ ದಿನ ಪತ್ರಿಕೆಗಳನ್ನು ತಪ್ಪದೇ ಓದುತ್ತಿದ್ದರು. ಮಹಾತ್ಮ ಗಾಂಧಿಜೀಯಂತಹ ರಾಷ್ಟ್ರ ಭಕ್ತರ ಭಾಷಣಗಳು, ಲೇಖನಗಳು ಅವರ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನು ಉಂಟು ಮಾಡಿದ್ದವು. ಹೇಗಲ್, ಕ್ಯಾಂಟೆ, ವಾಲ್ಟೇರ್, ರೂಸೋ ಮುಂತಾದ ದಾರ್ಶನಿಕರ ಕೃತಿಗಳನ್ನು ಕ್ರೀಕ್ ಮಹಾ ಕವಿ ಹೋಮರನ ಇಲಿಯಡ್ ಮತ್ತು ಒಡಿಸ್ಸಿ ಮಹಾ ಕಾವ್ಯಗಳನ್ನು ಗಿಬ್ಬನ್ ಅವರ ಉನ್ನತಿ ಮತ್ತು ಅವನತಿ ಗ್ರಂಥವನ್ನು ರವೀಂದ್ರನಾಥ ಠಾಕೋರ್, ಬರ್ನಾಡ್‌ಷಾ, ಟಾಲ್‌ಸ್ಟಾಯ್ ಮುಂತಾದವರ ಕೃತಿಗಳನ್ನು ಓದಿರುವುದರಿಂದ ಮಂಜಪ್ಪನವರ ಮನಸ್ಸು ಬಹಳ ವಿಕಾಸಗೊಂಡಿತ್ತು. ಅಂದು ಜ್ಞಾನ ಸಂಪಾದನೆ ವಿದ್ಯಾರ್ಥಿಗಳ ಮುಖ್ಯ ಗುರಿಯಾಗಿದ್ದರೆ ; ಇಂದು ಪರೀಕ್ಷೆಯಲ್ಲಿ ಹೇಗಾದರೂ ಮಾಡಿ ಉತ್ತೀರ್ಣರಾಗುವುದು ಗುರಿಯಾಗಿದೆ.

**ಪ್ರಶ್ನೆಗಳು :–**

1) ಅಂದು ಮಹಾರಾಜ ಕಾಲೇಜಿನ ಅಧ್ಯಾಪಕರು ಹೇಗೆ ಕಾರ್ಯನಿರ್ವಹಿಸುತ್ತಿದ್ದರು ?

2) ಕಾಲೇಜಿಗೆ ಬಿಡುವಿದ್ದಾಗ ಮಂಜಪ್ಪನವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳು ಯಾವುವು ?

DDPI Office Kolar Dist.

**ಪತ್ರಲೇಖನ ಮಾದರಿ ವ್ಯವಹಾರಿಕ ಪತ್ರಗಳು**

**ನಿಮ್ಮನ್ನು ಕೋಲಾರದ ಬಾಪೂಜಿ ಪ್ರೌಢ ಶಾಲೆಯ 'ವಿವೇಕಾನಂದ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಏರ್ಪಡಿಸಿದ್ದ, 'ರಾಷ್ಟ್ರೀಯ ಮತದಾನದ' ವರದಿಯನ್ನು ಪ್ರಕಟಿಸುವಂತೆ ಕೋರಿ ವಿಜಯವಾಣಿ ದಿನಪ್ರತಿಕೆಯ ಸಂಪಾದಕರಿಗೆ ಒಂದು ಮನವಿ ಪತ್ರ ಬರೆಯಿರಿ.**

**ಇವರಿಂದ,** **ದಿನಾಂಕ : 26–01–2021**

**ವಿವೇಕಾನಂದ**

**ಬಾಪೂಜಿ ಪ್ರೌಢಶಾಲೆ**

**ಕೋಲಾರ ತಾ॥ಮತ್ತು ।ಜಿ॥**

**ಇವರಿಗೆ**

**ವಿಜಯವಾಣಿ ಸಂಪಾದಕರಿಗೆ**

**ಕೋಲಾರ ತಾ॥ ಮತ್ತು ॥ಜಿ॥**

**ಮಾನ್ಯರೇ,**

**ವಿಷಯ: 'ರಾಷ್ಟ್ರೀಯ ಮತದಾನದ' ವರದಿಯನ್ನು ಪ್ರಕಟಿಸುವ ಬಗ್ಗೆ.**

*******

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ದಿನಾಂಕ:26–01–2021 ರಂದು ಒಂದು ದಿನ ಮುಂಚಿತವಾಗಿ ವಿದ್ಯಾರ್ಥಿಗಳಲ್ಲಿ ಮತದಾನದ ಬಗ್ಗೆ ಅರಿವು ಮೂಡಿಸಲು 'ರಾಷ್ಟ್ರೀಯ ಮತದಾನದ' ದಿನಾಚರಣೆಯನ್ನು ಆಚರಿಸಿದರು ಕೋವಿಡ್–19 ಸೋಂಕು ಇರುವ ಕಾರಣ ಎಲ್ಲರೂ ಮಾಸ್ಕಧರಿಸಿ, ಸಾಮಾಜಿಕ ಅಂತರ ಕಾಯ್ದುಕೊಂಡು ನಮ್ಮ ಶಾಲೆಯ ಮುಖ್ಯಶಿಕ್ಷಕರು ಸಹಶಿಕ್ಷಕರು ಮುಖ್ಯ ಅತಿಥಿಗಳಾಗಿ ನಮ್ಮ ಶಾಲೆಯ ಆಡಳಿತಮಂಡಳಿ ಎಸ್.ಡಿ.ಎಂ.ಸಿ ಅಧ್ಯಕ್ಷರು ಉಪಾಧ್ಯಕ್ಷರು, ಪಿ.ಸಿ ಬಡಾವಣೆಯ ಸಿ.ಆರ್.ಪಿ. ಆದ ಜಮೀಲ್ ಅಹ್ಮದ್ ರವರು ನಮ್ಮ ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಪೋಷಕರು ನಮ್ಮ ಶಾಲೆಯ ಸುತ್ತ ಮುತ್ತಲಿನ ನಾಗರಿಕ ಬಂದುಗಳು ಭಾಗವಹಿಸಿದ್ದರು, ಮತದಾನದ ಮಹತ್ವದ ಬಗ್ಗೆ ಜಮೀಲ್‌ಅಹ್ಮದ್ ರವರು ಭಾಷಣ ಮಾಡಿದರು ಮುಖ್ಯಶಿಕ್ಷಕರು "ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು" ಮತದಾನದ ವಯಸ್ಸಿನ ಬಗ್ಗೆ ಹಾಗೂ ಮತದಾನ ಕಡ್ಡಾಯವಾಗಿ ಮಾಡುವಂತೆ ನಿಮ್ಮ ಗ್ರಾಮ ನಗರದ ಅಕ್ಕ–ಪಕ್ಕದ ಮನೆಯ ವಯಸ್ಕರಿಗೆ ತಿಳಿಸುವಂತೆ ಮಾಹಿತಿ ನೀಡುವುದರ ಜೊತೆಗೆ ರಸಪ್ರಶ್ನೆ ಕಾರ್ಯಕ್ರಮದೊಂದಿಗೆ ಮುಕ್ತಾಯಗೊಳಿಸಿದರು.

ಈ ಮಾಹಿತಿಯನ್ನು ತಮ್ಮ ದಿನಪ್ರತಿಕೆಯಲ್ಲಿ ಪ್ರಕಟಣೆ ಮಾಡಬೇಕೆಂದು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ.

**ವಂದನೆಗಳೊಂದಿಗೆ.**

**ದಿನಾಂಕ: 26–01–2021** **ಇಂತಿ ತಮ್ಮ ವಿಶ್ವಾಸಿ**

**ಸ್ಥಳ: ಕೋಲಾರ** **ವಿವೇಕಾನಂದ**

**ಬಾಪೂಜಿ ಪ್ರೌಢಶಾಲೆ**

**ಕೋಲಾರ**

DDPI Office Kolar Dist.

**ನಿಮ್ಮನ್ನು ಕೋಲಾರ ಸರ್ಕಾರಿ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿ ಓದುತ್ತಿರುವ ಸಾಹಿತ್ಯ/ಸುಚೇತನ್ ಎಂದು ಭಾವಿಸಿಕೊಂಡು ನಿಮ್ಮ ವಾರ್ಷಿಕ ಪರೀಕ್ಷೆಯ ಸಿದ್ಧತೆಗೆ ಪದೇ ಪದೇ ಕೈಕೊಡುತ್ತಿರುವ ವಿದ್ಯುತ್ ತೊಂದರೆಯನ್ನು ನಿವಾರಿಸುವಂತೆ ತಿಳಿಸಿ ಕೋಲಾರ ಕೆ.ಪಿ.ಟಿ.ಸಿ.ಎಲ್ ಬೇಸ್ಕಾಂ ಅಧಿಕಾರಿಗಳಿಗೊಂದು ಪತ್ರ ಬರೆಯಿರಿ.**

**ಇವರಿಂದ** **ದಿನಾಂಕ:**

**ಸಾಹಿತ್ಯ**
**ಹತ್ತನೇ ತರಗತಿ**
**ಸರ್ಕಾರಿ ಪ್ರೌಢಶಾಲೆ**
**ಕೋಲಾರ.**

**ಇವರಿಗೆ**
**ವಿದ್ಯುತ್ ವ್ಯವಸ್ಥಾಪಕರು**
**ಕೆ.ಪಿ.ಟಿ.ಸಿ.ಎಲ್ ಬೇಸ್ಕಾಂ**
**ಕೋಲಾರ ತಾ॥ಮತ್ತು ॥ಜಿ॥**

**ಮಾನ್ಯರೇ,**

**ವಿಷಯ: ವಿದ್ಯುತ್ ತೊಂದರೆಯನ್ನು ನಿವಾರಿಸುವ ಬಗ್ಗೆ.**

******

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೋಲಾರ ನಗರದ ಸಕಾರಿ ಪ್ರೌಢಶಾಲೆಯಲ್ಲಿ 10 ನೇ ತರಗತಿ ಓದುತ್ತಿದ್ದು ಇದೇ ಜಯನಗರ ನಿವಾಸಿಯಾದ ಸಾಹಿತ್ಯ ಎಂಬ ವಿದ್ಯಾರ್ಥಿಯಾದ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಮಗೆ ಜೂನ್ 21 ರಿಂದ ವಾರ್ಷಿಕ ಪರೀಕ್ಷೆಗಳು ನಡೆಯುವುದರಿಂದ ನಾವು 10ನೇ ತರಗತಿಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಬೇಕಾದರೆ ಈಗಿನಿಂದಲೇ ಹೆಚ್ಚು ಅಭ್ಯಾಸ ಮಾಡಬೇಕಾಗಿದೆ ಆದರೆ ರಾತ್ರಿವೇಳೆ ನಮ್ಮ ನಿವಾಸದ ಸುತ್ತ–ಮುತ್ತ ಪದೇ ಪದೇ ವಿದ್ಯುತ್ ಅಭಾವ ಉಂಟಾಗುವುದರಿಂದ ನಮ್ಮ ತಹ ಎಷ್ಟೋ ವಿದ್ಯಾರ್ಥಿಗಳ ಉತ್ತಮ ಅಭ್ಯಾಸಕ್ಕೆ ತೊಂದರೆಯಾಗುತ್ತಿದೆ ದಯವಿಟ್ಟು ಪರೀಕ್ಷೆಗಳು ಮುಗಿಯುವವರಿಗಾದರೂ ವಿದ್ಯುತ್ ತೊಂದರೆಯನ್ನು ನಿವಾರಿಸಬೇಕೆಂದು ತಮ್ಮಲ್ಲಿ ಸವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

**ವಂದನೆಗಳೊಂದಿಗೆ,**

**ದಿನಾಂಕ:** **ಇಂತಿ ತಮ್ಮ ವಿಶ್ವಾಸಿ**
**ಸ್ಥಳ:** **ಸಾಹಿತ್ಯ**
**10ನೇ ತರಗತಿ**
**ಸರ್ಕಾರಿ ಪ್ರೌಢಶಾಲೆ, ಕೋಲಾರ.**

DDPI Office Kolar Dist.

**ಮಾದರಿ ವೈಯಕ್ತಿಕ ಪತ್ರಗಳು**

**ನಿಮ್ಮನ್ನು ಕೋಲಾರದ ಡಿ.ವಿ.ಜಿ ಗುಂಡಪ್ಪ ಬಡಾವಣೆಯಲ್ಲಿ ವಾಸವಾಗಿರುವ ಹಾರಿಕ/ನಿರಂಜನ್ ಎಂದು ಭಾವಿಸಿಕೊಂಡು ನಿಮ್ಮ ಪರೀಕ್ಷಾ ಸಿದ್ಧತೆಗಳ ಕುರಿತು ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ವಾಸವಾಗಿರುವ ವೆಂಕಟಲಕ್ಷ್ಮಮ್ಮ ಎಂಬ ಹೆಸರಿನ ತಾಯಿಯವರಿಗೆ ಒಂದು ಪತ್ರ ಬರೆಯಿರಿ.**

**ಕ್ಷೇಮ** **ಶ್ರೀ** **ದಿನಾಂಕ**

ಮಾತೃಶ್ರೀ ತಾಯಿಯವರಿಗೆ ನಿಮ್ಮ ಮಗಳಾದ ಹಾರಿಕ ಬೇಡುವ ಆಶೀರ್ವಾದಗಳು

ನಾನು ಇಲ್ಲಿ ಕ್ಷೇಮಾವಾಗಿದ್ದೇನೆ, ನೀವು ಸಹ ಅಲ್ಲಿ ಕ್ಷೇಮಾವಾಗಿರುತ್ತೀರಿ ಎಂದು ಭಾವಿಸುತ್ತೇನೆ ಅಮ್ಮಾ ಕೆಲವು ತಿಂಗಳಿನಿಂದ ಕೊರೊನಾ(ಕೋವಿಡ್–19) ಎಂಬ ಮಹಾ ಮಾರಿ ಇಡೀ ವಿಶ್ವಕ್ಕೆ ಅಪ್ಪಳಿಸಿತು ಇಂದರಿಂದದಿಕ್ಕು ತೋಚದ ಶಿಕ್ಷಣ ಇಲಾಖೆ ಪರೀಕ್ಷೆ ಇಲ್ಲದೆ ನಮ್ಮನ್ನು 9ನೇ ತರಗತಿಯಿಂದ 10ನೇ ತರಗತಿಗೆ(ಬಂದಿದ್ದೇವೆ) ಉತ್ತೀರ್ಣಗೊಳಿಸಲಾಗಿದೆ ಏಕೆಂದರೆ ಮಕ್ಕಳ ಮುಂದಿನ ಭವಿಷ್ಯ ಹಾಳಾಗಬಾರದೆಂದು ಕೊರೊನಾ ಮಹಾಮರಿ ಇದ್ದರೂ ಶಿಕ್ಷಣ ಸಚಿವರು ಶಾಲೆಗಳನ್ನು ಪ್ರಾರಂಭಿಸಿದ್ದಾರೆ.

ನಮ್ಮ ಶಾಲೆಯು ಸಹ ಪ್ರಾರಂಭವಾಗಿದೆ ಕೆಲವು ಕಟ್ಟುನಿಟ್ಟಿನ ನಿಯಮಗಳಾದ ಕಡ್ಡಾಯ ಮಾಸ್ಕಧರಿಸುವುದು ಸಾಮಾಜಿಕ ಅಂತರ ಕೈಗೆ ಸ್ಯಾನಿಟೈಜರ್ ಬಳಕೆ ಇತ್ಯಾದಿ ನಿಯಮಗಳೊಂದಿಗೆ ಶೈಕ್ಷಣಿಕ ಚಟುವಟಿಕೆಗಳು ರೂಪಣಾತ್ಮಕ ಮೌಲ್ಯಮಾಪನಗಳನ್ನು ಕಿರುಪರೀಕ್ಷೆಗಳು ನಡೆಯುತ್ತಿವೆ ಈ ಪರೀಕ್ಷೆಗಳಲ್ಲೂ ನಾನು ಪ್ರಥಮ ಶ್ರೇಣಿಯಲ್ಲಿಯೇ ಇದ್ದೇನೆ. ಇನ್ನು ಪರೀಕ್ಷೆಗೆ ಮೂರು ತಿಂಗಳು ಇರುವುದರಿಂದ ಜಿಲ್ಲೆಗೆ ಪ್ರಥಮ ಸ್ಥಾನವನ್ನುಗಳಿಸಬೇಕೆಂಧು ಬಹಳ ಶ್ರಮವಹಿಸಿ ಓದುತ್ತಿದ್ದೇನೆ ಅಮ್ಮಾ ಕೊರೊನಾ ಎಲ್ಲಾ ಕಡೆಯೂ ಬಂದಿರುವುದರಿಂದ ನಿಮ್ಮ ಆರೋಗ್ಯದ ಬಗ್ಗೆಯು ಕಾಲಜಿ ಇರಲಿ ಇನ್ನೂ ಹೆಚ್ಚಿನ ವಿಷಯಕ್ಕೆ ಮುಂದಿನ ಪತ್ರ ಬರೆಯುವೆ ಇಲ್ಲಿಗೆ ಈ ಪತ್ರವನ್ನು ಮುಗಿಸುತ್ತೇನೆ.

**ಧನ್ಯವಾದಗಳೊಂದಿಗೆ.**

**ಇವರಿಗೆ**
**ವೆಂಕಟಲಕ್ಷ್ಮಮ್ಮ**
**ಮುದ್ದೇನಹಳ್ಳಿ ಗ್ರಾಮ**
**ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ**

**ಇಂತಿ ನಿಮ್ಮ ಪ್ರೀತಿಯಮಗಳು**
**ಹಾರಿಕ**
**ಡಿ. ವಿ. ಜಿ. ಗುಂಡಪ್ಪ**
**ಬಡವಾಣೆ ಕೋಲಾರ.**

DDPI Office Kolar Dist.

**ನಿಮ್ಮನ್ನು ಕೋಲಾರದ ಜನತಾ ಪ್ರೌಢಶಾಲೆಯ "ಪ್ರಾರ್ಥನಾ" ಎಂದು ಭಾವಿಸಿಕೊಂಡು ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಭದ್ರಾವತಿಯ ನೇತಾಜಿ ನಗರದಲ್ಲಿ ವಾಸವಾಗಿರುವ "ವನಿತ" ಎಂಬ ಹೆಸರಿನ ತಾಯಿಯವರಿಗೆ ಒಂದು ಪತ್ರ ಬರೆಯಿರಿ**

**ಕ್ಷೇಮ** **ಶ್ರೀ** **ದಿನಾಂಕ:**

ಮಾತೃಶ್ರೀ ತಾಯಿಯವರಿಗೆ ನಿಮ್ಮ ಮಗಳಾದ ಪ್ರಾರ್ಥನಾ ಆದ ನಾನು ಬೇಡುವ ಆಶೀರ್ವಾದಗಳು ನಾನು ಇಲ್ಲಿ ದೇವರ ಅನುಗ್ರಹದಿಂದ ಚೆನ್ನಾಗಿದ್ದೇನೆ. ತಾವು ಕೂಡ ಆರೋಗ್ಯವಾಗಿದ್ದೇರೆಂದು ಭಾವಿಸಿರುತ್ತೇನೆ ಏಕೆಂದರೆ ಈಗ ಎಲ್ಲಾ ಕಡೆಯೂ ಕೊರೊನಾ ಎಂಬ ಮಾಹಾಮರಿ ಸೋಂಕು ಇಡೀ ವಿಶ್ವವನ್ನೇ ಬೆಚ್ಚಿ ಬೀಳಿಸಿತು ಆದ್ರಿಂಧ ನೀವು ಮನೆಯಿಂದ ಹೊರಗಡೆ ಹೂಗುವಾಗ ಕೈಗೆ ಸ್ಯಾನಿಟೈಜರ್, ಮುಖಕ್ಕೆ ಮುಖಕವಚ, ಧರಿಸಿ ಹೋಗಬೇಕಾಗಿ ವಿನಂತಿಸಿಕೊಳ್ಳುತ್ತೇನೆ.
ನಾನು ಸಹ ಶಾಲೆಯಲ್ಲಿ ಉತ್ತಮವಾಗಿ ಅಭ್ಯಾಸ ಮಾಡುತ್ತಿದ್ದೇನೆ. ನಮ್ಮ ಶಾಲೆಯಲ್ಲಿ ಎಲ್ಲಾ ಶಿಕ್ಷಕರು ಅತ್ಯುತ್ತಮವಾಗಿ ಪಾಠ ಪ್ರವಚನಗಳನ್ನು ಮಾಡುತ್ತಿದ್ದಾರೆ, ನಾನು ನಮ್ಮ ಶಾಲೆಯಲ್ಲಿ ನಡೆದ ರೂಪಣಾತ್ಮಕ ಮೌಲ್ಯಮಾಪನದಲ್ಲಿ 'ಎ' ದರ್ಜೆಯಲ್ಲಿ ಉತ್ತೀರ್ಣಳಾಗಿರುತ್ತೇನೆ. ನಾನು ಪ್ರತಿ ದಿವಸ ಬೆಳಗ್ಗೆ 5 ಗಂಟೆಯಿಂದ ರಾತ್ರಿ 10 ಗಂಟೆಯವರಿಗೆ ನಿರಂತರವಾಗಿ ಅಭ್ಯಾಸ ಮಾಡುತ್ತಿದ್ದೇನೆ.ನಮ್ಮ ಶಾಲೆಯಲ್ಲಿ ಸಂಜೆ 4 ಗಂಟೆಯಿಂದ 6 ಗಂಟೆಯವರೆಗೆ ಸಾಮಾಜಿಕ ಅಂತರ ಕಾಯ್ದುಕೊಂಡು ಅಭ್ಯಾಸ ಮಾಡಿಸುತ್ತಿದ್ದಾರೆ. ಇದು ನನ್ನ ಅಭ್ಯಾಸಕ್ಕೆ ಮತ್ತು ಹೆಚ್ಚು ಅಂಕಗಳಿಸಲು ಪ್ರಯೋಜನಾವಗುತ್ತಿದೆ. ನಾನು ಈ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ದರ್ಜೆಯಲ್ಲಿ ಪಾಸಾಗುತ್ತೇನೆ ಇನ್ನು ಹೆಚ್ಚಿನ ವಿಷಯಕ್ಕೆ ಮುಂದಿನ ಪತ್ರದಲ್ಲಿ ತಿಳಿಸಿಸುತ್ತೇನೆ.

**ಧನ್ಯವಾದಗಳೊಂದಿಗೆ,**

**ಇವರಿಗೆ**
**ವನಿತ**
**ನೇತಾಜಿನಗರ**
**ಭದ್ರಾವತಿ, ತಾಲ್ಲೂಕು ಮತ್ತು ಜಿಲ್ಲೆ**
**ತಾಲ್ಲೂಕು &ಜಿಲ್ಲೆ**

**ಇಂತಿ ನಿಮ್ಮ ಪ್ರೀತಿಯ ಮಗಳು**
**ಪ್ರಾರ್ಥನಾ**
**10ನೇ ತರಗತಿ**
**ಜನತಾ ಪ್ರೌಢಶಾಲೆ ಕೋಲಾರ**

DDPI Office Kolar Dist.

**ಉದಾಹರಣೆ ಪತ್ರಗಳು/ ವ್ಯವಹಾರಿಕ ಪತ್ರಗಳು**

ನಿಮ್ಮನ್ನು ಕೋಲಾರ ನಗರದ ನಿವಾಶಿಯಾದ ನವನೀತ/ಮಲ್ಲಿಕಾ ಎಂದು ಭಾವಿಸಿಕೊಂಡು ಕೆಲವೊಂದು ಬಡಾವಣೆಯಲ್ಲಿರುವ ರಸ್ತೆಗಳನ್ನು ದುರಸ್ತಿಪಡಿಸುವಂತೆ ಕೋರಿ ಅಧ್ಯಕ್ಷರು, ಜಿಲ್ಲಾಪಂಚಾಯಿತ್ ರವರಿಗೆ ಮನವಿ ಪತ್ರವೊಂದನ್ನು ಬರೆಯಿರಿ.

ನಿಮ್ಮನ್ನು ಬೆಂಗಳೂರಿನ ಜಯನಗರ ನಿವಾಸಿಯಾದ ಬ್ರಿಜೇಶ್ ಎಂದು ಭಾವಿಸಿಕೊಂಡು ನೀರಿನ ತೊಂದರೆ ಇರುವುದಾಗಿ ತಿಳಿಸಿ, ಈ ಈ ಸಮಸ್ಯೆಯನ್ನು ಬಗೆಹರಿಸುವಂತೆ ಬೆಂಗಳೂರಿನ ಜಲಮಂಡಳಿಯ ಅಧ್ಯಕ್ಷರಿಗೆ ಪತ್ರ ಬರೆಯಿರಿ

ನಿಮ್ಮನ್ನು ಕೋಲಾರ ನಗರದ ಪಿ.ಸಿ.ಬಡಾವಣೆ ನಿವಾಸಿಯಾದ 'ಆಶ್ವಿನ್' ಎಂದು ಭಾವಿಸಿಕೊಂಡು ಕೋವಿಡ್–19 ಸೋಂಕು ಅಥವಾ ಕೊರೋನಾ ಮುಂಜಾಗೃತ ಕ್ರಮಗಳ ಬಗ್ಗೆ, ಜನಜಾಗೃತಿ ಮೂಡಿಸುವಂತೆ ಕೋಲಾರ ನಗರದ ಆರೋಗ್ಯ ಇಲಾಖೆಗೆ ಮನವಿ ಪತ್ರ ಬರೆಯಿರಿ.

ನಿಮ್ಮ ಊರಿಗೆ ಗ್ರಂಥಾಲಯವೊಂದನ್ನು ಮಂಜೂರು ಮಾಡಿಕೊಡುವಂತೆ ಕೋರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೊಂದು ಅರ್ಜಿ ಬರೆಯಿರಿ.

ನಿಮ್ಮನ್ನು ಮಾಲೂರಿನ ಸರ್ಕಾರಿ ಪ್ರೌಢಶಾಲೆಯ "ಆಶಾ" ಎಂದು ಭಾವಿಸಿಕೊಂಡು ಶಾಲಾ ಆವರಣದಲ್ಲಿ ಗಿಡಗಳನ್ನು ನೆಡಲು ಉಚಿತ ಸಸಿಗಳನ್ನು ನೀಡುವಂತೆ ಕೋರಿ, ವಲಯ ಅರಣ್ಯಾಧಿಕಾರಿಗಳಿಗೆ ಪತ್ರವನ್ನು ಬರೆಯಿರಿ.

DDPI Office Kolar Dist.

**ವೈಯಕ್ತಿಕ ಪತ್ರಗಳು**

ನಿಮ್ಮನ್ನು ಶ್ರೀನಿವಾಸಪುರ ಸಕಾರಿ ಪ್ರೌಢಶಾಲೆಯ ನಾಗಕಿಶೋರ್/ನಾಗಿಣಿ ಎಂದು ಭಾವಿಸಿಕೊಂಡು ಶಾಲೆಯಲ್ಲಿ ನಡೆಯುವ ಮಾತೆಯರ ಸಭೆಯಲ್ಲಿ ಪಾಲ್ಗೊಳ್ಳುವಂತೆ ವಿನಂತಿಸಿ ಚಿಕ್ಕಮಂಗಳೂರಿನ ವಾಸಿರುವ "ಗಾಯತ್ರಿ" ಎಂಬ ಹೆಸರಿನ ತಾಯಿಗೆ ಪತ್ರ ಬರೆಯಿರಿ.

ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಶಿಡ್ಲಘಟ್ಟ ಶಾಲೆಯ 'ಕೀರ್ತಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ "ಸ್ವಾತಂತ್ರ್ಯ ದಿನಾಚರಣೆ" ಸಮಾರಂಭವನ್ನು ಕುರಿತು ಹಾವೇರಿಯಲ್ಲಿರುವ ನಿಮ್ಮ ಮಿತ್ರನಾದ "ಸಂಜಯ್" ರವರಿಗೆ ಪತ್ರ ಬರೆಯಿರಿ.

ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಕೆ.ಜಿ.ಎಫ್ ಶಾಲೆಯ "ಮೂರ್ತಿ" ಎಂದು ಭಾವಿಸಿಕೊಂಡು ವಾರ್ಷಿಕ ಪರೀಕ್ಷೆಯ ಪೂರ್ಣ ತಯಾರಿಯನ್ನು ಕುರಿತು ಗಹಾವೇರಿಯ ಎನ್.ಆರ್.ಬಡಾವಣೆಯಲ್ಲಿ ವಾಸವಾಗಿರುವ "ಶ್ರೀರಂಗಪ್ಪ" ಎಂಬ ನಿಮ್ಮ ಚಿಕ್ಕಪ್ಪ ನವರಿಗೆ ಒಂದು ಪತ್ರ ಬರೆಯಿರಿ.

ಭೂಮಿಕ 10ನೇ ತರಗತಿ ಸರ್ಕಾರಿ ಪ್ರೌಢಶಾಲೆ ಧಾರವಾಡ ಎಂದು ಭಾವಿಸಿಕೊಂಡು ಹುಟ್ಟು ಹಬ್ಬಕ್ಕೆ ಆಮಂತ್ರಿಸಿ ಶಿವಮೊಗ್ಗದಲ್ಲಿರುವ ಅಣ್ಣನಿಗೊಂದು ಪತ್ರ ಬರೆಯಿರಿ.

ನಿಮ್ಮನ್ನು ಮಾಲೂರಿನ ಬಾಪೂಜಿ ಪ್ರೌಢಶಾಲೆಯ "ತೇಜಸ್ವಿನಿ" ಎಂದು ಭಾವಿಸಿಕೊಂಡು ಚಿಂತಾಮಣಿಯ ರಾಜೀವ್ ನಗರ ಬೀದಿಯ ನಿವಾಸಿ "ರೋಸಲೀನ್' ಎಂಬ ಹೆಸರಿನ ತಾಯಿಗೆ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮನವಿ ಪತ್ರ ಬರೆಯಿರಿ.

DDPI Office Kolar Dist.

**ಪ್ರಬಂಧಗಳು**

‘ಪ್ರಾಕೃತಿಕ ವಿಕೋಪಗಳ ನಿರ್ವಹಣೆ’.

‘ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ’

‘ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು’

‘ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಕಂಪ್ಯೂಟರ್ ಶಿಕ್ಷಣದ ಮಹತ್ವ’

‘ಸ್ವಚ್ಛಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ’

‘ಜಾಗತಿಕತಾಪಮಾನದ ಪರಿಣಾಮ’

‘ಮಹಿಳಾ ಸಬಲೀಕರಣ’

‘ಅಂತರ್ಜಲ ಮರುಪೂರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳು’

‘ರಾಷ್ಟೀಯ ಭಾವೈಕ್ಯತೆ’

‘ಪ್ರೌಢಶಾಲಾ ಶಿಕ್ಷಣದಲ್ಲಿ ವೈಜ್ಞಾನಿಕ ಮನೋಭಾವ ಬೆಳಸಿಕೊಳ್ಳಲು ದೊರಕುವ ಅವಕಾಶಗಳು’

‘ರಾಷ್ಟ್ರೀಯ ಹಬ್ಬಗಳ ಮಹತ್ವ’

‘ಗ್ರಂಥಾಲಯಗಳ ಮಹತ್ವ’

‘ಸಾಮಾಜಿಕ ಪಿಡುಗುಗಳು’

‘ಗ್ರಾಮಸ್ವರಾಜ್ಯ’

‘ತ್ಯಾಜ್ಯ ವಸ್ತು ನಿರ್ವಹಣೆ’

‘ಲಲಿತ ಕಲೆಗಳು’

‘ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ’

‘ಸಾವಯುವ ಕೃಷಿ ಪದ್ದತಿ’

‘ಮಹಾಮಾರಿ ಕೊರೊನಾ(ಕೋವಿಡ್–19)’

‘ಜ್ಞಾನಭಿವೃದ್ಧಿಯಲ್ಲಿ ಮೊಬೈಲ್‌ಗಳ ಪಾತ್ರ’

‘ಪರಿಸರ ಮಾಲಿನ್ಯ ಹಾಗೂ ನಿಯಂತ್ರಣ’

‘ರೈತರ ಆತ್ಮಹತ್ಯೆಗೆ ಕಾರಣಗಳು ಹಾಗೂ ಪರಿಹಾರಗಳು’

‘ಕ್ರೀಡೆಗಳ ಮಹತ್ವ’

‘ಬಾಲಕಾರ್ಮಿಕ ಪದ್ಧತಿ’

‘ಆನಸಂಖ್ಯಾ ಸ್ಫೋಟದ ಕಾರಣ ಪರಿಣಾಮ & ಪರಿಹಾರೋಪಾಯಗಳು’

‘ಸಮಾಚಾರ ಪ್ರತಿಕೆಗಳು’

‘ಮಂಗಳನ ಅಂಗಳದಲ್ಲಿ ಮಾನವ’

‘ಶೈಕ್ಷಣಿಕ ಪ್ರವಾಸದ ಮಹತ್ವ’

‘ಕರ್ನಾಟಕದ ನದಿ ನೀರಿನ ಸಮಸ್ಯೆಗಳು’

‘ಪ್ರಾಕೃತಿಕ ಸಂಪತ್ತಿನ ರಕ್ಷಣೆಯಲ್ಲಿ ಯುವ ಜನತೆಯ ಪಾತ್ರ’

DDPI Office Kolar Dist.

***ತ್ಯಾಜ್ಯ ವಸ್ತು ನಿರ್ವಹಣೆ***

**ಪೀಠಿಕೆ:–** ತ್ಯಾಜ್ಯ ವಸ್ತು ಎಂದರೆ ತ್ಯಜಿಸಿದ ವಸ್ತು ಎಂದು ಅರ್ಥೈಸಬಹುದು. ಮಾನವ ಬಳಸಿಬಿಟ್ಟ ಅನುಪಯುಕ್ತ ವಸ್ತುಗಳಲ್ಲಿ ತ್ಯಾಜ್ಯವಸ್ತುಗಳಲ್ಲಿ ಸೇರ್ಪಡೆಯಾಗುತ್ತವೆ. ಇವುಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಅಥವಾ ಮರುಬಳಕೆ ಮಾಡುವುದನ್ನು ನಿರ್ವಹಣೆ ಎಂದು ಹೇಳಬಹುದು. ತ್ಯಾಜ್ಯ ವಸ್ತುಗಳು ಕೆಲವೊಂದು ಸಾರಿ ಪರಿಸರವನ್ನು ಕಲುಷಿತಗೊಳಿಸವುದರೊಂದಿಗೆ ಮಾನವ ಸೇರಿದಂತೆ ಇತರೇ ಜೀವಿಗಳ ಅನಾರೋಗ್ಯಕ್ಕೆ ಕಾರಣವಾಗುತ್ತವೆ. ಆದ್ದರಿಂದ ಅವುಗಳ ಸರಿಯಾದ ನಿರ್ವಹಣೆ ಮಾಡುವುದು ಅತಿ ಅವಶ್ಯವಾದದ್ದು ಎಂದು ಹೇಳಬಹುದು.

**ನಿರೂಪಣೆ:–** ಆರೋಗ್ಯಕರ ವಾತವರಣಕ್ಕೆ ತ್ಯಾಜ್ಯವಸ್ತುಗಳ ನಿರ್ವಹಣೆ ಬಹಳ ಮುಖ್ಯವಾಗಿರುತ್ತದೆ. ತ್ಯಾಜ್ಯವಸ್ತುಗಳು ಕೆಲವೊಂದು ಸಾರಿ ಮರುಬಳಕೆಗೆ ಯೋಗ್ಯವಾಗಿರುತ್ತದೆ, ಅಂತಹ ವಸ್ತುಗಳನ್ನು ಮರುಬಳಕೆ ಮಾಡಿಕೊಳ್ಳಬೇಕು ಸರ್ಕಾರಗಳು ಸ್ಥಳಿಯ ಸಂಸ್ಥೆಗಳು ಹಾಗೂ ತ್ಯಾಜ್ಯವಸ್ತು ಉತ್ಪಾದಿಸುವ ಖಾಸಗಿ ಸಂಸ್ಥೆಗಳು ಕೈಗಾರಿಕೆಗಳು, ತ್ಯಾಜ್ಯವಸ್ತು ನಿರ್ವಹಣಾ ಘಟಕಗಳನ್ನು ಸ್ಥಾಪಿಸಿ ಸೂಕ್ತವಾಗಿ ನಿರ್ವಹಣೆ ಮಾಡಬೇಕು. ತ್ಯಾಜ್ಯವಸ್ತುಗಳನ್ನು ಘನ ಮತ್ತು ದ್ರವ ತ್ಯಾಜ್ಯವಸ್ತುಗಳನ್ನಾಗಿ ಸೂಕ್ತ ರೀತಿಯಲ್ಲಿ ಬೇರ್ಪಡಿಸಿ ವಿಲೇವಾರಿ ಮಾಡಬೇಕು ಸಾಧ್ಯವಾದಲ್ಲಿ ಮರುಬಳಕೆಗೆ ಮೊದಲ ಆದ್ಯತೆ ನೀಡಬೇಕು.

ದೊಡ್ಡ ದೊಡ್ಡ ನಗರಗಳಲ್ಲಿ ಕಸದ ಸಮಸ್ಯೆ ದೊಡ್ಡದೆ ಆಗಿದೆ. ಪ್ಲಾಸ್ಟಿಕ್, ಫೈಬರ್, ರಬ್ಬರ್, ಗಾಜು ಕಬ್ಬಿಣ ಮತ್ತು ಇತರ ಲೋಹದ ತ್ಯಾಜ್ಯವಸ್ತುಗಳನ್ನು ಮರುಬಳಕೆ ಮಾಡಿಕೊಂಡಲ್ಲಿ ಕಸದ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ದೂರಮಾಡಬಹುದು, ತ್ಯಾಜ್ಯ ವಸ್ತುಗಳನ್ನು ಬಳಸಿಕೊಂಡು ಆಲಂಕಾರಿಕ ವಸ್ತುಗಳು ಇತರೆ ಗೃಹಬಳಕೆಯ ವಸ್ತುಗಳನ್ನು ತಯಾರಿಸಬಹುದು ಕೆಲವೊಂದು ತ್ಯಾಜ್ಯವಸ್ತುಗಳನ್ನು ಸುಡುವುದರಿಂದ ಊತು ಹಾಕುವುದರಿಂದ ಕೆಲವು ವಿಷಕಾರಿ ರಾಸಾಯನಿಕ ಅನಿಲಗಳು ಬಿಡುಗಡೆಯಾಗಿ ಪರಿಸರ ಮಾಲಿನ್ಯ ಉಂಟಾಗಿ ಜಿವಿಗಳ ಆರೋಗ್ಯದ ಮೇಲೆ ವ್ಯಕ್ತರಿಕ್ತ ಪರಿಣಾಮ ಬೀರುತ್ತವೆ.ಆದ್ದರಿಂದ ಹಾನಿಕಾರಕ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ಪರಿಸರಕ್ಕೆ ಮತ್ತು ಜೀವಿಗಳಿಗೆ ಹಾನಿ ಮಾಡದಂತೆ ನಿರ್ವಹಣೆ ಮಾಡಿದರೆ ಒಳಿತು.

**ಉಪಸಂಹಾರ:–** ಪ್ರತಿಯೊಬ್ಬರಲ್ಲಿ ತ್ಯಾಜ್ಯ ವಸ್ತುಗಳ ನಿರ್ವಹಣೆ ಹೇಗೆ ಮಾಡಬೇಕು ಎಂಬುದರ ಬಗ್ಗೆಅರಿವು ಮೂಡಿಸಬೇಕು. ಅರಿವು ಮೂಡಿಸುವುದರ ಮೂಲಕ ನಿರ್ವಹಣೆ ಸುಲಭವಾಗುತ್ತದೆ, ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಆದ್ದರಿಂದ ನಮ್ಮಿಂದ ಉಂಟಾಗುವ ತ್ಯಾಜ್ಯವಸ್ತುಗಳನ್ನು ಸೂಕ್ತರೀತಿಯಲ್ಲಿ ಮುರುಬಳಕೆ ಮತ್ತು ವಿಲೇವಾರಿ ಮಾಡಿದ್ದಲ್ಲಿ ಪರಿಸರ ಸಂರಕ್ಷಣೆ ನಮ್ಮ ಆರೋಗ್ಯ ರಕ್ಷಣೆ ಎಂದು ಹೇಳಬಹುದು.

DDPI Office Kolar Dist.

*ಬಾಹ್ಯಾಕಾಶ ಯೋಜನೆಯಲ್ಲಿ ಭಾರತದ ಸಾಧನೆ*

ಪೀಠಿಕೆ:-ಮಾನವ ಸಾವಿರಾರು ವರ್ಷಗಳ ಹಿಂದಿನಿಂದ ತನ್ನ ಸುತ್ತಮುತ್ತಲು ನಡೆಯುವ ನೈಸರ್ಗಿಕ ಪ್ರಕ್ರಿಯೆಗಳ ಬಗ್ಗೆ ಕುತೂಹಲ ಬೆಳಸಿಕೊಂಡು ಅವುಗಳನ್ನು ಗಮನಿಸಿ ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಾ ಬಂದಿದ್ದಾನೆ. ಮಾನಹೆ ಕುತೂಹಲವನ್ನು ಕೆರಳಿಸದ ಬಹು ಮುಖ್ಯೌಆದ ಕ್ಷೇತ್ರ ಆಕಶಾ. ಈ ಆಕಾಸದಲ್ಲಿನ ಸೂರ್ಯ ಮೊದಲಾದ ನಕ್ಷತ್ರಗಳು, ಮಂಗಳ,ಶುಕ್ರ, ಗ್ರಹಗಳು, ಚಂದ್ರ, ಮೊದಲಾದ ಉಪಗ್ರಹಗಳು, ಉಲ್ಕೆ, ಧೂಮಕೇತು, ಇತ್ಯಾದಿ ಆಕಾಶಕಾಯಗಳಲ್ಲಿ ನಡೆಯುವ ವಿಸ್ಮಯಗಳ ಆಕರ್ಷಣೆಯಿಂದ ಆನೇಕ ಕೃತಕ ಉಪಗ್ರಹಗಳು, ಆಕಾಶ ನೌಕೆ, ದೂರದರ್ಶಕ ಮುಂತಾದಪ್ರಾಯೋಗಿಕ ಮತ್ತು ಬಹುಪಯೋಗಿ ತಂತ್ರಜ್ಞಾನವನ್ನು ಜಗತ್ತಿನ ಹಲವಾರು ದೇಶಗಳು ಬಳಸುವಂತೆ ಮಾಡಿವೆ. ಇಂತಹ ಬಾಹ್ಯಕಾಶದ ಆಧ್ಯಯನ ಮತ್ತು ತಂತ್ರಜ್ಞಾನದ ಬಳಕೆಯಲ್ಲಿ ಭಾರತ ಅತ್ಯಂತ ಮೂಂಚೂಣಿಯಲ್ಲಿದೆ. ಎಂಬುದು ಅಂತ್ಯತ ಹೆಮ್ಮೆಯ ಸಂಗತಿಯಾಗಿದೆ.

ವಿಷಯ ನಿರೂಪಣೆ:- ಭಾರತದಲ್ಲಿ ಬಾಹ್ಯಕಾಶ ತಂತ್ರಜ್ಞಾನವನ್ನು ಹುಟ್ಟು ಹಾಕಿದವರು ವಿಕ್ರಮ್ ಸಾರಾಬಾಯಿ ಭಾರತದಂತಹ ಪ್ರಗತಿಪರ ರಾಷ್ಟ್ರಕ್ಕೆ ಇದು ಅವಶ್ಯವಾದ ಮತ್ತು ಬಹುಪಯೋಗಿ ಎಂದು ತೋರಿಸಕೊಟ್ರು. 1963 ರಲ್ಲಿ ಭಾರತೀಯ ಬಾಹ್ಯಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರವನ್ನು ತೆರೆಯುವುದರ ಮೂಲಕ ಬಾಹ್ಯಕಾಶ ಯೋಜನೆಗಳಿಗೆ ಹೊಸತಿರುವುನ್ನು ನೀಡಲಾಯಿತು. 1967 ರಲ್ಲಿ ಭಾರತದ ಪ್ರಪ್ರಥಮ ರಾಕೇಟ್ ರೋಹಿಣಿ-75ನ್ನು ಗಗನಕ್ಕೆ ಹಾರಿಸುವುದರ ಮೂಲಕ ಇತಿಹಾಸ ನಿರ್ಮಿಸಿತು. ನಂತರ 1969ರಲ್ಲಿ ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ ಇಸ್ರೋ ಜನ್ಮತಾಳಿತು. ಬೃಹತ್ ರಾಕೇಟ್ ಗಳನ್ನು ತಯಾರಿಸುವ ಮತ್ತು ಹಾರಿಸುವ ಸಂಶೋಧನೆಯಲ್ಲಿ ಇಸ್ರೋ ವಿಜ್ಞಾನಿಗಳು ಯಶ್ವಿಸಿಯಾದರು ಇಸ್ರೋದ ಕಾರ್ಯ ಅಮೂಲ್ಯವಾದವು ಉಪಗ್ರಹ ತಂತ್ರಜ್ಞಾನ ಬಾಹ್ಯಕಾಶ ಹಾಗೂ ಸೌರಭೌತಶಾಸ್ತ್ರ ಆಧ್ಯಯನ ಹಾಗೂ ಪ್ರಯೋಗಗಳನ್ನು ಒಳಗೊಂಡ ಭಾತರದ ಪ್ರಪ್ರಥಮ ಉಪಗ್ರಹ ಆರ್ಯಭಟ ಉಪಗ್ರಹವನ್ನು ಃಆರಿಸುವುದರ ಮೂಲಕ ಭಾರತದ ಆಂತರಿಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನೆಯಲ್ಲಿ ಮಹತ್ವದ ಮೈಲಿಗಲ್ಲನ್ನು ಸ್ಥಾಪಿಸಿತು. ಭಾರತ ದೇಶವು ಬಾಹ್ಯಕಾಶ ಸಂಶೋಧನೆ ಮತ್ತು ತಂತ್ರಜ್ಞಾನ ಸಂಶೋಧನೆಯಲ್ಲಿ ಮಹತ್ವದ ಮೈಲಿಗಲ್ಲನ್ನು ಸ್ಥಾಪಿಸಿತು.

ಭಾರತ ದೇಶವು ಬಾಹ್ಯಾಕಾಶ ಸಂಶೋಧನೆ ಮತ್ತು ತಂತ್ರಜ್ಞಾನದ ಬಳಕೆಯಿಂದ ದೂರಸಂ ದೂರಸಂವೇದಿ, ದೂರಸಂಹನ,ದೂರಸಂಪರ್ಕ,ಹವಾಮಾನ,ದೂರದರ್ಶನ, ಆಕಾಶವಾಣಿ, ಪ್ರಸಾರ,ನಕ್ಷೆಗಳ ರಚನೆ,ಶಿಕ್ಷಣ, ವೈದ್ಯಕೀಯ,ದೇಶದ ರಕ್ಷಣ,ಮುಂತಾದ ಹತ್ತಾರು ಕ್ಷೇತ್ರಗಳು ಜನೋಪಯೋಗಿ ಪರಿಣಾಮಗಳನ್ನು ಬೀರುತ್ತಿವೆ.ಇಂದು ನಾವು ಹಳ್ಳಿಯ ರೈತರಿಂದ ಹಿಡಿದು ನಗರದ ಜನರ ಕೈಯಲ್ಲಿ ಮೊಬೈಲ್ ಪೋನುಗಳು, ಮನೆಗಳಲ್ಲಿ ಟಿವಿಗಳು ಕಂಪ್ಯೂಟರ್ ಬಳಕೆಯನ್ನು ನೋಡುತ್ತಿದ್ದೇವೆ, ಇಡೀ ಜಗತ್ತೇ ಅಂಗೈಯಲ್ಲಿದೆ ಎಂದರೆ ತಪ್ಪಾಗಲಾರದು ಇವೆಲ್ಲ ಬಾಹ್ಯಕಾಶ ಯೋಜನೆಯ ತಂತ್ರಜ್ಞಾನದ ಫಲಗಳಾಗಿವೆ.

ಉಪಸಂಹಾರ:- ಭಾರತೀಯ ಬಾಹ್ಯಕಾಶ ತಂತ್ರಜ್ಞಾನ ಜಗತ್ತಿನಲ್ಲಿಯೇ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದೆನಿಸಿದೆ.ಅಂತರಾಷ್ಟ್ರೀಯ ಸಂಸ್ಥೆಗಳು ಅಮೇರಿಕಾ, ಜರ್ಮನಿ ಜಪಾನ್ ದೇಶಗಳು ಕೂಡ ಇಸ್ರೋದೊಂದಿಗೆ ಒಡಂಬಡಿಕೆ ಮಾಡಿಸಿಕೊಂಡು ನಮ್ಮ ದೇಶದ ತಂತ್ರಜ್ಞಾನವನ್ನು ಪಡೆಯುತ್ತಿವೆ. ಎಂದು ಹೇಳಲು ಹೆಮ್ಮೆಎನಿಸಿದೆ. ವಿಶ್ವದ ಯಾವ ರಾಷ್ಟ್ರವೂ ಚಂದ್ರನ ಮತ್ತೊಂದು ಪಾರ್ಶ್ವಮುಖವಾದ ದಕ್ಷಿಣ ಧ್ರುವವನ್ನು ಅಧ್ಯಯನ ಮಾಡಲ್ಲ ಆದರೆ ಭಾರತವೂ ಇದರ ಅಧ್ಯಯನಕ್ಕಾಗಿಯೋ ಇತ್ತೀಚಿಗೆ ನಡೆದ ಚಂದ್ರಯಾನ-2 ಮತ್ತು ಮಳಗಳಯಾನ ಯೋಜನೆಯನ್ನು ಗಮನಿಸಿದರೆ ಭಾರತ ಇಡೀ ವಿಶ್ವಕ್ಕೆ ತನ್ನ ಜಾಣ್ಮೆ ಮತ್ತು ದೃಢತೆಯನ್ನು ತೆರೆದಿಟ್ಟಿದೆ ಎಂದು ಹೇಳಬಹುದು ಭಾರತೀಯರು ನಿರಂತರ ಸಂಶೋಧನೆಯಲ್ಲಿ ತೋರುವ ಉತ್ಸಾಹಕ್ಕೆ ನಾವೆಲ್ಲರೂ ಅಭಾರಿಯಾಗಬೇಕಾಗಿದೆ.

DDPI Office Kolar Dist.

**ಪ್ರಬಂಧಗಳು**

***ಮಹಾಮಾರಿ ಕೊರೋನಾ(ಕೋವಿಡ್–19)***

**ಪೀಠಿಕೆ:** ವಿಶ್ವದಲ್ಲೇ ಮೊದಲ ಬಾರಿಗೆ ಕ್ರಿ.ಶ 2019 ರ ಡಿಸೆಂಬರ್‌ನಲ್ಲಿ ಚೀನಾ ದೇಶದ ಮಹಾನ್ ನಗರದಲ್ಲಿ ಮಹಾಮಾರಿ 'ಕೊರೊನಾ' ಎನ್ನುವ ಸೋಂಕು ರೋಗ ಪತ್ತೆಯಾಗಿ ಇಡೀ ವಿಶ್ವವನ್ನೇ ತಲ್ಲಣಗೊಳಿಸಿತು, ಪ್ರಪಂಚದ್ಯಾದ್ಯಂತ ಕೋಟ್ಯಾಂತರ ಜನರು ಮಹಾಮಾರಿ ಕೊರೊನಾ ಸಾಂಕ್ರಾಮಿಕ ರೋಗದಿಂದ ಬಳಲಿದರು, ಲಕ್ಷಾಂತರ ಜನರು ದುರ್ಮರಣಕ್ಕೆ ಈಡಾದರು. ಪ್ರಪಂಚದ ಎಲ್ಲಾ ದೇಶಗಳು ಜನರನ್ನು ಕೊರೊನಾದಿಂದ ರಕ್ಷಿಸಲು 'ಲಾಕ್‌ಡೌನ್' ಘೋಷಣೆ ಮಾಡಿದವು ಇದರಿಂದ ಕೋಟ್ಯಾಂತರ ಜನರು ಉದ್ಯೋಗ ಕಳೆದುಕೊಂಡರು ಉದ್ಯಮಗಳು ನಷ್ಟದಿಂದ ಮುಚ್ಚಲ್ಪಟ್ಟವು. ಎಲ್ಲ ದೇಶಗಳ ಆರ್ಥಿಕ ಪರಿಸ್ಥಿತಿಯೂ ಹದಗೆಟ್ಟಿತು. ಇದರಿಂದಾಗಿ ಜಗತ್ತಿನ ಇತಿಹಾಸದಲ್ಲಿ ಕ್ರಿ.ಶ.2020ನೇಯ ಇಚಸವಿಯನ್ನು ಒಂದು 'ಕರಾಳವರ್ಷ' ಎಂದು ಕರೆಸಿಕೊಂಡಿತು. **ವಿಷಯ ನಿರೂಪಣೆ:** ಕೊರೊನಾ ಎನ್ನುವುದು ವೈರಸ್ಸಿನಿಂದ ಬರುವ ಒಂದು ಸೋಂಕು ರೋಗ, ಈ ವೈರಸ್‌ನಲ್ಲಿ ಕೀರಿಟದಲ್ಲಿ ಇರುವಂತಹ ಮುಳ್ಳುಗಳಂತಹ ರಚನೆಗಳು ಇರುವುದರಿಂದ 'ಕೊರೊನಾ; ಎನ್ನುವ ಹೆಸರು ಬಂದಿದೆ. 'ಕೊರೊನಾ' ಎಂದರೆ'ಲ್ಯಾಟೀನ್' ಭಾಷೆಯಲ್ಲಿ 'ಕೀರಿಟ' ಎಂಬ ಅರ್ಥ. ವಿಶ್ವ ಆರೋಗ್ಯ ಸಂಸ್ಥೆಯು ಹೇಳುವಂತೆ ಇದು ಪ್ರಮುಖವಾಗಿ ಉಸಿರಾಟದ ಮೂಲಕ ಹರಡುತ್ತದೆ. ಈ ಸೋಂಕು ಇರುವ ರೋಗಿ ಕೆಮ್ಮಿದಾಗ ಅಥವಾ ಸೀನಿದಾಗ ಹೊರ ಚೆಲ್ಲುವ ಹನಿಗಳ ಮೂಲಕ ಹರಡುತ್ತದೆ. ಈ ಹನಿಗಳು ನೆಲದ ಮೇಲೋ ಇನ್ಯಾವುದರ ವಸ್ತುವಿನ ಮೇಲೋ ಬಿದ್ದಿರುತ್ತದೆ. ಅಂತಹ ವಸ್ತುವನ್ನು ಮುಟ್ಟಿದ ಕೈಯಿಂದಲೇ ನಾವು ಮೂಗು, ಕಣ್ಣು, ಬಾಯಿಯನ್ನು ಮುಟ್ಟಿದಾಗ ಇದು ನಮಗೂ ಹರಡುತ್ತದೆ. ಈ ಕೊರೊನಾ ವೈರಸ್ 'ಬಾವಲಿಗಳಿಂದ' ಬಂದಿರಬೇಕು ಎಂದು ನಂಬಲಾಗಿದೆ ಹಲವು ಕಾರಣಗಳಿಂದ ಕೊರೊನಾದ ಬಗ್ಗೆ ನಾವು ಕಾಳಜಿ ವಹಿಸಬೇಕು ಮೊದಲನೆದಾಗಿ ಇದು ಒಬ್ಬರಿಂದ ಮತ್ತೊಬ್ಬ ವ್ಯಕ್ತಿಗೆ ಸುಲಭವಾಗಿ ಹರಡುವ ಸೋಂಕು ಜೊತೆಗೆ ಇದು ಉಸಿರಾಟದ ತೊಂದರೆಯನ್ನು ಉಂಟುಮಾಡುತ್ತದೆ. ಎರಡನೆಯದಾಗಿ ಸೋಂಕು ತಗುಲಿದ ಕೆಲವರಿಗೆ ಇದು ಮಾರಕವಾಗಿದೆ. ಮೂರನೆಯದಾಗಿ ನಮ್ಮ ದೇಹಕ್ಕೆ ಇದನ್ನು ತೆಯುವ ಸಹಜ ಸಾಮಾರ್ಥ್ಯ ಇಲ್ಲ ಇದನ್ನು ತಡೆಯಬಲ್ಲ ಲಸಿಕೆಗಳು ಇಲ್ಲ ಮತ್ತು ಸದ್ಯಕ್ಕೆ ಅದನ್ನು ಗುಣಪಡಿಸುವ ಔಷಧಿಗಳು ಇಲ್ಲ ಸೋಂಕು ತಗುಲಿದ ಬಹುತೇಕ ಜನರಿಗೆ ಫ್ಲೂ ಬಂದಾಗ ಕಾಣುವಂತಹ

ಲಕ್ಷಣಗಳೇ ಇರುತ್ತವೆ. ಏರು ಜ್ವರ.ಒಣಕೆಮ್ಮು ಮತ್ತು ಸುಸ್ತು ಸಾಮಾನ್ಯ ಕೆಲವರಿಗೆ ಮೈಕೈ ನೋವು ಉಸಿರಾಟದ ತೊಂದರೆ, ಸ್ನಾಯುಗಳು ಹಾಗೂ ಸಂದಿಗಳ ನೋವು, ಗಂಟಲುನೋವು, ತಲೆನೋವು ಚಳಿ ಮತ್ತು ಒಮ್ಮೆಮ್ಮೆ ಭೇದಿ ಕೂಡ ಕಾಣಿಸಬಹುದು.ಈ ಖಾಯಿಲೆ ಮಕ್ಕಳು, ಯುವಕರಿಗಿಂತಲೂ ವಯಸ್ಸಾದವರನ್ನು ಹೆಚ್ಚು ಬಾದಿಸುವಂತೆ ತೋರುತ್ತದೆ. ಆದರೆ ಸಕ್ಕರೆ ರೋಗ, ಹೃದಯ ತೊಂದರೆಗಳು, ಶ್ವಾಸಕೋಶದ ಮತ್ತು ರೋಗ ನಿರೋಧಕ ಶಕ್ತಿ ಕಡಿಮೆ ಇರುವಂತರಲ್ಲಿ ಇದರ ಪರಿಣಾಮ ಹೆಚ್ಚು ಬೀರುತ್ತದೆ.

ಸರ್ಕಾರವು ಈ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ನಿರ್ದೇಶನಗಳನ್ನು ಪಾಲಿಸುತ್ತಿದ್ದು, ಆರೋಗ್ಯ ಸೇವೆಗಳ ಪ್ರತಿಯೊಂದು ಸ್ತರವನ್ನು ಈ ಗುರಿಯತ್ತ ನಿರ್ದೇಶಿಸಿದೆ. ಸೋಂಕಿನ ಸಂಖ್ಯೆಯನ್ನು ಪ್ರತಿದಿನವೂ ಗಣಿಸುವ ಆರೋಗ್ಯ ಮಂತ್ರಾಲಯವು, ವೈದ್ಯರುಗಳು ಹಾಗೂ ಆಸ್ಪತ್ರೆಗಳಿವೆ ರೋಗಿಗಳನ್ನು ಪ್ರತೇಕಿಸಿಟ್ಟು, ಚಿಕಿತ್ಸೆ ನೀಡುವ ಬಗ್ಗೆ, ಸೂಚನೆಗಳನ್ನು ನೀಡುತ್ತದೆ. ಈ ಸೋಂಕು ತಗಲಿರುವ ದೇಶಗಳ ಜನರು ನಮ್ಮ ದೇಶವನ್ನು ಪ್ರವೇಶಿಸಿದಂತೆ ಅವರ 'ವೀಸಾ'ಗಳನ್ನು ರದ್ದುಪಡಿಸಲಾಗಿದೆ. ಸೋಂಕು ಇರಬಹುದು ಎಂಬ ಸಂದೇಹದಿಂದ ಅವರನ್ನು ಪರೀಕ್ಷೆಗಳಪಡಿಸಲಾಗುತ್ತದೆ.

ಉಪಸಂಹಾರ: ನೀರು ಮತ್ತು ಸಾಭೂನು ಇಲ್ಲದಿದ್ದರೆ ಮಧ್ಯಪಾನ ಬೆರೆತ ಸ್ಯಾನಿಟೈಸರ್ ಬಳಸಿ, ನಮ್ಮ ಕೈಯನ್ನು ಚೆನ್ನಾಗಿ ಆಗ ಆಗ ತೊಳೆದುಕೊಳ್ಳಬೇಕು ನಮ್ಮ ಕೈಯಿಂದ ಮುಖವನ್ನು ಮುಟ್ಟುವುದು ಅದಷ್ಟು ತಡೆಯುವುದು ಬಳ್ಳೆಯದು, ಜನಜಂಗುಳಿ ಇರುವ ಕಡೆ ಹೋಗುವುದನ್ನು ಕಡಿಮೆ ಮಾಡಬೇಕು ಸಾಮಾಜಿಕ ಅಂತರ ಕಾಯಬೇಕು, 3 ರಿಂದ 6 ಅಡಿ ದೂರ ಇರುವುದು ಸುರಕ್ಷಿತ, ಕೈ ಕುಲುಕುವುದುನ್ನು ನಿಲ್ಲಿಸಿ ದೂರದಿಂದ ಸಮಸ್ಕರಿಸಿಸುವದು ಉತ್ತಮ ಮಾಸ್ಕ್ ಧರಿಸುವುದರಿಂದ ನಮ್ಮನ್ನು ರಕ್ಷಿಸುವುದಕ್ಕಿತ ಬೇರೆಯವರಿಗೆ ನಮ್ಮಿಂದ ಸೋಂಕು ಹರಡುವುದನ್ನು ತಡೆಯುತ್ತದೆ. ನಮಗೆ ಉಸಿರಾಟದ ತೊಂದರೆ ನಗಡಿ ಇದೆ. ಎಂದೇನಾದರೂ ಅನುಮಾನವಿದ್ದರೆ ಖಂಡಿತ ಮಾಸ್ಕ್ ಬಳಸಬೇಕು, ಹಣ್ಣು–ತರಕಾರಿ, ಸೊಪ್ಪು ತಿಂದು ರೋಗನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಬೇಕು ಇದರ ಬಗ್ಗೆ ಜಾಗೃತಿ ಮೂಢಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

DDPI Office Kolar Dist.